

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 7 ಭಾನುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 229 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಜಾಗ ಸಿಕ್ಕಿಲ್ಲ!

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿಷಾದದ ನುಡಿ
- ಒಂದು ವರ್ಷದಿಂದ ಜಿಲ್ಲಾಧಿಕಾರಿ ಜಾಗ ಹುಡುಕುತ್ತಿದ್ದಾರೆ!
- ರಾಜ್ಯ ಸರ್ಕಾರದ ಬೆಂಬಲವಿಲ್ಲದೆ ಏನೂ ಮಾಡಲಾಗುವುದಿಲ್ಲ

ಮಂಡ್ಯ, ಡಿ.6–ರಾಜ್ಯ ಸರ್ಕಾರದ ಬೆಂಬಲವಿಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಕಳೆದ ಒಂದು ವರ್ಷದಿಂದ ಕೈಗಾರಿಕೆ ಸ್ಥಾಪನೆಗೆ ಜಾಗ ಹುಡುಕಲು ಜಿಲ್ಲಾಧಿಕಾರಿಗೆ ಹೇಳುತ್ತಿದ್ದೇನೆ. ಇನ್ನೂ ಜಾಗ ಸಿಕ್ಕಿಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ತಾಲೂಕಿನ ವಿ.ಸಿ.ಫಾರಂನ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದ 2ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕುಮಾರಸ್ವಾಮಿ ಬೃಹತ್ ಕೈಗಾರಿಕಾ ಸಚಿವರಾಗಿದ್ದಾರೆ. ಜಿಲ್ಲೆಗೆ ಏನಾದರೂ ಕೈಗಾರಿಕೆ ತರಬಹುದು ಎಂಬ ನಿರೀಕ್ಷೆ ಜನರಲ್ಲಿದೆ. ಕನಿಷ್ಠ ಒಂದು ಕಾರ್ಖಾನೆಯನ್ನಾದರೂ ಮಂಡ್ಯಕ್ಕೆ ತರಲು ಸತತ ಪ್ರಯತ್ನ ಮಾಡುತ್ತಿದ್ದೇನೆ. ಆದರೆ, ಇನ್ನೂ ಸರ್ಕಾರ ನಮಗೆ ಜಾಗ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ನನ್ನ ಇಲಾಖೆಯಿಂದ ಸಾಧ್ಯವಾಗುವ ಕೆಲಸಗಳನ್ನು ಮಾಡುತ್ತಿದ್ದೇನೆ. ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ



ಮಂಡ್ಯ ಕೃಷಿ ವಿವಿಯಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮಾತನಾಡಿದರು.

ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ಪುನಶ್ಚೇತನಕ್ಕೆ ಚಿಂತನೆ ನಡೆಸಲಾಗಿದೆ. ಇತ್ತೀಚೆಗೆ ನಾನು ಆ ಕಾರ್ಖಾನೆಗೆ ಎರಡನೇ ಸಲ ಭೇಟಿ ನೀಡಿ ಕಾರ್ಖಾನೆ ಮತ್ತು ನೌಕರರ ಸಮಸ್ಯೆಗಳನ್ನು ಅರಿತಿದ್ದೇನೆ ಎಂದರು.

ಕೃಷಿ ಮೇಳದ ಉದ್ದೇಶ ಪ್ರತಿ ಗ್ರಾಮಕ್ಕೂ ತಲುಪಿದೆ: ಕೃಷಿ ಮೇಳ ಅತ್ಯಂತ ಯಶಸ್ವಿಯಾಗಿದೆ. ಪ್ರತಿ ಗ್ರಾಮಕ್ಕೂ ಈ ಮೇಳದ ಉದ್ದೇಶ ತಲುಪಿದೆ. ಕೇಂದ್ರ ಸರ್ಕಾರವು ಕೃಷಿ ವಲಯಕ್ಕೆ ▶ 6ನೇ ಪುಟಕ್ಕೆ

> “ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಗ್ಯಾರಂಟಿ ಸ್ಕೀಮ್‌ಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಪ್ರತಿ ಗ್ರಾಮ ವ್ಯಾಪ್ತಿಯಲ್ಲಿ ಗೋಡೌನ್, ಕೋಲ್ಡ್ ಸ್ಟೋರೇಜ್ ನಿರ್ಮಾಣವಾಗಬೇಕು. ರೈತ ಬೆಳೆದ ಬೆಳೆಗಳಿಗೆ ಶೇ.75ರಷ್ಟು ಮುಂಗಡ ಹಣವನ್ನು ಸರ್ಕಾರದಿಂದ ಕೊಡಬೇಕು. ಮಾರಾಟ ಮಾಡಿದ ಬಳಿಕ ರೈತ ಮುಂಗಡ ಹಣವನ್ನು ಸರ್ಕಾರಕ್ಕೆ ಕಟ್ಟಬೇಕು. ಆಗ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ. ಇದೆಲ್ಲಾ ನನ್ನ ಮುಂದಿರುವ ಕಾರ್ಯಕ್ರಮಗಳು. ಮುಂದಿನ ದಿನಗಳಲ್ಲಿ ನೀವೆಲ್ಲಾ ಬುದ್ಧಿವಂತರಾದರೆ ನಾನು ಜಾರಿ ಮಾಡಬಹುದು. ಎಂತೆಂತಹ ಸರ್ಕಾರಗಳನ್ನು ನೋಡಿದ್ದೀರಾ, ಮಂಡ್ಯದಂತಹ ಜಿಲ್ಲೆಗಳು ಸೇರಿ 36 ಸೀಟುಗಳನ್ನು ನೀಡಿದ್ದೀರಿ. ಯಾವತ್ತೂ ಪೂರ್ಣ ಪ್ರಮಾಣದ ಸರ್ಕಾರ ನಡೆಯಲು ಅವಕಾಶ ಸಿಕ್ಕಿಲ್ಲ. ಒಂದು ಬಾರಿ ನನಗೆ ಅವಕಾಶ ಕೊಡಿ.
>
> –ಹೆಚ್.ಡಿ.ಕುಮಾರಸ್ವಾಮಿ

ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ?

ಕುಮಾರಸ್ವಾಮಿ ಮನುವಾದಿ ಎಂದ ಸಿದ್ದರಾಮಯ್ಯಗೆ ತಿರುಗೇಟು ಕೊಟ್ಟ ಹೆಚ್‌ಡಿಕೆ

ಮಂಡ್ಯ: ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವಂತೆ ಕೋರಿ ಕೇಂದ್ರದ ಶಿಕ್ಷಣ ಸಚಿವರಿಗೆ ಪತ್ರ ಬರೆದ ತಮ್ಮನ್ನು ಮನುವಾದಿ ಎಂದು ಕರೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ? ಹಾಗಾದರೆ, ಸಿದ್ದರಾಮಯ್ಯ ಅವರು ಮಕ್ಕಳಿಗೆ ಏನು ಬೋಧಿಸಲು ಹೇಳುತ್ತಾರೆ. ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವಂತೆ ಹೇಳಿದ್ದೇನೆ. ಆ ಬಗ್ಗೆ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಪತ್ರವನ್ನೂ ಬರೆದಿದ್ದೇನೆ. ನಾನೇನು ಮತಾಂತರ ಮಾಡಲಿಕ್ಕೆ ಈ ಹೇಳಿಕೆ ನೀಡಿಲ್ಲ. ಇಂದಿನ ಮಕ್ಕಳ ಬದುಕು, ಇವತ್ತಿನ ಸಮಾಜವನ್ನು ಸಿದ್ದರಾಮಯ್ಯ ನೇತೃತ್ವದಲ್ಲಿ ಯಾವ ರೀತಿ ಬೆಳೆಸುತ್ತಿದ್ದಾರೆ. ಇದೆಲ್ಲವನ್ನು ಗಮನಿಸಿ ಹೇಳಿದ್ದೇನೆ ಎಂದು ಟಾಂಗ್ ನೀಡಿದರು. ತಂದೆ–ತಾಯಿ, ಅಣ್ಣ–ತಮ್ಮ ▶ 6ನೇ ಪುಟಕ್ಕೆ

ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿ: ಭಾರತದ ಕೈವಶ



ದಕ್ಷಿಣ ಆಫ್ರಿಕಾ ವಿರುದ್ಧ ಸರಣಿ ಗೆದ್ದು ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮ.

ವಿಶಾಖಪಟ್ಟಣ, ಡಿ.6(ವಿವಿಹೆಚ್)–ಯಶಸ್ವಿ ಜೈಸ್ವಾಲ್ ಶತಕ, ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಅವರ ಅಮೋಘ ಅರ್ಧಶತಕದಾಟದ ಬಲದಿಂದ ದಕ್ಷಿಣ ಆಫ್ರಿಕಾ ವಿರುದ್ಧದ 3ನೇ ಏಕದಿನ ಪಂದ್ಯದಲ್ಲಿ ಭರ್ಜರಿ ಪ್ರದರ್ಶನ ನೀಡಿದ ಭಾರತ ತಂಡ ಪ್ರವಾಸಿ ತಂಡವನ್ನು 9 ವಿಕೆಟ್ ಅಂತರದಿಂದ ಮಣಿಸಿ ಸರಣಿ ಕೈವಶಪಡಿಸಿಕೊಂಡಿದೆ. ಭಾರತ ತಂಡ 3 ಪಂದ್ಯಗಳ ಏಕದಿನ ಸರಣಿಯನ್ನು 2–1 ಅಂತರದಲ್ಲಿ ಗೆದ್ದುಕೊಂಡಿದೆ.

ಇಲ್ಲಿನ ಎಸಿಎ–ವಿಡಿಸಿಎ ಕ್ರೀಡಾಂಗಣದಲ್ಲಿ ನಡೆದ 3ನೇ ಏಕದಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ▶ 6ನೇ ಪುಟಕ್ಕೆ

ರೋಹಿತ್ ಶರ್ಮಾ ಮೈಲಿಗಲ್ಲು



ದಕ್ಷಿಣ ಆಫ್ರಿಕಾ ವಿರುದ್ಧದ 3ನೇ ಏಕದಿನ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಹಿಟ್ ಮ್ಯಾನ್ ರೋಹಿತ್ ಶರ್ಮಾ ಮತ್ತೊಂದು ಮೈಲಿಗಲ್ಲು ಸಾಧಿಸಿದ್ದಾರೆ. ಕ್ರಿಕೆಟ್ ಇತಿಹಾಸದಲ್ಲಿ 20,000 ಅಂತಾರಾಷ್ಟ್ರೀಯ ರನ್ ಗಳಿಸಿದ ಭಾರತದ ನಾಲ್ಕನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಅಧಿಕಾರ ಹಸ್ತಾಂತರ ಬಿಕ್ಕಟ್ಟು ಸೋನಿಯಾ ಮಹತ್ವದ ಸಭೆ



ನವದೆಹಲಿ,ಡಿ.6–ಇಂದು ನವದೆಹಲಿಯ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಅವರ ನಿವಾಸದಲ್ಲಿ ನಾಯಕರ ಮಹತ್ವದ ಸಭೆ ನಡೆಯಿತು.

ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪಾಲ್ಗೊಂಡಿದ್ದರು. ಸಭೆಯಲ್ಲಿ ಕರ್ನಾಟಕದ ಅಧಿಕಾರ ಹಸ್ತಾಂತರ ಬಿಕ್ಕಟ್ಟು ಪ್ರಸ್ತಾಪವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ವರದಿಯನ್ನು ಆಧರಿಸಿ, ಸುದೀರ್ಘ ಚರ್ಚೆ ನಡೆಸಲಾಗಿದೆ. ▶ 6ನೇ ಪುಟಕ್ಕೆ



ಡಿಕೆಶಿ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ಬೇಡ

ಕೆ.ಎನ್.ರಾಜಣ್ಣ ಸ್ಫೋಟಕ ಹೇಳಿಕೆ



ತುಮಕೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಕುರ್ಚಿ ಕದನ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ, ಮಾಜಿ ಸಚಿವ ಕೆ.ಎನ್. ರಾಜಣ್ಣ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಎನ್.ರಾಜಣ್ಣ, ಡಿಕೆಶಿ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ಬೇಡವೇ ಬೇಡ. ನನಗೆ ಸಾಕು, ಇನ್ನೊಬ್ಬರಿಗೆ ಅವಕಾಶ ಕೊಡಲಿ ಎಂದರು. ಈ ವೇಳೆ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆಯೇ ಎಂದು ವರದಿಗಾರರ ಪ್ರಶ್ನಿಸಿದಾಗ ಗರಂ ಆದ ರಾಜಣ್ಣ, ಒಂದು ವೇಳೆ ▶ 6ನೇ ಪುಟಕ್ಕೆ

ಇಂಡಿಗೋ ಅವಾಂತರ: ಭಾನುವಾರದೊಳಗೆ ಪ್ರಯಾಣಿಕರಿಗೆ ಮರುಪಾವತಿಸಿ, ಲಗೇಜ್ ತಲುಪಿಸಿ

ಕೇಂದ್ರ ಸರ್ಕಾರ ಖಡಕ್ ಸೂಚನೆ



ಬೆಂಗಳೂರು: ಇಂಡಿಗೋ ವಿಮಾನಯಾನ ಸೇವೆಗಳಲ್ಲಿ ವ್ಯತ್ಯಯ ಮುಂದುವರೆದಿರುವಂತೆಯೇ ಇತ್ತ ಕೇಂದ್ರ ಸರ್ಕಾರ ಕೂಡ ಈ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದು, ಭಾನುವಾರದೊಳಗೆ ಪ್ರಯಾಣಿಕರಿಗೆ ಮರುಪಾವತಿ ಮಾಡುವಂತೆ ಅಂತಿಮ ಗಡುವು ನೀಡಿದೆ.

ಭಾರತದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ವ್ಯಾಪಕ ವಿಮಾನಗಳ ರದ್ದತಿ ಮತ್ತು ವಿಳಂಬಗಳಿಂದಾಗಿ ಪ್ರಯಾಣಿಕರ ಆಕ್ರೋಶಕ್ಕೆ ತುತ್ತಾಗಿರುವ ಇಂಡಿಗೋದ ಬೃಹತ್ ಕಾರ್ಯಾಚರಣೆಯ ಸ್ಥಗಿತವು ಸರ್ಕಾರದ ಬಲವಾದ ಹಸ್ತಕ್ಷೇಪಕ್ಕೆ ಕಾರಣವಾಗಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ, ನಾಗರಿಕ ವಿಮಾನಯಾನ ಸಚಿವಾಲಯ ಡಿಸೆಂಬರ್ 7, 2025ರ ಭಾನುವಾರ ರಾತ್ರಿ 8:00 ಗಂಟೆಯೊಳಗೆ ಬಾಕಿ ಇರುವ ಎಲ್ಲಾ ಪ್ರಯಾಣಿಕರ ಮರುಪಾವತಿಗಳನ್ನು ಪೂರ್ಣಗೊಳಿಸುವಂತೆ ಇಂಡಿಗೋಗೆ ಆದೇಶಿಸಿದೆ. ಈ ನಿರ್ದೇಶನವು ಕಠಿಣ ಎಚ್ಚರಿಕೆಯೊಂದಿಗೆ ಬಂದಿದ್ದು, ಒಂದು ವೇಳೆ ಪಾಲಿಸಲು ವಿಫಲವಾದರೆ ತಕ್ಷಣದ ನಿಯಂತ್ರಕ ಕ್ರಮಕ್ಕೆ ಕಾರಣವಾಗುತ್ತದೆ ಎಂದೂ ಎಚ್ಚರಿಸಿದೆ. ವಿಮಾನಗಳನ್ನು ರದ್ದುಗೊಳಿಸಿದ ಅಥವಾ ಅಡ್ಡಿಪಡಿಸಿದ ಪ್ರಯಾಣಿಕರಿಗೆ ಈಗ ಅವರ ಮೂಲ ಪಾವತಿ ವಿಧಾನಕ್ಕೆ ಸ್ವಯಂಚಾಲಿತವಾಗಿ ಪೂರ್ಣ ಮರುಪಾವತಿಯನ್ನು ಖಾತರಿಪಡಿಸಲಾಗುತ್ತದೆ ಮತ್ತು ಮರುಹೊಂದಿಸುವಿಕೆಗಾಗಿ ಯಾವುದೇ ಶುಲ್ಕ ವಿಧಿಸುವುದನ್ನು ವಿಮಾನಯಾನ ಸಂಸ್ಥೆಯು ನಿಷೇಧಿಸಲಾಗಿದೆ. ಪ್ರಯಾಣಿಕರ ನಿಯಂತ್ರಣದಿಂದ ಸಂಪೂರ್ಣವಾಗಿ ಹೊರಗಿರುವ ಕಾರ್ಯಾಚರಣೆಯ ವೈಫಲ್ಯಕ್ಕೆ ದಂಡ ವಿಧಿಸದಂತೆ ರಕ್ಷಿಸುವ ಗುರಿಯನ್ನು ಈ ಆದೇಶ ಹೊಂದಿದೆ. ಇಂಡಿಗೋ ವಿಮಾನ ಸಂಚಾರದಲ್ಲಿ ಉಂಟಾಗಿರುವ ಅಸ್ಥಿರತೆ ಹಿನ್ನೆಲೆಯಲ್ಲಿ ಇತರೆ ವಿಮಾನಯಾನ ಸಂಸ್ಥೆಗಳು ಏಕಾಏಕಿ ಪ್ರಯಾಣ ದರ ಹೆಚ್ಚಿಸಿವೆ. ಈ ಸಂಬಂಧ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯವು ಮಧ್ಯ ಪ್ರವೇಶ ಮಾಡಿದ್ದು, ವಿಮಾನ ಪ್ರಯಾಣ ದರ ಏರಿಕೆಗೆ ಹಾಕಿ, ಎಲ್ಲಾ ವಿಮಾನಯಾನ ಸಂಸ್ಥೆಗಳಿಗೂ ದರ ಮಿತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಿದೆ.



ಕಣ್ಣಿಗೆ ಕಾರದಪುಡಿ ಎರಚಿ, ಹಲ್ಲೆ ಬಳಿಕ ವ್ಯಕ್ತಿ ಅಪಹರಣ

ಮೈಸೂರು ವಿಜಯನಗರ 3ನೇ ಹಂತದಲ್ಲಿ ಆತಂಕಕಾರಿ ಘಟನೆ

ಮೈಸೂರು,ಡಿ.6–ಕಾರದಪುಡಿ ಕಣ್ಣಿಗೆ ಎರಚಿ ವ್ಯಕ್ತಿಯೊಬ್ಬನನ್ನು ಅಪಹರಿಸಿರುವ ಘಟನೆ ಮೈಸೂರಿನಲ್ಲಿ ಶನಿವಾರ ರಾತ್ರಿ ನಡೆದಿದೆ. ವಿಜಯನಗರ ಮೂರನೇ ಹಂತ, ಸಿ ಬ್ಲಾಕ್‌ನ ಹೆರಿಟೇಜ್ ಕ್ಲಬ್ ರಸ್ತೆಯಲ್ಲಿ ಈ ಘಟನೆ ನಡೆದಿದ್ದು, ಸ್ಥಳೀಯರನ್ನು ಬೆಚ್ಚಿಬೀಳಿಸಿದೆ. ಹೆರಿಟೇಜ್ ಕ್ಲಬ್ ರಸ್ತೆಯಲ್ಲಿ ರಾತ್ರಿ ಸುಮಾರು 8.12ರ ವೇಳೆಯಲ್ಲಿ ನಡೆದು ಹೋಗುತ್ತಿದ್ದ ವ್ಯಕ್ತಿಯನ್ನು ಅಪಹರಿಸಲಾಗಿದೆ. ಟಾಟಾ ಸುಮೋ ವಾಹನದಲ್ಲಿ ಬಂದ ಐದಾರು ಮಂದಿ, ಆ ವ್ಯಕ್ತಿ ಕಣ್ಣಿಗೆ ಕಾರದಪುಡಿ ಎರಚಿ, ಮನಸ್ಸೋಇಚ್ಛೆ ಥಳಿಸಿ, ಅಪಹರಣ ಮಾಡಿದ್ದಾರೆ. ಆ ವ್ಯಕ್ತಿ ಜೋರಾಗಿ ಕಿರುಚುತ್ತಾ, ▶ 6ನೇ ಪುಟಕ್ಕೆ



ಕರ್ನಾಟಕದ ಇತಿಹಾಸದಲ್ಲಿ ಕಾಂಗ್ರೆಸ್ ಸರ್ಕಾರ ಮಾತ್ರವೇ ಕೊಟ್ಟ ಮಾತಿನಂತೆ ನಡೆದಿದೆ

ಹಾಸನದಲ್ಲಿ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘಂಟಾಘೋಷ



ಹಾಸನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಶನಿವಾರ ಆಯೋಜಿಸಿದ್ದ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಹಾಸನ, ಡಿ.6– ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದು, ಕರ್ನಾಟಕದ ಇತಿಹಾಸದಲ್ಲಿಯೇ ಕಾಂಗ್ರೆಸ್ ಸರ್ಕಾರ ಮಾತ್ರ ಕೊಟ್ಟ ಮಾತಿನಂತೆ ನಡೆದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಹಾಸನದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಶನಿವಾರ ಆಯೋಜಿಸಿದ್ದ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ವಿವಿಧ ಇಲಾಖೆಗಳ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ನಂತರ ಅವರು ಮಾತನಾಡಿದರು.

ಇಂದು ಸುಮಾರು 298 ಕೋಟಿ ರೂಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ನೆರವೇರಿಸಲಾಗಿದೆ. ಹಾಸನ ಜಿಲ್ಲೆಯ ರಾಜಕೀಯ ಚಿತ್ರಣ ಮತ್ತು ಇಲ್ಲಿನ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಅರಿವಿದೆ. ಈ ಸಮಸ್ಯೆಗಳಿಗೆ ಸೂಕ್ತ ರೀತಿಯಲ್ಲಿ ಪರಿಹಾರ ನೀಡುವ ಕೆಲಸವನ್ನು ಸರ್ಕಾರ ಸಮರ್ಪಕವಾಗಿ ನಿರ್ವಹಿಸಿದೆ. ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ 492 ಭರವಸೆಗಳನ್ನು ನೀಡಿದ್ದು, ಅದರಂತೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ▶ 6ನೇ ಪುಟಕ್ಕೆ

> “ನಮ್ಮ ಸರ್ಕಾರ 5 ಗ್ಯಾರಂಟಿಗಳನ್ನು ರೂಪಿಸಿದಾಗ ಎಲ್ಲಾ ಜಾತಿ, ಧರ್ಮಗಳ ಜನರಿಗೆ ತಲುಪುವಂತೆ ಮಾಡಿದ್ದೇವೆ. ಎಲ್ಲರೂ ಮುಖ್ಯವಾಹಿನಿಗೆ ಬರದೇ ಹೋದರೆ ಸ್ವಾತಂತ್ರ್ಯ ಬಂದು 79 ವರ್ಷಗಳಾದರೂ ಸಾರ್ಥಕವಾಗುವುದಿಲ್ಲ. ಸಂವಿಧಾನ ಜಾರಿಯಾಗಿ 75 ವರ್ಷಗಳಾದರೂ ಸಮಾನತೆ ಬಂದಿಲ್ಲ. ಶ್ರೀಮಂತರು, ಶ್ರೀಮಂತರಾಗಿಯೇ ಇದ್ದಾರೆ, ಬಡವರು ಬಡವರಾಗಿಯೇ ಉಳಿದಿದ್ದಾರೆ. ಜಾತಿ ವ್ಯವಸ್ಥೆಯ ಕಾರಣದಿಂದ ಸಮಾನತೆ ಬಂದಿಲ್ಲ. ನಮ್ಮ ಸರ್ಕಾರ ಇದನ್ನು ಮನಗಂಡು ಭಾಗ್ಯ ಯೋಜನೆಗಳನ್ನು ಹಾಗೂ ಈಗ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಿಎಂ ಸಮ್ಮುಖದಲ್ಲಿ ಡಿಸಿಎಂ ಒಗಟಿನ ಮಾತು!



ಹಾಸನ, ಡಿ.6–ನಮ್ಮದು ಅಭಿವೃದ್ಧಿ ಸರ್ಕಾರ, ಹೊಸ ಹುರುಪು ತಂದ ಸರ್ಕಾರ. ಹುಟ್ಟು ನಮ್ಮ ಕೈಯಲ್ಲಿಲ್ಲ, ಗುರಿ ಮುಟ್ಟುವುದು ಮಾತ್ರ ನಮ್ಮ ಕೈಯ್ಯಲ್ಲಿದೆ. ನಮ್ಮ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಹೇಳಿದ್ದಾರೆ.

ನಗರದಲ್ಲಿ ನಡೆದ ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇವರು ವರ ಅಥವಾ ಶಾಪ ಕೊಡಲ್ಲ, ಕೇವಲ ಅವಕಾಶ ಕೊಡುತ್ತಾನೆ. ಆ ಅವಕಾಶದಲ್ಲಿ ನಾವು ಏನು ಮಾಡುತ್ತೇವೆ ಅನ್ನೋದು ಮುಖ್ಯ. ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ನೆರವಾಗಲು ನಮ್ಮ ಸರ್ಕಾರದಿಂದ 5 ಗ್ಯಾರಂಟಿ ಯೋಜನೆ ಜಾರಿ ಮಾಡಿದೆವು ಎಂದರು.

ಮಾನವನ ಬದುಕು ಶಾಶ್ವತವಲ್ಲ, ಬಿಟ್ಟೋಗುವ ಕೆಲಸ ಶಾಶ್ವತ. ಮಾತು ನಿಧಾನವಾಗಿರಬೇಕು, ಕಾಯಕ ಪ್ರಧಾನವಾಗಿರಬೇಕು. ಹುಟ್ಟುವಾಗ ಖಾಲಿ ಕೈ, ಹೋಗುವಾಗ ಪಾಪಪುಣ್ಯ ಇರುತ್ತದೆ. ಕೃಷ್ಣ ಭೈರೇಗೌಡರ ಕೆಲಸ ಸರ್ಕಾರದ 6ನೇ ಗ್ಯಾರಂಟಿಯಾಗಿದೆ. ನಮ್ಮ ಸರ್ಕಾರದ 6ನೇ ಗ್ಯಾರಂಟಿ ಈ ಭೂಮಿ ಗ್ಯಾರಂಟಿ. 5 ಗ್ಯಾರಂಟಿ ಯೋಜನೆಗಳು ಸೇರಿ ಕಾಂಗ್ರೆಸ್ ಗಟ್ಟಿಯಾಗಿದೆ. ಗ್ಯಾರಂಟಿ ರೂಪದಲ್ಲಿ 1 ಲಕ್ಷ ಕೋಟಿ ಜನರ ಖಾತೆಗೆ ಹಾಕಿದ್ದೇವೆ. ಮೇಕೆದಾಟು ಯೋಜನೆ ▶ 6ನೇ ಪುಟಕ್ಕೆ



ಉತ್ತಮ ಭವಿಷ್ಯಕ್ಕಾಗಿ ಯುವ ಸಮೂಹಕ್ಕೆ ಕೌಶಲಾಭಿವೃದ್ಧಿ ಕುರಿತು ತರಬೇತಿ ಅಗತ್ಯ



ಮಾನಸಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ 'ರೇಷ್ಮೆ ಕೃಷಿಯಲ್ಲಿ ಕೌಶಲಾಭಿವೃದ್ಧಿ' ವಿಷಯದ ಕುರಿತು ಆಯೋಜಿಸಿರುವ ರಾಷ್ಟ್ರೀಯ ಕಾರ್ಯಾಗಾರವನ್ನು ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಉದ್ಘಾಟಿಸಿದರು.

ಮೈಸೂರು, ಡಿ.6(ಜಿಎ)–ಉತ್ತಮ ಭವಿಷ್ಯಕ್ಕಾಗಿ ಯುವ ಸಮೂಹಕ್ಕೆ ಕೌಶಲಾಭಿವೃದ್ಧಿಯ ಕುರಿತ ತರಬೇತಿ ಅಗತ್ಯ ಎಂದು ದಕ್ಷಿಣ ವಲಯ ಡಿಐಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ಇಂದಿಲ್ಲಿ ತಿಳಿಸಿದರು.

ಮಾನಸ ಗಂಗೋತ್ರಿಯ ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾಲಯ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಹಯೋಗದಲ್ಲಿ 'ರೇಷ್ಮೆ ಕೃಷಿಯಲ್ಲಿ ಕೌಶಲಾಭಿವೃದ್ಧಿ' ವಿಷಯದ ಕುರಿತು ವಾರಗಳ ಕಾಲ ಆಯೋಜಿಸಿರುವ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ, ಮಾತನಾಡಿದರು.

ಪದವಿ ನೀಡುವ ನಿಟ್ಟಿನಲ್ಲಿ ಮಾತ್ರ ಕಾಲೇಜು ಚಿಂತಿಸುತ್ತಿವೆ. ಇದ್ದರಿಂದ ಮಕ್ಕಳಲ್ಲಿ ಕೌಶಲ್ಯದ ಕೊರತೆ ಕಾಣುತ್ತಿದೆ. ಇದರಿಂದ ದೇಶವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಮಾಡಲು ಹಿಂದೆ ಬಿದ್ದಿದೆ. ಕಾಲೇಜುಗಳು ಪ್ರತಿಷ್ಠಿತ ಕಂಪೆನಿಗಳೊಂದಿಗೆ ಕೈಜೋಡಿಸಿ ಅಲ್ಲಿನ ಅಗತ್ಯತೆ ಬಗ್ಗೆ ವಿದ್ಯಾರ್ಥಿಗಳಿಗೆ ಓದಿನೊಂದಿಗೆ ಅರಿವು ಮೂಡಿಸಿ ಎಂದರು.

ದೇಶದಲ್ಲಿ ಕೃಷಿಗೆ ಪ್ರಾಧಾನ್ಯತೆಯಿದೆ. ಆದರೆ ಆ ಕ್ಷೇತ್ರದಲ್ಲಿ ಉತ್ಪಾದಕತೆ ಕಡಿಮೆ ಇರುವುದರಿಂದ ಜಿಡಿಪಿಗೆ ಹೆಚ್ಚಿನ ಕೊಡುಗೆ ದೊರೆಯುತ್ತಿಲ್ಲ. ಸರ್ಕಾರ ಉದ್ಯಮವನ್ನು ಪ್ರೋತ್ಸಾಹಿಸುತ್ತಿದ್ದು, ಯುವ ಸಮೂಹ ಉದ್ಯೋಗದಾತರಾಗುವ ಬಗ್ಗೆ ಚಿಂತಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ತಂತ್ರಜ್ಞಾನ ಬಳಸಿ ಮುಂದುವರೆದಾಗ ಬೆಳೆಯಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೇಂದ್ರ ರೇಷ್ಮೆ ಮಂಡಳಿ ನಿರ್ದೇಶಕ ಎಸ್.ಮಂಥಿರ ಮೂರ್ತಿ, ರೇಷ್ಮೆ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಬಿ.ಸಣ್ಣಪ್ಪ, ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿ ಪ್ರೊ.ಟಿ.ಎಸ್.ಜಗದೀಶ್‌ಕುಮಾರ್ ಉಪಸ್ಥಿತರಿದ್ದರು.



ಚಾಮರಾಜ ಕ್ಷೇತ್ರದ ಕುಂಬಾರಕೊಪ್ಪಲಿನ ಫಲಾನುಭವಿಗಳಿಗೆ ವೃದ್ಯಾಪ್ಯ ವೇತನ, ವಿಧವಾ ವೇತನ ಸಂಧ್ಯ ಸುರಕ್ಷಾ ಯೋಜನೆಯಡಿ ಸಂಸದ ಯದುವೀರ್ ಒಡೆಯರ್ ಮಂಜೂರಾತಿ ಪತ್ರ ವಿತರಿಸಿದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ, ಚಾಮರಾಜ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮುಖಂಡರಾದ ಭೈರಪ್ಪ, ಅರುಣ್, ಪ್ರವೀಣ್, ಅಶ್ವಥ್‌ಗೌಡ ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ರಕ್ತದಾನ, ಉಚಿತ ಕಣ್ಣಿನ ತಪಾಸಣೆ

ಮೈಸೂರು, ಡಿ.6(ಜಿಎ)– ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ, ಯುವ ಬ್ರಿಗೇಡ್, ಕಾವೇರಿ ವಿದ್ಯಾಸಂಸ್ಥೆ, ಜೀವಧಾರ ರಕ್ತದಾನ ಬ್ಯಾಂಕ್, ಎಎಸ್‌ಜಿ ಕಣ್ಣಿನ ಆಸ್ಪತ್ರೆ, ನಂ.3 ಕರ್ನಾಟಕ ನೌಕಪಡೆ ಎನ್‌ಸಿಸಿ ಸಹಯೋಗದೊಂದಿಗೆ ಡಿ.7ರಂದು ಕುವೆಂಪುನಗರದಲ್ಲಿರುವ ಕಾವೇರಿ ವಿದ್ಯಾಸಂಸ್ಥೆಯಲ್ಲಿ ರಕ್ತದಾನ, ಕಣ್ಣಿನ ತಪಾಸಣೆಯ ಉಚಿತ ಶಿಬಿರ ಆಯೋಜಿಸಲಾಗಿದೆ ಎಂದು ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘದ ಅಧ್ಯಕ್ಷ ಗಜಾನನ ಟಿ.ಭಟ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.4ರಂದು ನೌಕಾಪಡೆ ದಿನಾಚರಣೆ ಆಚರಿಸಲಾಗುತ್ತದೆ. ಅದರ ಅಂಗವಾಗಿ ಉಚಿತ ಶಿಬಿರ ಆಯೋಜಿಸುತ್ತಿದ್ದು, ಅಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಕಂಪ್ಯೂಟರ್ ಯಂತ್ರದ ಮೂಲಕ ನೇತ್ರ ತಪಾಸಣೆ ನಡೆಯಲಿದೆ.

ದೂರದೃಷ್ಟಿ, ಸಮೀಪ ದೃಷ್ಟಿ ಮೊದಲಾದ ನೇತ್ರ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವವರು ಪ್ರಯೋಜನ ಪಡೆಯ ಬಹುದಾಗಿದೆ. ಇದಲ್ಲದೆ ನಿಜಕ್ಕೂ ಅಗತ್ಯವುಳ್ಳ 50 ಮಂದಿಗೆ ಉಚಿತ ಕನ್ನಡಕ ವಿತರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಅಧಿಕಾರಿ ಜಿ.ಇ. ಕೃಷ್ಣಮೂರ್ತಿ, ನಿವೃತ್ತ ಕಮಾಂಡರ್ ಆಫೀಸರ್ ರಾಮಚಂದ್ರ, ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಕಾವೇರಿ ವಿದ್ಯಾಸಂಸ್ಥೆಯ ಸುಬ್ರಮಣ್ಯ, ಮೈಸೂರು ವಿವಿ ಪ್ರಾಧ್ಯಾಪಕ ಶಂಕರ್ ಭಟ್ ಅವರನ್ನು ಅಭಿನಂದಿಸಲಾಗುತ್ತದೆ. ಮುಖ್ಯ ಅತಿಥಿಗಳಾಗಿ ಅಡ್ಮಿರಲ್ ಜನರಲ್ ರವಿ ಗಾಯ್ಕವಾಡ್, ವಿಧಾನ ಪರಿಷತ್ ಸದಸ್ಯ, ಸಂಘದ ಗೌರವಾಧ್ಯಕ್ಷರೂ ಆದ ಸಿ.ಎನ್.ಮಂಜೇಗೌಡ ಮತ್ತಿತರರು ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಜಿನಿ ಸುಬ್ಬಯ್ಯ, ಬಿ.ಎಸ್.ಚಂದ್ರಕುಮಾರ್ ಉಪಸ್ಥಿತರಿದ್ದರು.

ಹುಣಸೂರಿನ ಗುರುಪುರ ಟಿಬೆಟಿಯನ್ ಕಾಲೋನಿ ಬಳಿ ಹುಲಿ ಮರಿ ರಕ್ಷಣೆ

ಅದರ ತಾಯಿಗಾಗಿ ಶೋಧ




ರಕ್ಷಿಸಲ್ಪಟ್ಟ ಹುಲಿ ಮರಿ.

ಮೈಸೂರು, ಡಿ.6(ಎಂಟಿವೈ)–ಹುಣಸೂರು ತಾಲೂಕಿನ ಗುರುಪುರದ ಟಿಬೆಟಿಯನ್ ಕಾಲೋನಿ ಬಳಿ ಶನಿವಾರ ಬೆಳಗ್ಗೆ ತಾಯಿಯಿಂದ ಬೇರ್ಪಟ್ಟ 2–3 ತಿಂಗಳ ಹೆಣ್ಣು ಹುಲಿ ಮರಿಯೊಂದು ಪ್ರತ್ಯಕ್ಷವಾಗಿದ್ದು, ಅರಣ್ಯ ಸಿಬ್ಬಂದಿ ಅದನ್ನು ರಕ್ಷಿಸಿ, ಆರೈಕೆ ಮಾಡುತ್ತಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ವ್ಯಾಪ್ತಿಯ ಗುರುಪುರ ಟಿಬೆಟಿಯನ್ ಕಾಲೋನಿಯ ಜೆ.ವಿಲೇಜ್ ಬಳಿ ಶನಿವಾರ ಬೆಳಗ್ಗೆ 10 ಗಂಟೆಯಲ್ಲಿ ಹುಲಿಮರಿ ಚೀರುತ್ತಾ ಓಡಾಡುತ್ತಿರುವುದನ್ನು ಸ್ಥಳೀಯರು ಗಮನಿಸಿದ್ದಾರೆ. ಕೂಡಲೇ ವೀರನಹೊಸಳ್ಳಿ ವಲಯದ ಅರಣ್ಯಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಹುಲಿ ಮರಿ ಮಾತ್ರವೇ ಇರುವುದನ್ನು ಖಚಿತಪಡಿಸಿಕೊಂಡು, ಮರಿಯನ್ನು ರಕ್ಷಣೆ ಮಾಡಿದ್ದಾರೆ. ಬಳಿಕ ಆ ಮರಿಯನ್ನು ವೀರನಹೊಸಳ್ಳಿ ವಲಯದ ಕಚೇರಿಗೆ ಕೊಂಡೊಯ್ದು ಪಶುವೈದ್ಯರಿಂದ ತಪಾಸಣೆ ಮಾಡಿಸಿದ್ದಾರೆ. ಅದು 2–3 ತಿಂಗಳ ಹೆಣ್ಣು ಮರಿಯಾಗಿದ್ದು, 2–3 ದಿನಗಳಿಂದ ಹಸಿವಿನಿಂದ ಕಂಗೆಟ್ಟಿರುವಂತೆ ಕಂಡು ಬಂದಿದೆ. ಪ್ರಾಥಮಿಕ ಚಿಕಿತ್ಸೆ ನೀಡಿ, ಹುಲಿ ಮರಿಗೆ ಆಹಾರ ಪೂರೈಸಲಾಗಿದೆ. ಅಲ್ಲದೆ ಅದರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ.

ತಾಯಿ ಹುಲಿಗಾಗಿ ಪರಿಶೀಲನೆ: ಗುರುಪುರ–ಟಿಬೆಟಿಯನ್ ಕಾಲೋನಿ ಬಳಿ ಅರಣ್ಯದಂಚಿನ ಪ್ರದೇಶದಲ್ಲಿ ಹುಲಿ ಓಡಾಟದ ದೃಶ್ಯ ಈ ಹಿಂದೆ ಕಂಡು ಬಂದಿತ್ತಾದರೂ, ಯಾವುದೇ ಅನಾಹುತ ಸಂಭವಿಸಿರಲಿಲ್ಲ. ಆದರೆ, ಇಂದು ಸಿಕ್ಕಿರುವ ಮರಿ ಎಲ್ಲಿಂದ ಬಂತು ಎಂಬ ಪ್ರಶ್ನೆ ಅರಣ್ಯ ಸಿಬ್ಬಂದಿಗಳಲ್ಲಿ ಕಾಡತೊಡಗಿದೆ. ಡ್ರೋನ್ ಮೂಲಕ ತಾಯಿಗಾಗಿ ಶೋಧ ಮುಂದುವರೆಸಲಾಗಿದೆ. ಮರಿಯನ್ನು ತಾಯಿಯೊಂದಿಗೆ ಸೇರಿಸುವ ಪ್ರಯತ್ನ ಮಾಡಲಾಗುತ್ತದೆ. ಹೀಗೆ ಇನ್ನು 2–3 ಮರಿಗಳಿರುವ ಸಾಧ್ಯತೆಯಿದ್ದು, ಸ್ಥಳ ಬದಲಾವಣೆ ವೇಳೆ ಇದು ಅಗಲಿರಬಹುದು ಎಂದು ಅಂದಾಜಿಸಲಾಗಿದೆ. ರಕ್ಷಣಾ ಕಾರ್ಯಾಚರಣೆಯಲ್ಲಿ ಎಸಿಎಫ್ ಲಕ್ಷ್ಮೀಕಾಂತ್, ವೀರನಹೊಸಳ್ಳಿ ಆರ್‌ಎಫ್‌ಓ ವಿನೋದ್ ಗೌಡ, ಪಶುವೈದ್ಯ ಡಾ.ಆದರ್ಶ್ ಹಾಗೂ ಸಿಬ್ಬಂದಿ ಇದ್ದರು.

ಇಂದು ವಿಷ್ಣುವರ್ಧನ್ ಸ್ಮಾರಕದಲ್ಲಿ ಗಾಯನ ಕಾರ್ಯಕ್ರಮ

ಮೈಸೂರು, ಡಿ.6 (ಎಂಟಿವೈ)– ಮೈಸೂರು ತಾಲೂಕಿನ ಉದ್ಬೂರ್ ಗೇಟ್ ಬಳಿ ಇರುವ ವಿಷ್ಣುವರ್ಧನ್ ಸ್ಮಾರಕದ ಸಭಾಂಗಣದಲ್ಲಿ ಭಾನುವಾರ (ಡಿ.7) ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ 'ವಿಷ್ಣು ಸಂಭ್ರಮ' ಡಾ.ವಿಷ್ಣುವರ್ಧನ್ ಅವರ ಪ್ರಸಿದ್ಧ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗಾನ ಸಂಗಮ ಕಲಾತಂಡದ ಕಲಾವಿದ ಬಾಲು ಪ್ರಕಾಶ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ ಸ್ಮರಣಾರ್ಥ ಗಾನ ಸಂಗಮ ಕಲಾತಂಡ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದ್ದು, ಡಾ.ವಿಷ್ಣುವರ್ಧನ್ ಅವರ ಚಿತ್ರಗಳ ಗೀತೆಗಳನ್ನು ಪ್ರಸ್ತುತ ಪಡಿಸಲಾಗುತ್ತದೆ. ಇದು ಕರೋಕೆ ಕಾರ್ಯಕ್ರಮವಾಗಿದ್ದು, 70, 80, 90ರ ದಶಕದ ಪ್ರಸಿದ್ಧ ಸಿನಿಮಾದ ಸುಮಧುರ ಗೀತೆಗಳನ್ನು, ಗಾಯಕರು ಹಾಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೆಲ್ಲಹಳ್ಳಿ ರಾಜೇಶ್ ಸಿ. ಗೌಡ, ಮಲ್ಲಿಕಾರ್ಜುನ್, ಅನಿತಾ, ಮೋಹನ್ ಹಾಗೂ ಕಾರ್ತಿಕ್ ಉಪಸ್ಥಿತರಿದ್ದರು.

ಡಿ.9ಕ್ಕೆ ಬಹುಭಾಷಾ ಚಿತ್ರಗೀತೆಗಳ ಕಾರ್ಯಕ್ರಮ

ಮೈಸೂರು,ಡಿ.6(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಡಿ.9 ರಂದು ಸಂಜೆ 4.30ಕ್ಕೆ 'ಪದನಿಸ' ಕನ್ನಡ, ಹಿಂದಿ, ತೆಲುಗು, ತಮಿಳು, ಇಂಗ್ಲಿಷ್ ಚಿತ್ರಗಳ ಬಹು ಭಾಷಾ ಜನಪ್ರಿಯ ಚಿತ್ರಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಕನ್ನಡ ಸೇರಿದಂತೆ ಬಹುಭಾಷೆಗಳ ಪ್ರಸಿದ್ಧ ಚಲನಚಿತ್ರ ಗೀತೆಗಳನ್ನು ಹಾಡಲಾಗುತ್ತದೆ. ಗಾಯಕರಾದ ಆರ್.ಲಕ್ಷ್ಮಣ್, ಜಾಯ್ಸ್ ವೈಶಾಕ್, ವೈಎಂ. ನಾಗೇಂದ್ರ ಬಿ.ಎಸ್. ವಿಜಯ್ ಆನಂದ್, ತೇಜಾವತಿ, ಕೆ.ಎಸ್. ಶೇಷಾದ್ರಿ, ಆರ್.ಶಾಂತಕುಮಾರಿ, ಡಾ. ರವೀಂದ್ರಕುಮಾರ್, ಡಾ.ಎ.ಎನ್.ಪದ್ಮ, ಡಾ.ಎಸ್.ಆರ್. ತಿರುಮಲೇಶ್, ಎಸ್.ಬಸವರಾಜು ಬೆಳ್ಳಿಕಟ್ಟೆ, ರೇಖಾ ಗೌತಮ್ ಇನ್ನಿತರರು ಹೆಸರಾಂತ ಗಾಯಕರಾದ ಮೊಹಮ್ಮದ್ ರಫಿ, ಕಿಶೋರ್‌ಕುಮಾರ್, ಲತಾ ಮಂಗೇಶ್ಕರ್, ಡಾ.ಎಸ್.ಪಿ.ಬಾಲಸುಬ್ರಹ್ಮಣ್ಯ. ಡಾ.ರಾಜ್‌ಕುಮಾರ್, ಎಸ್. ಜಾನಕಿ, ಪಿ.ಬಿ.ಶ್ರೀನಿವಾಸ್, ಜೇಸುದಾಸ್, ಕುಮಾರ್ ಸಾನು, ಉದಿತ್ ನಾರಾಯಣ್, ಹರಿಹರನ್ ಅವರು ಹಾಡಿರುವ ಪ್ರಸಿದ್ಧ ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ನಾಗರಾಜ್ ವಿ. ಭೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಜಾಯ್ಸ್ ವೈಶಾಕ್, ಬಿ.ಎಸ್. ವಿಜಯ್ ಆನಂದ್, ಕೆ.ಎಸ್. ಶೇಷಾದ್ರಿ, ತಿಪ್ಪಯ್ಯ ಇದ್ದರು.

ಮಕ್ಕಳ ಕ್ರೀಡಾಕೂಟ...



ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರದ ನರ್ಸರಿ ಮತ್ತು ಕಿರಿಯ ಪ್ರಾಥಮಿಕ ವಿಭಾಗದ ಮಕ್ಕಳ ಕ್ರೀಡಾಕೂಟವನ್ನು ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರ ಶೇಖರ್, ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್, ವೀಣಾ ಕೆ. ಹೆಗಡೆ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಸಿದ್ದರಾಮಯ್ಯರ ಟೀಕಿಸುವುದನ್ನು ನಿಲ್ಲಿಸದಿದ್ದರೆ ವಿಶ್ವನಾಥ್ ವಿರುದ್ಧ ಹೋರಾಟದ ಎಚ್ಚರಿಕೆ

ಮೈಸೂರು,ಡಿ.6(ಎಂಟಿವೈ)– ಅಹಿಂದ ನಾಯಕರಾಗಿ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ಉತ್ತಮ ಆಡಳಿತ ನೀಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ವಿನಾಕಾರಣ ಟೀಕೆ ಮಾಡುವುದನ್ನು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ನಿಲ್ಲಿಸದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಚಾಮರಾಜನಗರ ಅಹಿಂದ ಅಧ್ಯಕ್ಷ ಎಂ. ಮಹೇಶ್ ಹಳೇಪುರ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಅವರು ಕೇವಲ ಪ್ರಚಾರಕ್ಕೆ ಸಿಎಂ ಸಿದ್ದರಾಮಯ್ಯ ಅವರನ್ನು ತೇಜೋವಧೆ ಮಾಡಲು ಸುಳ್ಳು ಆರೋಪ ಮಾಡುತ್ತಲೇ ಇದ್ದಾರೆ. ಸುಳ್ಳು ಆರೋಪ ಮುಂದುವರೆಸಿದರೆ ಮುಖಕ್ಕೆ ಮಸಿ ಬಳಿಯುವ ಹಾಗೂ ಅವರ ಮನೆಗೆ ಮುತ್ತಿಗೆ ಹಾಕುವ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ಸಮುದಾಯಕ್ಕೆ ವಿಶ್ವನಾಥ್ ಕೊಡುಗೆ ಏನೇನೂ ಇಲ್ಲ. 2008ರಲ್ಲಿ ಕೆ.ಆರ್.ನಗರದಲ್ಲಿ ಮಂಚನಹಳ್ಳಿ ಮಹದೇವ್ ಅವರನ್ನು ಬದಿಗೊತ್ತಿ, ಸಿದ್ದರಾಮಯ್ಯ ಅವರು ವಿಶ್ವನಾಥ್‌ಗೆ ಟಿಕೆಟ್ ನೀಡಿದರು. ಸಂಸತ್ ಚುನಾವಣೆ ವೇಳೆಯೂ ಇದೇ ನೆರವು ನೀಡಿದರು. ಆದರೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಬಗ್ಗೆ ನಾಲಿಗೆ ಹರಿಬಿಟ್ಟು ಮಾತನಾಡಿದ ಕಾರಣ ಒಕ್ಕಲಿಗ ಸಮುದಾಯ ವಿಶ್ವನಾಥ್ ಅವರನ್ನು ಸೋಲಿಸಿತು. ಬಳಿಕ ಮತ್ತೆ ದೇವೇಗೌಡರ ಮೊರೆ ಹೋಗಿ ಜೆಡಿಎಸ್‌ನಲ್ಲಿ ಉನ್ನತ ಸ್ಥಾನ ದೊರೆತರೂ ಚುನಾವಣೆ ವೇಳೆ ಸಮುದಾಯದವರಿಗೆ ಟಿಕೆಟ್ ಕೊಡಿಸಲಿಲ್ಲ. ಇದಲ್ಲದೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಪದೇ ಪದೆ ಟೀಕಿಸುತ್ತಿದ್ದರೂ ಕೇವಲ ಸಿದ್ದರಾಮಯ್ಯ ಅವರ ವಿರುದ್ಧ ಮಾತನಾಡಲೆಂದೇ ವಿಶ್ವನಾಥ್ ಅವರನ್ನು ಬಿಜೆಪಿಯಲ್ಲಿ ಉಳಿಸಿಕೊಂಡಿದ್ದಾರೆ ಎನ್ನಿಸುತ್ತಿದೆ ಎಂದು ಲೇವಡಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಹಿಂದ ಮುಖಂಡರಾದ ಸಂದೀಪ್‌ಕುಮಾರ್, ಸಿದ್ದರಾಜು, ರವಿಕುಮಾರ್, ದೊಡ್ಡಯ್ಯ, ಡಾ.ಎಸ್. ರತ್ನಮ್ಮ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.12.2025 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2025 ರಿಂದ 15.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆರ್ದ್ರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ, ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10 ರಿಂದ ರಥೋತ್ಸವ, ಗಣಪತಿ ಹೋಮ, ವಿಷ್ಣು ಸಹಸ್ರನಾಮ, ಶ್ರೀ ಭಾವಸಾರ ಕ್ಷತ್ರಿಯ ಭಜನಾ ಮಂಡಳಿ ಅವರಿಂದ ಅಖಂಡ ಭಜನೆ, ಮಧ್ಯಾಹ್ನ 1ಕ್ಕೆ ಅನ್ನಪೂರ್ಣೇಶ್ವರಿ ಪೂಜೆ, ಅನ್ನಸಂತರ್ಪಣೆ ಕಾರ್ಯಕ್ರಮ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿ ಬಳಗ :** ಕನ್ನಡಚಿತ್ರರಂಗದ ಸಾಹಸಸಿಂಹ ವಿಷ್ಣುವರ್ಧನ್ ನೆನಪಿನಲ್ಲಿ ಗಾನ ಸಂಗಮ ಕಲಾತಂಡದಿಂದ ವಿಷ್ಣು ಸಂಭ್ರಮ ಯಜಮಾನರ ಮಧುರ ಸಾಹಿತ್ಯದ ರಸಸೌತಣ ಗೀತೆಗಳ ಗಾಯನ' ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಅಧ್ಯಕ್ಷತೆ : ಮೆಲ್ಲಹಳ್ಳಿ ರಾಜೇಶ್ ಸಿ ಗೌಡ, ಮುಖ್ಯ ಅತಿಥಿಗಳು : ಜನಾರ್ಧನ್, ಮಾಜಿ ನಗರಪಾಲಿಕೆ ಸದಸ್ಯ ರಘುರಾಜೇ ಅರಸ್, ಕೆ.ವಿ ಮಲ್ಲೇಶ್, ಮಾರ್ಕೆಟ್ ಶ್ರೀನಿವಾಸ್, ಕರವೇ ಅಧ್ಯಕ್ಷ ಲಿಂಗರಾಜು, ಪ್ರಕಾಶ್, ಅಜಯ್ ಶಾಸ್ತ್ರಿ, ಒಕ್ಕಲಿಗರ ಸಂಘದ ನಿರ್ದೇಶಕ ಗುರುರಾಜ್, ರಂಗಸ್ವಾಮಿ ಪಾಪು, ಮಹೇಂದ್ರ ಕಾಗಿನೆಲೆ, ಪ್ರದೀಪ್, ರಾಕೇಶ್ ಕುಮಾರ್, ಜಯಲಕ್ಷ್ಮಿ, ಸ್ಥಳ: ಉದ್ಬೂರು ಗೇಟ್ ಬಳಿಯಿರುವ ವಿಷ್ಣು ಸ್ಮಾರಕ ಭವನ, ಬೆಳಗ್ಗೆ 9 ರಿಂದ.

■ **ನೌಕಾಪಡೆ ನಿವೃತ್ತ ಅಧಿಕಾರಿಗಳ ಸಂಘ, ಯುವ ಬ್ರಿಗೇಡ್, ಕಾವೇರಿ ವಿದ್ಯಾಸಂಸ್ಥೆ, ಜೀವಧಾರ ರಕ್ತದಾನ ಬ್ಯಾಂಕ್, ಎಎಸ್‌ಜಿ ಕಣ್ಣಿನ ಆಸ್ಪತ್ರೆ, ನಂಬರ್ 3 ಕರ್ನಾಟಕ ನೌಕಪಡೆ ಎನ್‌ಸಿಸಿ :** ರಕ್ತದಾನ, ಕಣ್ಣಿನ ತಪಾಸಣೆಯ ಉಚಿತ ಶಿಬಿರ, ಉಪಸ್ಥಿತರು : ನಿವೃತ್ತ ಅಧಿಕಾರಿ ಜಿ.ಇ.ಕೃಷ್ಣಮೂರ್ತಿ, ನಿವೃತ್ತ ಕಮಾಂಡರ್ ಆಫೀಸರ್ ರಾಮಚಂದ್ರ, ಕನ್ನಡ ರಾಜ್ಯೋತ್ಸವ ಪುರಸ್ಕೃತರಾದ ಕಾವೇರಿ ವಿದ್ಯಾಸಂಸ್ಥೆಯ ಸುಬ್ರಮಣ್ಯ, ಮೈಸೂರು ವಿವಿ ಪ್ರಾಧ್ಯಾಪಕ ಶಂಕರ್ ಭಟ್, ಅಡ್ಮಿರಲ್ ಜನರಲ್ ರವಿ ಗಾಯ್ಕವಾಡ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸ್ಥಳ: ಕಾವೇರಿ ವಿದ್ಯಾಸಂಸ್ಥೆ, ಕುವೆಂಪುನಗರ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 25ನೇ ವರ್ಷದ ಹನುಮಜಯಂತಿ ಮಹೋತ್ಸವ, ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ಪ್ರಸಾದ ಸೇವೆ, ಧಾರ್ಮಿಕ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ, ಬೆಳಗ್ಗೆಯಿಂದ.

■ **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಮಧು ಮೇಹ ದಿನದ ಅಂಗವಾಗಿ ಉಚಿತ ಮಧುಮೇಹ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಶಿಬಿರ, ನೇತಾಜಿ ಸರ್ಕಲ್ ಹತ್ತಿರ, ದಟ್ಟಗಳ್ಳಿ, ಕನಕದಾಸನಗರ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಪ್ರೊ. ಎಚ್.ಎಸ್.ಹರಿಶಂಕರ್ 86, ಕನ್ನಡಯೋಧ ನಾ. ನಾಗಲಿಂಗಸ್ವಾಮಿ ಸಂಸ್ಮರಣೆ ಹಾಗೂ ಕನ್ನಡ ಚೇತನ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಪ್ರಶಸ್ತಿ ಪ್ರದಾನ : ಯುವ ಮುಖಂಡ ಆರ್. ರಘು, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕೆ. ರಾಮೂರ್ತಿರಾವ್, ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಶ್ರೀಮತಿ ಎನ್. ನಾಗಲಾಂಬಿಕಾ, ರಂಗನಾಥ್ ಮೈಸೂರು, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸಂಸ್ಕೃತಿ ಬುಕ್ ಏಜೆನ್ಸೀಸ್ :** ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಅಂಗವಾಗಿ ಕನ್ನಡ ಮತ್ತು ಇಂಗ್ಲೀಷ್ ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಹಿರಿಯ ಸಂಶೋಧಕ ಡಾ.ಟಿ.ವಿ. ವೆಂಕಟಾಚಲಶಾಸ್ತ್ರಿ, ಮುಖ್ಯ ಅತಿಥಿಗಳು : ಸಾಹಿತಿ ಎಂ.ಎಸ್. ನರಸಿಂಹಮೂರ್ತಿ, ಸಾಹಿತಿ ಪ್ರೊ. ಎಂ. ಕೃಷ್ಣೇಗೌಡ, ಹಿರಿಯ ಸಂಶೋಧಕ ಡಾ. ಬಿ.ಎಸ್. ಪ್ರಣತಾರ್ತಿಹರನ್, ಶ್ರೀ ವಿಜಯ ವಿಠಲ ವಿದ್ಯಾಶಾಲಾ ಅಧ್ಯಕ್ಷ ಆರ್. ವಾಸುದೇವ ಭಟ್, ಶಾಸಕ ಟಿ.ಎಸ್. ಶ್ರೀವತ್ಸ, ನಾಟಕಕಾರ ಕೆ.ವಿ. ರಾಮಪ್ರಸಾದ್, ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ಸ್ಥಳ: ವಿಜಯಧ್ವಜ ಮಂಟಪ, ವಿಜಯ ವಿಠ್ಠಲ ವಿದ್ಯಾಶಾಲಾ ಆವರಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ

■ **ಕನ್ನಡ ಸಾಹಿತ್ಯ ಕಲಾಕೂಟ, ಅಮೋಘವರ್ಷ ಅಮೃತವರ್ಷಿಣಿ ಸೇವಾ ಪ್ರತಿಷ್ಠಾನ :** ಸಾಧನೆಯ ಹಾದಿಯಲ್ಲಿ ನೆರವಾದವರಿಗೆ ಅಭಿನಂದನಾ ಸಮಾರಂಭ, ಅಭಿನಂದಿಸುವವರು : ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಅಭಿನಂದಿತರು : ಪ್ರಾಧ್ಯಾಪಕ ಡಾ. ರವಿಗೌಡ, ಅಧ್ಯಕ್ಷತೆ : ಡಾ. ದಿಲೀಪ್ ಹೆಚ್. ರಮೇಶ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಗೊರಳ್ಳಿ ಜಗದೀಶ್, ಸ್ಥಳ: ಸೃಷ್ಟಿ ಫರ್ಟಿಲಿಟಿ ಆಸ್ಪತ್ರೆ, ಕವಿತಾ ಬೇಕರಿ ಸರ್ಕಲ್ ಹತ್ತಿರ, ಕುವೆಂಪುನಗರ, ಬೆಳಗ್ಗೆ 11 ರಿಂದ.

■ **ಬಸವ ಸಮಿತಿ :** ಶರಣ ಸಂಗಮ–312, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಅಭಿನಂದಿತರು : ಡಿ. ನಾಗೇಂದ್ರಪ್ಪ–ಸಾಹಿತ್ಯ, ಕೆ.ವಿ. ಮಲ್ಲೇಶ್–ಸಮಾಜ ಸೇವೆ, ಕೆರೆಹಳ್ಳಿ ದೊರೆಸ್ವಾಮಿ–ರಂಗಭೂಮಿ, ನಗರ್ಲೆ ಶಿವಕುಮಾರ್–ಸಾಹಿತ್ಯ, ಎಸ್.ಆರ್. ಶಿವಕುಮಾರ್–ಪತ್ರಿಕಾ ಮಾಧ್ಯಮ, ಪಿ. ಮರಡೇಶಮೂರ್ತಿ–ಸಾಹಿತ್ಯ ಮತ್ತು ಸಂಘಟನೆ, ಭಾನು ಮೋಹನ್–ಪರಿಸರ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಸಂಜೆ 4ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.30 ನಮ್ಮ ಆರೋಗ್ಯ–ಮೂಳೆ ಮತ್ತು ಕೀಲು ತೊಂದರೆಗಳ ಚಿಕಿತ್ಸೆಯಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಇಲಿಜರೋವ್ ಚಿಕಿತ್ಸಾ ವಿಧಾನ ಕುರಿತು ಮೈಸೂರಿನ ಜೆ.ಎಸ್.ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮೂಳೆ ಮತ್ತು ಕೀಲು ವಿಭಾಗದ ಪ್ರೊಫೆಸರ್ ಡಾ.ಶೇಷಗಿರಿ.ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH TRISH and Balty boy -ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಹುಮುಖ ಪ್ರತಿಭೆ ಮಾಸ್ಟರ್.ಯು.ಎಸ್.ಆಚಾರ್ ಮತ್ತು ಅವರ ತಾಯಿ ಉಷಾರಾಣಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್.ಬಿ., 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಸತ್ತೇಗಾಲದ ಶಿವಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಡಾ.ಶಮಿತ ಮಲ್ನಾಡ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ – ಅರಗಿಣಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಅಂಗದ ಸಂಧಾನ, ಪ್ರಸ್ತುತಿ–ಪೆರ್ಲಕೃಷ್ಣಭಟ್ ಹಾಗೂ ಸಂಗಡಿಗರು, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ–ಶ್ರೀಮಾನ್ ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಎಂ.ಎಸ್.ವೆಂಕಟರಾಮ್ ಕುಪ್ಯ, 9.30 ಸವಿನೆನಪು, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ, ಅಂಕುಶ್ ಎನ್.ನಾಯಕ್ – ಸಿತಾರ್ ವಾದನ

■ **ನೃತ್ಯ ಅನ್ವೇಷಣಾ ನೃತ್ಯ ಶಾಲೆ :** ಕು. ಅನ್ವೇಷ ಮಧುಸೂಧನ್ ಅವರಿಂದ ಭರತನಾಟ್ಯ ರಂಗ ಪ್ರವೇಶ, ಸ್ಥಳ: ರಮಾಗೋವಿಂದ ಕಲಾವೇದಿಕೆ, ಗಾನಭಾರತೀ, ಸಂಜೆ 5 ರಿಂದ.

■ **ಪ್ರಮತಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ :** ಪ್ರಮತಿ ಉತ್ಸವ, ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ : ಚಾರ್ಟರ್ಡ್ ಅಕೌಂಟೆಂಟ್ ವೈಭವ್ ಎಂ.ಆರ್. ಹಾಗೂ ಆಡಿಯೋಲಜಿಸ್ಟ್ ಜಿ. ತೇಜಾ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಪ್ರೊ. ಸದಾಶಿವೇಗೌಡ, ಉಪಸ್ಥಿತರು : ಶಾಲೆ ಅಧ್ಯಕ್ಷ ಭವಾನಿ ಶಂಕರ್, ಕಾರ್ಯದರ್ಶಿ ಹೆಚ್.ವಿ. ರಾಜೀವ್, ಖಜಾಂಚಿ ಎಸ್. ಫಣಿರಾಜ್, ಶಾಲಾ ಮುಖ್ಯ ಶಿಕ್ಷಣಾಧಿಕಾರಿ ಸಿ.ಎಸ್. ಸುದರ್ಶನ, ಕಾಲೇಜು ಪ್ರಿನ್ಸಿಪಾಲ್ ಸುನೀಲ್ ದಯಾಕರ್, ಶಾಲಾ ಪ್ರಿನ್ಸಿಪಾಲ್ ಶ್ರೀಮತಿ ವಿ.ಆರ್. ಜರಿತ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ರಂಗಾಯಣ :** ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮುನ್ನುಡಿಯಾಗಿ ರಂಗಾಯಣ ನಾಟಕ ಉತ್ಸವ, ರಂಗಾಯಣ ತಂಡದಿಂದ ಮೈ ಫ್ಯಾಮಿಲಿ ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ ಮಂದಾರ್ತಿ, ಸ್ಕ್ರಿಪ್ಟ್ ಅಂಡ್ ಡ್ರಮಟರ್ಜಿ : ಸತೀಶ್ ತಿಪಟೂರು, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಭಾದರಾಯಣಾಚಾರ್ಯ ಅವರಿಂದ ಶ್ರೀಮದ್ ಭಾಗವತ ಮುಂದುವರಿದ ಭಾಗ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಪೂಜ್ಯ ಸ್ವಾಮಿ ಹಂಸಾನಂದರಿಂದ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ, ಸಂಜೆ 6.30 ರಿಂದ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್ ನಗರ, ಶ್ರೀರಾಂಪುರ 2ನೇ ಹಂತ; ಸಂಜೆ 7.30 ರಿಂದ ಮೈಸೂರು ಯೋಗಾಲಯ, ಡಿ.ಎಸ್. ಮ್ಯಾನ್‌ಷನ್, ಎಸ್‌ಬಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.

■ **ಅಭಿವ್ಯಕ್ತಿ ಕಲಾ ಮತ್ತು ಸಾಂಸ್ಕೃತಿಕ ಕೇಂದ್ರ :** ಅಭಿವ್ಯಕ್ತಿ ಹಬ್ಬ–2025, ನೃತ್ಯೋನ್ನತಿ ಭರತನಾಟ್ಯ ಕಾರ್ಯಾಗಾರ, ವಿದುಷಿ ದಿವ್ಯ ರವಿ ಅವರಿಂದ ಭರತನಾಟ್ಯ, ಸ್ಥಳ: ಋತ್ವಿಕ್ ವೇದಿಕೆ, ಜಯಲಕ್ಷ್ಮಿದೇವಿ ಪಿಯು ಕಾಲೇಜು, ರಾಮಕೃಷ್ಣನಗರ, ಸಂಜೆ 6 ರಿಂದ.

■ **ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ :** ಪ್ರಾಂತೀಯ ಸಮ್ಮೇಳನ, ಅಧ್ಯಕ್ಷತೆ : ಲಯನ್ ಡಾ. ಮೈತ್ರೇಯಿ ಆರ್.ಸಿ., ಮುಖ್ಯ ಭಾಷಣಕಾರರು : ಡಾ. ವಿದ್ವಾನ್ ವಿಶ್ವೇಶ್ವರ ಭಟ್, ಅತಿಥಿಗಳು : ಲಯನ್ ಡಾ. ವಿ. ಕೇಶವಮೂರ್ತಿ, ಲಯನ್ ಡಾ. ಎನ್. ಕೃಷ್ಣೇಗೌಡ, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಆಡಿಟೋರಿಯಂ, ಅಕ್ಕಮಹಾದೇವಿ ರಸ್ತೆ, ವಿದ್ಯಾರಣ್ಯಪುರಂ, ಬೆಳಗ್ಗೆ 8.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಲಲಿತ ವಿ. ಮೂರ್ತಿ ಅವರ ಜನ್ಮ ದಿನದ ನೆನಪಿನ ಕಾರ್ಯಕ್ರಮ, ಶ್ರೀಮತಿ ಸುನೀತಾ ಚಂದ್ರಕುಮಾರ್ ಅವರಿಂದ ಲಘು ಸಂಗೀತ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ಅರಮನೆ ಕೋಟೆ ಉತ್ತರ ಬಾಗಿಲು ಶ್ರೀ ಆಂಜನೇಯಸ್ವಾಮಿ ದೇವಸ್ಥಾನ :** ಶ್ರೀ ಹನುಮ ಜಯಂತಿ ಮಹೋತ್ಸವ, ಸಂಜೆ 5.30 ರಿಂದ ನಾದ ವಿದ್ಯಾಲಯ ಎಂ.ಎಸ್. ನವೀನ್ ತಂಡದವರಿಂದ ಗಾಯನ, ಸಂಜೆ 7 ರಿಂದ ನಾದ ವಿದ್ಯಾಲಯ ಮಿತ್ರಾ ನವೀನ್ ತಂಡದವರಿಂದ ನೃತ್ಯರೂಪಕ, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ.

ಮೈಸೂರು ಮಿತ್ರ

ಮೈಸೂರಲ್ಲಿ ಜಂತರ್ ಮಂತರ್ ಜ್ಯೋತಿರ್ಧಾಮ

ದಕ್ಷಿಣ ಭಾರತದ ಪ್ರಪ್ರಥಮ ಪ್ರಾಚೀನ-ಗ್ರಹ ನಕ್ಷತ್ರ ವೇದಶಾಲೆ ಇಂದು ಉದ್ಘಾಟನೆ





ಮೈಸೂರಿನ ಉತ್ತನಹಳ್ಳಿಯ ಭಾರತೀಯೋಗಧಾಮದ ವೇದಶಾಲೆ ಖಗೋಳ ವೀಕ್ಷಣಾಲಯದಲ್ಲಿ ಮಧ್ಯ ಪದದ ನಿರ್ಮಾಣ ಪೂರ್ಣಗೊಂಡಿದೆ. ಇತರ ಎರಡು ಘಟಕಗಳಾದ ಪೂರ್ವ ಪದ ಮತ್ತು ಪಶ್ಚಿಮ ಪದಗಳ ನಿರ್ಮಾಣಕ್ಕೆ ಶೀಘ್ರದಲ್ಲೇ ಕಾಮಗಾರಿ ಕೈಗೆತ್ತಿಕೊಳ್ಳಲು ಸಿದ್ಧತೆ ನಡೆದಿದೆ.

ಮೈಸೂರು, ಡಿ. 6 (ಆರ್‌ಕೆ)– ಸಾಂಸ್ಕೃತಿಕ ನಗರಿ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಪ್ರಶಾಂತ ನೈಸರ್ಗಿಕ ವಾತಾವರಣದಲ್ಲಿ 'ಜಂತರ್–ಮಂತರ್' ಜ್ಯೋತಿರ್ಧಾಮ ಸದ್ದಿಲ್ಲದೇ ತಲೆಎತ್ತಿದೆ.

ಉತ್ತನಹಳ್ಳಿಯ ವಿಜಯಗಿರಿ ಭಾರತೀ ಯೋಗ ಧಾಮದ ಆವರಣದಲ್ಲಿ ನಾಳೆ (ಡಿ. 7) ಬೆಳಗ್ಗೆ 10 ಗಂಟೆಗೆ ಉಡುಪಿಯ ಪೇಜಾವರ ಅಧೋಕ್ಷಜ ಮಠದ ಪರಮಪೂಜ್ಯ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಕೂಡಲಿ ಶೃಂಗೇರಿ ಮಹಾಸಂಸ್ಥಾನ ಮಠದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಅಭಿನವ ಶಂಕರಭಾರತೀ ಮಹಾಸ್ವಾಮಿಗಳು ಹಾಗೂ ಹೊಳೆನರಸೀಪುರದ ಆಧ್ಯಾತ್ಮ ಪ್ರಕಾಶ ಕಾರ್ಯಾಲಯದ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಪ್ರಕಾಶಾನಂದೇಂದ್ರ ಸರಸ್ವತೀ ಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ 'ಜಂತರ್–ಮಂತರ್' ಜ್ಯೋತಿರ್ಧಾಮ ಉದ್ಘಾಟನೆಗೊಳ್ಳಲಿದೆ ಅಲ್ಲದೇ 'ಮಧ್ಯಪದ' ವೂ ಅನಾವರಣಗೊಳಿಸಲಾಗುವುದು.

ಭಾರತೀ ಯೋಗಧಾಮದ ಸಂಸ್ಥಾಪಕ ಡಾ. ಕೆ.ಎಲ್.ಶಂಕರನಾರಾಯಣ ಜೋಯಿಸ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಾಜಿ ಅಧ್ಯಕ್ಷರಾದ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಮತ್ತು ಜೈಪುರದ ಜ್ಯೋತಿಧಾಮ ವೇದಶಾಲಾ ನಿರ್ದೇಶಕರಾದ ಡಾ. ಮುಖೇಶ ಶರ್ಮಾ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಉಡುಪಿಯ ಎಸ್‌ಎಂಎಸ್‌ಪಿ ಸಂಸ್ಕೃತ ಮಹಾ ವಿದ್ಯಾಲಯದ ನಿವೃತ್ತ ಜ್ಯೋತಿಷ ಪ್ರಾಧ್ಯಾಪಕ ಪ್ರೊ. ಎಸ್. ಶ್ರೀನಿವಾಸ ಅಡಿಗ, ಮೈಸೂರಿನ ಪ್ರಸಿದ್ಧ ಜ್ಯೋತಿಷಿ ವಿದ್ವಾನ್ ವೆಂಕಟೇಶ ಭಟ್, ಬೆಂಗಳೂರಿನ ಶಂಕರ ಗುರುಕುಲದ ಸಂಸ್ಥಾಪಕ ಡಾ. ಚಂದ್ರಶೇಖರ, ಶ್ರೀ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ, ಡಾ. ಗಿರಿಧರ ಕಜೆ ಅವರನ್ನು ಇದೇ ವೇಳೆ ಸಮ್ಮಾನಿಸಲಾಗುವುದು.

ವೇದ ಎಂದರೆ ಭೇದಿಸಿ ನೋಡುವುದು ಎಂದರ್ಥ. ಹಾಗೆ ನೆಟ್ಟ ನೋಟದಿಂದ ಖಗೋಳವನ್ನು ನೋಡಿ, ಅಲ್ಲಿನ ಗ್ರಹ ನಕ್ಷತ್ರಗಳ ಸ್ಥಿತಿಯನ್ನೂ ಚಲನೆಯನ್ನೂ ವೀಕ್ಷಿಸುವ ಸ್ಥಳವೇ ವೇದಶಾಲೆ. ಕರಾರುವಾಕ್ಕಾಗಿ ಆಕಾಶ ಕಾಯಗಳನ್ನು ವೀಕ್ಷಿಸಲು ಯಂತ್ರಗಳ ಸಹಾಯವು ಅತ್ಯಗತ್ಯ ಅಂತಹ ಅನೇಕ ಯಂತ್ರಗಳ ಜೊತೆಗೆ ಭಾರತೀಯ ಜ್ಯೋತಿಷ್ಯ ಕುರಿತಾದ ಬಹಳಷ್ಟು ವಿಚಾರಗಳು ಲಭ್ಯವಿರುವ ಸ್ಥಾನ ಈ ವೇದಶಾಲೆಯೆಂಬುದು.

ಜಂತರ್–ಮಂತರ್ ಎಂದು ಪ್ರಸಿದ್ಧವಾದ, ಆಕಾಶಕಾಯಗಳನ್ನು ಅರಿಯುವ ಭಾರತೀಯ ಮಾದರಿಯ ವೇದಶಾಲೆಗಳು ಇರುವುದು ಪ್ರಧಾನವಾಗಿ ರಾಜಸ್ಥಾನದ ಜೈಪುರದಲ್ಲಿ, ಉಜ್ಜಯಿನಿಯಲ್ಲಿ ಮತ್ತು ದೇಹಲಿಯಲ್ಲಿ ಚಿಕ್ಕಪ್ರಮಾಣದಲ್ಲಿ ಕಾಶಿಯಲ್ಲೂ, ಮಥುರಾದಲ್ಲೂ ಇದೆ. ಇವುಗಳ ಹೊರತಾಗಿ ಸದ್ಯ ಮೈಸೂರಿನ ಭಾರತೀಯೋಗ ಧಾಮದಲ್ಲಿ ಅನಾವರಣಗೊಳ್ಳುತ್ತಿರುವಂಥದ್ದು ದಕ್ಷಿಣ ಭಾರತದಲ್ಲಿಯೇ ಮೊದಲನೆಯದು.

ಉಪಯೋಗ: ಇದು ಮೂಲತಃ ಪ್ರಾಚೀನ ಭಾರತೀಯರ ಖಗೋಳ ವಿಜ್ಞಾನವಾಗಿದೆ. ನೂರಾರು ವರ್ಷಗಳ ಹಿಂದೆ ಭಾರತೀಯ ಜ್ಯೋತಿರ್ವಿಜ್ಞಾನಿಗಳು ಈ ಯಂತ್ರಗಳ ಸಹಾಯದಿಂದಲೇ ಗ್ರಹ–ನಕ್ಷತ್ರ–ಸೂರ್ಯ–ಚಂದ್ರ ಮೊದಲಾದ ಆಕಾಶ ಕಾಯಗಳ ಸ್ಥಿತಿ ಹಾಗೂ ಚಲನೆಯನ್ನು ನಿಖರವಾಗಿ ತಿಳಿಯುತ್ತಿದ್ದರು. ಜ್ಯೋತಿಶಾಸ್ತ್ರದ ಅಂಗಗಳಾದ ಗಣಿತ ಮತ್ತು ಖಗೋಳದ ಕುರಿತಾದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಇಲ್ಲಿ ಆಸ್ಪದವಿದೆ. ಈಗ ಮೈಸೂರಿನಲ್ಲಿಯೇ ಅದನ್ನು ಪುನರ್ದರ್ಶನ ಮಾಡಬಹುದಾಗಿದೆ. ಗ್ರಹ, ನಕ್ಷತ್ರ ಮೊದಲಾದ ಆಕಾಶ ಕಾಯಗಳ ನಿರ್ದಿಷ್ಟ ಸ್ಥಾನಗಳು, ಆಕಾಶದಲ್ಲಿ ಗೋಚರಿಸುವ ಗ್ರಹಣ, ವಿಷುವ, ಅಯನ ಇತ್ಯಾದಿಗಳನ್ನು ಇಲ್ಲಿನ ಯಂತ್ರಗಳ ಮೂಲಕ ಅರಿಯಬಹುದಾಗಿದೆ. ಪಂಚಾಂಗದ ಮತ್ತು ಖಗೋಳಕ್ಕೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಸಾಧಿಸಬಹುದಾಗಿದೆ. ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೂ, ಅಧ್ಯಯನ ಶೀಲರಾದ ಖಗೋಳ ಕ್ಷೇತ್ರದವರಿಗೂ, ಸಂಶೋಧಕರಿಗೂ ಇದರಿಂದ ಬಹಳಷ್ಟು ಸಹಾಯವಾಗಲಿದೆ.

ಮುಕ್ತಾವಕಾಶ

ಮೈಸೂರಿನ ಉತ್ತನಹಳ್ಳಿಯಲ್ಲಿರುವ ಭಾರತೀ ಯೋಗಧಾಮ ಸಂಸ್ಥೆಯ ಆವರಣದಲ್ಲಿ 'ಜ್ಯೋತಿರ್ಧಾಮ' ಎಂಬ ನಾಮಾಂಕಿತದಿಂದ ಈ ಯೋಜನೆಯು ಪೂರ್ವಪದ, ಮಧ್ಯಪದ, ಪಶ್ಚಿಮಪದ ಎಂಬ ಮೂರು ಹಂತಗಳಲ್ಲಿ ನಿರ್ಮಾಣವಾಗಲಿದೆ. ಪ್ರಸ್ತುತ ನಿರ್ಮಾಣ ಹಂತದಲ್ಲಿದ್ದು ಇದೀಗ ಮೊದಲ ಹಂತವಾಗಿ ಮಧ್ಯಪದದ ಅನಾವರಣಕ್ಕೆ ಸಿದ್ಧವಾಗಿದೆ. ಕಾರ್ಯವು ಸಂಪೂರ್ಣವಾದ ನಂತರದಲ್ಲಿ ಇದನ್ನು ಸಮಾಜದ ಮುಂದೆ ಪೂರ್ಣವಾಗಿ ತೆರೆದಿಡುವ ಚಿಂತನೆಯನ್ನು ಸಂಸ್ಥೆ ಮಾಡಿರುತ್ತದೆ. ದಕ್ಷಿಣ ಭಾರತದ ಅಧ್ಯಯನಾಸಕ್ತರಿಗೆ ಇಂಥದ್ದೊಂದು ಸೌಲಭ್ಯ ಮೈಸೂರಿನಲ್ಲೇ ಲಭ್ಯವಾಗುತ್ತಿದ್ದು, ಮುಂದೆ ಜ್ಯೋತಿಷ್ಯದ ಹೆಚ್ಚಿನ ಅಧ್ಯಯನಕ್ಕೂ ದಾರಿಮಾಡಿಕೊಡಲಿದೆ. ಆಸಕ್ತರಾದ ಎಲ್ಲರಿಗೂ ಇಲ್ಲಿ ಮುಕ್ತ ಅವಕಾಶವಿದೆ.

ಕನ್ನಡ ಭಾಷೆ, ಸಾಹಿತ್ಯ ಬೆಳೆಸಲು ರಂಗಭೂಮಿ ಶ್ರೇಷ್ಠ ಕಲೆ

ಶಾಸಕ ಜಿ.ಟಿ.ದೇವೇಗೌಡ ಅಭಿಮತ



ಮೈಸೂರಿನ ಪುರಭವನದಲ್ಲಿ ನಡೆದ ಪ್ರಭುಲಿಂಗಲೀಲೆ ಪೌರಾಣಿಕ ನಾಟಕ ಪ್ರದರ್ಶನದಲ್ಲಿ ಹಿರಿಯ ರಂಗ ಕರ್ಮಿಗಳಾದ ಹೆಚ್.ಎಸ್.ನಂಜುಂಡ ಪ್ರಸಾದ್ ಹಾಗೂ ಕೆರೆಹಳ್ಳಿ ಬಿ.ದೊರೆಸ್ವಾಮಿ ಅವರನ್ನು ಶಾಸಕ ಜಿ.ಟಿ.ದೇವೇಗೌಡ ಅವರು ಸನ್ಮಾನಿಸಿದರು.

ಮೈಸೂರು, ಡಿ.6(ಬಿಎಲ್‌ಯು)– ಕನ್ನಡ ಭಾಷೆ ಹಾಗೂ ಸಾಹಿತ್ಯ ಬೆಳೆಸಲು ರಂಗಭೂಮಿ ಶ್ರೇಷ್ಠ ಕಲೆಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪುರಭವನದಲ್ಲಿ ಇಂದು ಪ್ರಭುಲಿಂಗಲೀಲೆ ಎಂಬ ಪೌರಾಣಿಕ ನಾಟಕ ಪ್ರದರ್ಶನದ ವೇಳೆ ಚಾಮುಲ್ ಯೂನಿಯನ್ ಅಧ್ಯಕ್ಷ ಹೆಚ್.ಎಸ್. ನಂಜುಂಡ ಪ್ರಸಾದ್ ಹಾಗೂ ಹಿರಿಯ ರಂಗಕರ್ಮಿ ಕೆರೆಹಳ್ಳಿ ಬಿ.ದೊರೆಸ್ವಾಮಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ರಂಗ ಭೂಮಿಯನ್ನು ಉಳಿಸಿ, ಬೆಳೆಸಬೇಕು, ಈ ಮೂಲಕ ಇಂದು ಹಾಗೂ ಮುಂದಿನ ಪೀಳಿಗೆ ರಂಗಭೂಮಿ ಕಲಿಯಲು ಪ್ರೇರಣೆ ನೀಡಬೇಕು ಎಂದು ಸಲಹೆ ನೀಡಿದರು.

ರಂಗಭೂಮಿ ಶ್ರೇಷ್ಠ ಕಲೆಯಾಗಿದ್ದು, ಸಾಮಾಜಿಕ, ಸಾಂಸ್ಕೃತಿಕ, ಶಿಕ್ಷಣ ಹಾಗೂ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೆರೆಹಳ್ಳಿ ದೊರೆಸ್ವಾಮಿ ಅವರ ನಾಟಕ ನೋಡಿದರೆ ರೋಮಾಂಚನವಾಗುತ್ತದೆ, ಇಂತಹ ಕಲಾವಿದನಿಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ದೊರೆಯಬೇಕು. ಅಲ್ಲದೆ ರಂಗಕರ್ಮಿ ನುಂಜುಂಡಪ್ಪಪ್ರಸಾದ್ ಅವರು ಕೂಡ ಸಹಕಾರ ಕ್ಷೇತ್ರದಲ್ಲಿ ಸ್ಮರಣೀಯ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕುದೇರು ಮಠದ ಶ್ರೀ ಗುರು ಶಾಂತ ಸ್ವಾಮೀಜಿ, ಜಯರಾಮು, ಆಯೋಜಕರಾದ ಬಿ.ಸಿ.ಮಹದೇವಸ್ವಾಮಿ, ಚಿಕ್ಕರೇಖಾ, ಶಿವಕುಮಾರ್, ಮುರುಡಗಳ್ಳಿ ಶಿವಣ್ಣ, ಜಗದೀಶ್, ಮಲ್ಲು, ಸುರೇಶ್ ಕೋಚನಹಳ್ಳಿ ಪುರುಷೋತ್ತಮ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮನೆಯಲ್ಲೇ ಕುಳಿತು ಹಣ ಮಾಡುವ ಆಮಿಷಕ್ಕೆ ಬಲಿಯಾಗಿ 34.62 ಲಕ್ಷ ಕಳೆದುಕೊಂಡ ಉದ್ಯಮಿ

ಮೈಸೂರು,ಡಿ.6– ಮನೆಯಲ್ಲೇ ಕುಳಿತು ಕೆಲಸ ಮಾಡುವ ಮೂಲಕ ಅಧಿಕ ಹಣ ಗಳಿಸಬಹುದೆಂಬ ಆಮಿಷಕ್ಕೆ ಬಲಿಯಾಗಿ ಮೈಸೂರಿನ ವಾಣಿಜ್ಯೋದ್ಯಮಿಯೊಬ್ಬರು 34.62 ಲಕ್ಷ ರೂ. ಕಳೆದುಕೊಂಡಿದ್ದಾರೆ.

ವಿಜಯನಗರ ಮೂರನೇ ಹಂತದ ನಿವಾಸಿಯಾದ ಈ ಉದ್ಯಮಿ, ಟೆಲಿಗ್ರಾಂನಲ್ಲಿ ಮನೆಯಲ್ಲೇ ಕುಳಿತು ಕೆಲಸ ಮಾಡಿ, ಹಣ ಗಳಿಸಬಹುದೆಂಬ ಸಂದೇಶ ನಂಬಿ, ಲಿಂಕ್ ಕ್ಲಿಕ್ ಮಾಡಿದ್ದಾರೆ. ನಂತರ ಪ್ರತಿಷ್ಠಿತ ರಿಲಯನ್ಸ್ ಪ್ರಾಪರ್ಟಿ ಕಂಪನಿ ಹೆಸರಿನಲ್ಲಿ ವಾಟ್ಸಾಪ್ ಸಂದೇಶ ಕಳುಹಿಸಿದ ವಂಚಕರು, ನಂತರ ವೆಬ್ ಸೈಟ್‌ನಲ್ಲಿ ಲಾಗಿನ್ ಮಾಡಿಸಿದ್ದಾರೆ. ಜೂನಿಯರ್, ಸೀನಿಯರ್, ಮಾಸ್ಟರ್, ಎಕ್ಸ್‌ಪರ್ಟ್ ಗ್ರೂಪ್‌ನಲ್ಲಿ ಹಂತ ಹಂತವಾಗಿ ಸಬ್‌ಮಿಟ್ ಮಾಡುವ ಮೂಲಕ ಹೆಚ್ಚು ಹಣ ಗಳಿಸಬಹುದು ಎಂದು ನಂಬಿಸಿದ್ದಾರೆ.

ಈ ಆಮಿಷಕ್ಕೆ ಬಲಿಯಾದ ವಾಣಿಜ್ಯೋದ್ಯಮಿ, ತಮ್ಮ ಹಾಗೂ ಸಂಬಂಧಿಕರ ಖಾತೆಯಿಂದ ಹಂತಹಂತವಾಗಿ 34.62 ಲಕ್ಷಕ್ಕೂ ಹೆಚ್ಚು ಹಣ ವರ್ಗಾವಣೆ ಮಾಡಿದ್ದಾರೆ ಆದರೂ ಯಾವುದೇ ಲಾಭಾಂಶ ಬಂದಿಲ್ಲ. ಆದರೂ ಹಣ ವರ್ಗಾಹಿಸುವಂತೆ ಒತ್ತಡ ಹೆಚ್ಚಾಗಿದೆ. ಈ ನಡುವೆ ಮಹಿಳೆ ಯೊಬ್ಬರು ಕರೆ ಮಾಡಿ ಸಹಾಯ ಮಾಡುವ ನೆಪದಲ್ಲಿ ಮತ್ತೆ 18 ಲಕ್ಷ ರೂ. ಕಳುಹಿ ಸಲು ತಿಳಿಸಿ, ಇಲ್ಲವಾದರೆ ಮೆಂಬರ್‌ಶಿಪ್ ರದ್ದಾಗುವುದಾಗಿ ಬೆದರಿಸಿದ್ದಾಳೆ. ಇದರಿಂದ ಇದೊಂದು ಮೋಸದ ಜಾಲವೆಂದು ಗೊತ್ತಾಗಿ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಸಿದ್ದರಾಮಯ್ಯ ಸಿಎಂ ಆಗಿಲ್ಲದಿದ್ದರೆ ಬಾನು ಮುಷ್ತಾಕ್ ದಸರಾ ಉದ್ಘಾಟಿಸುತ್ತಿರಲಿಲ್ಲ

ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಅಭಿಮತ

ಮೈಸೂರು,ಡಿ.6(ಎಂಟಿವೈ)– ಸಮಾನತೆಯ ಭರವಸೆಯಾಗಿರುವ ಸಮಾಜವಾದಕ್ಕೆ ಪ್ರಪಂಚವನ್ನು ಆಕರ್ಷಿಸುವ ಗುಣವಿದೆ ಎಂದು ಸಂಸ್ಕೃತಿ ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಾಳವೀಯ ಮಿಷನ್ ಅಧ್ಯಾಪಕರ ತರಬೇತಿ ಕೇಂದ್ರ ಸಹಯೋಗದಲ್ಲಿ ಆಯೋಜಿಸಿರುವ 2 ದಿನಗಳ 'ಸಿದ್ಧಾಂತಗಳು ಮತ್ತು ಸಾಹಿತ್ಯ ಪಠ್ಯಗಳು' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಸಮಾಜವಾದಿ ಸಿದ್ಧಾಂತ: ಸಾಹಿತ್ಯ ಪಠ್ಯಗಳು' ವಿಷಯ ಕುರಿತು ಮಾತನಾಡಿದ ಅವರು, ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಯಶಸ್ವಿಯಾದ ಸಮಾಜವಾದ ಭಾರತದಲ್ಲಿ ಯಾಕೇ ಯಶಸ್ವಿಯಾಗಲಿಲ್ಲ ಎಂದು ಉಪನ್ಯಾಸಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಬಂಜಗೆರೆ, ಜಗತ್ತಿನ ಬೇರೆ ಕಡೆ ಇದ್ದಂತೆ ಭಾರತದಲ್ಲಿ ಕಾರ್ಮಿಕ ವರ್ಗವೇ ಇರಲಿಲ್ಲ. ಗ್ರಾಮೀಣ ಉಳಿಗಮಾನ್ಯ ಸಂಬಂಧಗಳನ್ನು ಕಳೆದುಕೊಳ್ಳಲು ಸಾಧ್ಯವಾಗದ ಕಾರಣ ಅದು ಇಲ್ಲಿ ಯಶಸ್ವಿಯಾಗಲಿಲ್ಲ ಎಂದರು.

ಭಾರತದಲ್ಲಿ ಕಾರ್ಮಿಕ ವರ್ಗದಲ್ಲಿನ ಜಾತಿ ಸಂಬಂಧ ನಶಿಸಲಿಲ್ಲ. ಆದರೆ, ಕಾರ್ಮಿಕರ ಆಶಯ ಮತ್ತು ತಿಳವಳಿಕೆಯಾಗಿ ಸಮಾಜವಾದ ಕೆಲಸ ಮಾಡಿದೆ. ನಮಗೆ ರಾಜಕೀಯ ಪ್ರಜಾಪ್ರಭುತ್ವ ಬಂದಿದೆ, ಆದರೆ ಸಾಂಸ್ಕೃತಿಕ ಪ್ರಜಾಪ್ರಭುತ್ವ ಬಂದಿಲ್ಲ. ಭಾರತದಲ್ಲಿ ಕಾರ್ಮಿಕ ಅಥವಾ ಪ್ರಾಧ್ಯಾಪಕನಾದರೂ ಪರಂಪರೆಯಿಂದ ಬಿಡುಗಡೆ ಹೊಂದಿಲ್ಲ. ಕರ್ನಾಟಕದಲ್ಲಿ ಎರಡು ಪ್ರಬಲ ಜಾತಿಗಳು ಅಧಿಕಾರ ಸ್ಥಾನದಲ್ಲಿವೆ. ಉಳಿದವರು ಸ್ಪರ್ಧಿಗಳಷ್ಟೇ. ಸಿಎಂ ಸಿದ್ದರಾಮಯ್ಯ ಸಮಾಜವಾದಿಯಾಗದಿದ್ದರೆ ಲೇಖಕಿ ಬಾನು ಮುಷ್ತಾಕ್ ದಸರಾ ಉದ್ಘಾಟಿಸಲು ಸಾಧ್ಯವಾಗುತ್ತಿರಲಿಲ್ಲ. ಧರ್ಮವಿಲ್ಲದೇ ನಾನು ಬದುಕಬಲ್ಲೆ ಎಂದ ಡಾ. ಅಂಬೇಡ್ಕರ್ ಅವರು ಬೌದ್ಧ ಧಮ್ಮ ಸ್ವೀಕಾರ ಮಾಡಿದರು. ರಾಜಕೀಯ ಭಾಷಣದಿಂದ ಮನಃಪರಿವರ್ತನೆ ಸಾಧ್ಯವಿಲ್ಲ. ನಮ್ಮ ಒಳಗಡೆ ಪರಿವರ್ತನೆಯಾಗಬೇಕು ಎಂದು ಅಭಿಪ್ರಾಯಪಟ್ಟರು.



ವಿಚಾರ ಸಂಕಿರಣದಲ್ಲಿ ಡಾ.ಬಂಜಗೆರೆ ಜಯಪ್ರಕಾಶ್ ಮಾತನಾಡುತ್ತಿರುವುದು

ಕುವೆಂಪು ಸಮಾಜವಾದಿ ಅಲ್ಲ, ಅಧ್ಯಾತ್ಮವಾದಿ. ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಪ್ರಭಾವ ಇದೆ. ಆದರೆ, ಕಾವ್ಯವೊಂದರಲ್ಲಿ ರಾಜಶಾಹಿಗಳನ್ನು ಟೀಕಿಸುವಾಗ ಸಮಾಜವಾದಿ ಆಶಯ ಕಾಣಬಹುದಾಗಿದೆ. ಕುವೆಂಪು ಸಾಹಿತ್ಯದ ಪುನರುತ್ಥಾನವಾದಿ ಅಥವಾ ವಿಚಾರವಾದಿ. ಜತೆಗೆ ಕನ್ನಡ ಪ್ರಜ್ಞೆಯ ಪ್ರತೀಕ ಅಥವಾ ಶೂದ್ರ ಪ್ರಜ್ಞೆಯ ಪ್ರತೀಕ ಎಂದು ಹೇಳಿದರು.

ಇದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿದ ಚಿಕ್ಕೋಡಿಯ ಸಹಾಯಕ ಪ್ರಾಧ್ಯಾಪಕ ಡಾ.ಹೊಂಬಯ್ಯ ಹೊನ್ನಲಗೆರೆ ಅವರು, ಬಹುಶಿಸ್ತೀಯ ಸಿದ್ಧಾಂತಗಳಲ್ಲಿ ಸಮಾಜವಾದವಾದವೂ ಒಂದು. ಸಮಾಜವಾದದ ಚಿಂತನೆಗಳು ಹೇಗಿರುತ್ತವೆ ಅಂದರೆ ಅದು ಡೆರಿಡಾ ಸಿದ್ಧಾಂತದ ಆಶಯದಂತೆ ಸಬಾಲ್ಟರ್ನ್ ಚಿಂತನೆಯ ಒಳನೋಟಗಳಂತೆ ಭಿನ್ನಭಿನ್ನವಾದ ಚಿಂತನೆಗಳನ್ನು ಒಳಗೊಂಡು ಮುಖ್ಯವಾಹಿನಿಗೆ ತಂದು ಸಮಾಜವನ್ನು ಅಪ್ಪಿಕೊಳ್ಳುವುದೇ ನಿಜವಾದ ಸಮಾಜವಾದ ಚಿಂತನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಪ್ರಾಧ್ಯಾಪಕಿ ಪ್ರೊ.ಕವಿತಾ ರೈ, ಡಾ.ನಾಗರಾಜ್ ತಲಕಾಡು, ಡಾ.ಶೈಲಜಾ, ನಂಜುಂಡಯ್ಯ, ಪಿ.ಎಂ. ಕುಮಾರ್, ಡಾ.ಮಂಜು ಹೆಚ್.ಪಿ, ಡಾ ಗೌರೀಶ್, ಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಇಂಡಿಗೋ ಸಂಕಟ; ಪಿಜಿ ವೈದ್ಯಕೀಯ ಪ್ರವೇಶಕ್ಕೆ ದಿನಾಂಕ ವಿಸ್ತರಣೆ–ಕೆಇಎ

ಬೆಂಗಳೂರು, ಡಿ.6– ಇಂಡಿಗೋ ವಿಮಾನಗಳ ಸಂಚಾರ ರದ್ದಾಗಿರುವ ಕಾರಣ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಡಿ.8 ರವರೆಗೆ ದಿನಾಂಕ ವಿಸ್ತರಿಸಿದೆ.


ಅನೇಕ ವಿದ್ಯಾರ್ಥಿಗಳು ಮನವಿ ಮಾಡಿದ ಕಾರಣ ಈ ತೀರ್ಮಾನ ಮಾಡಲಾಗಿದೆ. ಈ ಸಂಬಂಧ ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಛಾಯ್ಸ್ ದಾಖಲಿಸಲು ಡಿ.8ರಂದು ಬೆಳಗ್ಗೆ 11 ಗಂಟೆವರೆಗೆ ಅವಕಾಶ ನೀಡಲಾಗಿದೆ. ಛಾಯ್ಸ್–1 ಆಯ್ಕೆ ಮಾಡಿದ ಅಭ್ಯರ್ಥಿಗಳು ಡಿ.8ರಂದು ಮಧ್ಯಾಹ್ನ 2:30 ರವರೆಗೆ ಕೆಇಎ ಕಚೇರಿಯಲ್ಲಿ ಮೂಲ ದಾಖಲೆ ಸಲ್ಲಿಸಬೇಕು. ಮೂಲ ದಾಖಲೆ ಸಲ್ಲಿಸಿದ ನಂತರ ಡಿ.8 ರೊಳಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು.

ಇಂದು ಬೆಳವಾಡಿಯಲ್ಲಿ ಜಿಟಿಡಿ ಹುಟ್ಟುಹಬ್ಬ ಆಚರಣೆ



ಮೈಸೂರು,ಡಿ.6– ಮೈಸೂರು ತಾಲೂಕು ಬೆಳವಾಡಿ ಗ್ರಾಮದಲ್ಲಿ ನಾಳೆ(ಡಿ.7) ಸಂಜೆ 6ಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಸರಿಗಮಪ ತಂಡದಿಂದ ರಸಮಂಜರಿ ಹಾಗೂ ಗಿಚ್ಚಿಗಿಲಿಗಿಲಿ ಚಂದ್ರಪ್ರಭ ತಂಡದಿಂದ ಹಾಸ್ಯಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಾಪಂ ಮಾಜಿ ಸದಸ್ಯ ಬೆಳವಾಡಿಯ ಮೊಬೈಲ್ ರಮೇಶ ತಿಳಿಸಿದ್ದಾರೆ.

ಉತ್ತರದಲ್ಲಿ ಚಳಿ ಹೊಡೆತ; ದಕ್ಷಿಣದಲ್ಲಿ ಕೋಳಿ ಮೊಟ್ಟೆ ಬೆಲೆ ತುಟ್ಟಿ



- ಮೈಸೂರಿಗೆ ಸರಬರಾಜಾಗುತ್ತಿದ್ದ ಕೋಳಿ ಮೊಟ್ಟೆ ಉತ್ತರ ಭಾರತಕ್ಕೆ ರವಾನೆ
- ದಿನಕ್ಕೆ ಮೈಸೂರಿಗೆ ಆರೇಳು, ಮಂಗಳೂರು–ಕೇರಳಕ್ಕೆ 20 ಲಕ್ಷ ಮೊಟ್ಟೆಗೆ ಬೇಡಿಕೆ

ಮೈಸೂರು,ಡಿ.6(ಎಂಟಿವೈ)– ಉತ್ತರ ಭಾರತದಲ್ಲಿ ವಿಪರೀತ ಚಳಿಯಿಂದಾಗಿ ದಕ್ಷಿಣ ಭಾರತದಲ್ಲಿ ಕೋಳಿ ಮೊಟ್ಟೆ ಉದ್ಯಮ ಲಾಭದಾಯಕವಾಗಿ ಮಾರ್ಪಟ್ಟು, ಮೊಟ್ಟೆ ಬೆಲೆಯಲ್ಲಿ ಭಾರೀ ಏರಿಕೆಯಾಗಿದೆ.

ಪ್ರತಿ ವರ್ಷ ಚಳಿಗಾಲದಲ್ಲಿ ಕೋಳಿಮೊಟ್ಟೆಗೆ ಬೇಡಿಕೆ ಹೆಚ್ಚುತ್ತದೆ ಆದರೆ ಈ ಬಾರಿ ಜಮ್ಮು-ಕಾಶ್ಮೀರ, ದೆಹಲಿ, ಅರುಣಾಚಲ ಪ್ರದೇಶ ಸೇರಿದಂತೆ ಉತ್ತರ ಭಾರತದ ರಾಜ್ಯಗಳಲ್ಲಿ ಅಧಿಕ ಚಳಿ ಇರುವುದರಿಂದ ಕೋಳಿ ಮೊಟ್ಟೆ ಬಳಕೆ ಹೆಚ್ಚಾಗಿದೆ. ಪರಿಣಾಮ ಕರ್ನಾಟಕ, ತಮಿಳುನಾಡು ಸೇರಿದಂತೆ ದಕ್ಷಿಣ ರಾಜ್ಯಗಳಿಂದ ಅಧಿಕ ಪ್ರಮಾಣದ ಕೋಳಿ ಮೊಟ್ಟೆ ಉತ್ತರ ಭಾರತದ ರಾಜ್ಯಗಳಿಗೆ ಸರಬರಾಜಾಗುತ್ತಿದೆ. ಹಾಗಾಗಿ ಮೊಟ್ಟೆ ಬೆಲೆ ಒಂದಕ್ಕೆ 1.50 ರೂ.ನಿಂದ 1.70 ರೂ. ಹೆಚ್ಚಾಗಿದೆ. ಸದ್ಯ ಒಂದು ಮೊಟ್ಟೆಗೆ 6.70 ರೂ.ನಿಂದ 7.60 ರೂ. ತೆರುವಂತಾಗಿದೆ. ದುಬಾರಿಯಾದರೂ ಮೊಟ್ಟೆಗೆ ಬೇಡಿಕೆ ಹೆಚ್ಚುತ್ತಲೇ ಇದೆ.

ಚಳಿಗಾಲಕ್ಕೆ ಉತ್ತಮ ಆಹಾರ: ಚಳಿಗಾಲದ ಉತ್ತಮ ಆಹಾರದಲ್ಲಿ ಕೋಳಿಮೊಟ್ಟೆಯೂ ಒಂದು. ಇದು ದೇಹದ ಉಷ್ಣಾಂಶದೊಂದಿಗೆ ಆರೋಗ್ಯ ರಕ್ಷಣೆಗೆ ನೆರವಾಗುವುದರಿಂದ ನವೆಂಬರ್‌ನಿಂದ ಮೂರ್‍ನಾಲ್ಕು ತಿಂಗಳು ಮೊಟ್ಟೆ ಸೇವನೆ ಮಾಡಲಾಗುತ್ತದೆ. ಅದರಲ್ಲೂ ಉತ್ತರ ಭಾರತದ ಬಹುತೇಕ ರಾಜ್ಯಗಳಲ್ಲಿ ಮೂರು ಹೊತ್ತು ಮೊಟ್ಟೆಯಿಂದ ತಯಾರಿಸಿದ ಆಹಾರ ಪದಾರ್ಥವನ್ನೇ ಸೇವನೆ ಮಾಡುವುದರಿಂದ ಆ ರಾಜ್ಯಗಳಿಂದ ಮೊಟ್ಟೆಗೆ ಬೇಡಿಕೆ ಹೆಚ್ಚಾಗಿದೆ. ಆದರೆ ಮೊಟ್ಟೆ ಉತ್ಪಾದನೆ ಪ್ರಮಾಣ ಸಹಜ ಸ್ಥಿತಿಯಲ್ಲಿರುವುದರಿಂದ ಬೆಲೆ ಹೆಚ್ಚಳವಾಗಿದೆ.

ಕಡಿಮೆ ಪೂರೈಕೆ: ಜಿಲ್ಲೆಯ ವಿವಿಧ ತಾಲೂಕುಗಳ ಕೋಳಿಫಾರಂ ಸೇರಿದಂತೆ ಹೊರ ಜಿಲ್ಲೆಗಳಿಂದ ಮೈಸೂರಿನ ವ್ಯಾಪಾರಿಗಳಿಗೆ ನಿತ್ಯ 25ರಿಂದ 27 ಲಕ್ಷ ಮೊಟ್ಟೆ ಸರಬರಾಜಾಗುತ್ತಿತ್ತು. ಆದರೀಗ ಪೂರೈಕೆ ಪ್ರಮಾಣ ಕಡಿಮೆಯಾಗಿದೆ. ಅದರಲ್ಲೂ ದಾವಣಗೆರೆ, ಹೊಸಪೇಟೆಯಿಂದ 8–9 ಲಕ್ಷ ಮೊಟ್ಟೆ ಬದಲು ಒಂದೆರಡು ಲಕ್ಷ ಮೊಟ್ಟೆ ಮಾತ್ರವೇ ಬರುತ್ತಿದ್ದು, ಹೆಚ್ಚು ಪ್ರಮಾಣದ ಮೊಟ್ಟೆಗಳು ಉತ್ತರ ಭಾರತಕ್ಕೆ ರವಾನೆಯಾಗುತ್ತಿವೆ

ಆರೇಳು ಲಕ್ಷ ಬಳಕೆ: ಮೈಸೂರು ನಗರದ ಹೋಟೆಲ್, ಫಾಸ್ಟ್ ಫುಡ್ ಸೇರಿದಂತೆ ನಾಗರಿಕರಿಗೆ ಪ್ರತಿದಿನ 6–7 ಲಕ್ಷ ಮೊಟ್ಟೆ ಬೇಡಿಕೆ ಇದೆ. ದುಬಾರಿಯಾದರೂ ಮೈಸೂರಲ್ಲಿ ಮೊಟ್ಟೆ ಬಳಕೆ ಕ್ಷೀಣಿಸಿಲ್ಲ. ಮೈಸೂರಿಂದ ಮಂಗಳೂರು ಮತ್ತು ಕೇರಳದ ವಿವಿಧ ಜಿಲ್ಲೆಗಳಿಗೆ ಪ್ರತಿದಿನ 20 ಲಕ್ಷದಷ್ಟು ಮೊಟ್ಟೆ ಪೂರೈಕೆಯಾಗುತ್ತಿದೆ.

ಸರ್ಕಾರಕ್ಕೂ ಮೊಟ್ಟೆ ಸವಾಲು: ಸರ್ಕಾರಿ ಶಾಲಾ ಮಕ್ಕಳಿಗೆ ಬಿಸಿಯೂಟದಲ್ಲಿ ನಿತ್ಯ ಮೊಟ್ಟೆ ನೀಡಲಾಗುತ್ತಿದೆ. ಅಂಗನವಾಡಿ ಮಕ್ಕಳಿಗೆ, ಗರ್ಭಿಣಿ ಹಾಗೂ ಬಾಣಂತಿಯರಿಗೂ ಮೊಟ್ಟೆ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ. ಸದ್ಯ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚು ಮೊಟ್ಟೆ ಸರಬರಾಜಾಗುತ್ತಿರುವುದರಿಂದ ಸರ್ಕಾರದ ಕಾರ್ಯಕ್ರಮಗಳಡಿ ಮೊಟ್ಟೆ ಪೂರೈಸುವುದೂ ಸವಾಲಾಗಿದೆ.

ಚಳಿಗಾಲದಲ್ಲಿ ಬೆಲೆ ಏರಿಕೆ ಸಹಜ

ಚಳಿಗಾಲದಲ್ಲಿ ಕೋಳಿಮೊಟ್ಟೆ ಬಳಕೆ ಹೆಚ್ಚಾಗುತ್ತದೆ. ಅದರಲ್ಲೂ ಉತ್ತರ ಭಾರತದಲ್ಲಿ ಅಧಿಕ ಚಳಿ ಇರುವ ಕೆಲವು ರಾಜ್ಯಗಳಿಂದ ಮೊಟ್ಟೆಗೆ ಭಾರೀ ಬೇಡಿಕೆ ಇದೆ. ತಮಿಳುನಾಡು, ದಾವಣಗೆರೆ, ಹೊಸಪೇಟೆಯಿಂದ ಮೈಸೂರಿಗೆ ಸರಬರಾಜಾಗುತ್ತಿದ್ದ ಮೊಟ್ಟೆ ಉತ್ತರ ಭಾರತಕ್ಕೆ ರವಾನೆಯಾಗುತ್ತಿದೆ. ಆ ಕಾರಣದಿಂದ ಇಲ್ಲಿ ಬೆಲೆ ಹೆಚ್ಚಳವಾಗಿದೆ. ಇದೇ ಮೊದಲ ಬಾರಿಗೆ ಒಂದು ಮೊಟ್ಟೆಗೆ ಒಂದೂವರೆ ರೂ. ದಿಢೀರ್ ಬೆಲೆ ಹೆಚ್ಚಳವಾಗಿದೆ.

-ಅಬುಲ್ ಕಲಾಂ ಹಾಗೂ ಅಬುಲ್,
ಮಾಲೀಕರು, ಸ್ಟಾರ್ ಎಗ್ ಸೆಂಟರ್, ಮೈಸೂರು

ಜೆಎಸ್‌ಎಸ್ 30ನೇ ಸಂಗೀತ ಸಮ್ಮೇಳನ ಸಂಪನ್ನ

ಸಮ್ಮೇಳನಾಧ್ಯಕ್ಷರಾದ ಡಾ.ಸತ್ಯವತಿಯವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿ ಪ್ರದಾನ



30ನೇ ಜೆಎಸ್‌ಎಸ್ ಸಂಗೀತ ಸಮ್ಮೇಳನದ ಸಮಾರೋಪದಲ್ಲಿ ಸಮ್ಮೇಳನಾಧ್ಯಕ್ಷರಾದ ಡಾ.ಟಿ.ಎಸ್.ಸತ್ಯವತಿ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿಯನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರದಾನ ಮಾಡಿದರು.

ಮೈಸೂರು, ಡಿ.6(ಎಸ್‌ಪಿಎನ್)–ವಿದೇಶದಲ್ಲಿ ನೆಲೆಸಿರುವ ಭಾರತೀಯರು ಶಾಸ್ತ್ರೀಯ ಸಂಗೀತ, ನೃತ್ಯ ಸೇರಿದಂತೆ ಇತರೆ ಕಲಾ ಪ್ರಾಕಾರಗಳನ್ನು ತಾವು ಕಲಿತು ವಿದೇಶಿಗರಿಗೂ ಕಲಿಸಿ, ಭಾರತೀಯ ಪರಂಪರೆಗಳನ್ನು ವಿದೇಶದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡುತ್ತಿರುವುದಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮೈಸೂರು ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಲಿಂಗೈಕ್ಯ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಸ್ಮರಣಾರ್ಥ ಏರ್ಪಡಿಸಿರುವ 30ನೇ ಜೆಎಸ್‌ಎಸ್ ಸಂಗೀತ ಸಮ್ಮೇಳನದ ಸಮಾರೋಪದಲ್ಲಿ ಸಮ್ಮೇಳನಾಧ್ಯಕ್ಷರಾದ ಡಾ.ಟಿ.ಎಸ್.ಸತ್ಯವತಿ ಅವರಿಗೆ 'ಸಂಗೀತ ವಿದ್ಯಾನಿಧಿ' ಪ್ರಶಸ್ತಿ ಪ್ರದಾನ ಮಾಡಿ, ಶ್ರೀಗಳು ಮಾತನಾಡಿದರು.

ಮನಸ್ಸಿಗೆ ಘಾಸಿಯಾದಾಗ, ದುಃಖವಾದಾಗ ಸಂಗೀತದಿಂದ ಮನ ಪರಿವರ್ತನೆಗೊಳಿಸಬಹುದು. ಇದು ಭಾರತೀಯರು ಹೆಮ್ಮೆಪಡುವ ಸಂಗತಿ. ಸಂಗೀತದ ಮೂಲಕ ನೊಂದ ಮನಸ್ಸುಗಳಿಗೆ ಸಾಂತ್ವನ ಹೇಳಬಹುದು. ಭಾರತವು ಜಗತ್ತಿಗೆ ನೀಡಿದ ಅಪೂರ್ವ ಕೊಡುಗೆಗಳಲ್ಲಿ ಸಂಗೀತ–ನೃತ್ಯ–ಕಲೆ ಪರಂಪರೆ ಒಂದಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿರುವ ಭಾರತೀಯರು ಶಾಸ್ತ್ರೀಯ ಸಂಗೀತವನ್ನು ಕಲಿತು ಇತರರಿಗೂ ಕಲಿಸುವ ಆತ್ಮವಿನ್ಯಾಸ ವ್ಯಕ್ತಪಡಿಸಿದ್ದಾರೆ. ಆದರೆ, ಬರೀ ಮನರಂಜನೆಗಾಗಿ ಏರ್ಪಡಿಸುವ ಸಂಗೀತದ ಆಕರ್ಷಣೆಯಿಂದ ಶಾಸ್ತ್ರೀಯ ಸಂಗೀತದ ಅಸ್ತಿತ್ವಕ್ಕೆ ಧಕ್ಕೆ ತರುತ್ತಿರುವುದು ಬೇಸರದ ಸಂಗತಿ ಎಂದರು.

ಪ್ರಸ್ತುತ ವಿದೇಶದಲ್ಲಿ ನೆಲೆಸಿರುವ ಭಾರತೀಯರು ದೇಶದ ಕಲೆ, ಸಂಸ್ಕೃತಿ, ಸಂಗೀತವನ್ನು ಹೆಚ್ಚು ಪ್ರದರ್ಶನ ನೀಡಿ ವಿದೇಶಗಳ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಶಾಸ್ತ್ರೀಯ ಸಂಗೀತವನ್ನು ಪ್ರೋತ್ಸಾಹಿಸಿ ಬೆಳೆಸಬೇಕು. ಸಂಗೀತ ವಿದ್ವಾಂಸರಾಗುವುದು ತಪ್ಪಲ್ಲ. ಇಡೀ ಬದುಕನ್ನೆ ಸಂಗೀತಕ್ಕೆ ಸಮರ್ಪಿಸುವುದು ಸುಲಭವಲ್ಲ ಎಂದು ಹೇಳಿದರು.

'ಸಂಗೀತ ವಿದ್ಯಾನಿಧಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ.ಟಿ.ಎಸ್.ಸತ್ಯವತಿ, ಉದಾತ್ತ ಭಾವನೆಯಿಂದ ಇನ್ನೊಬ್ಬರನ್ನು ಕಾಣಬೇಕು ಎಂಬುದನ್ನು ಸುತ್ತೂರು ಮಠ ಕಲಿಸಿಕೊಟ್ಟಿದೆ. ನುಡಿ–ನಡೆ ಒಂದಾಗಿರುವ ಅಪರೂಪದ ಸಂಗಮ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಎಂದು ಬಣ್ಣಿಸಿ, ಯುವ ಸಂಗೀತಾಸ್ತಕರಿಗೆ ಶುಭ ಕೋರಿದರು.

ಮಹಾರಾಜ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ಸಿ.ಎ.ಶ್ರೀಧರ್ ಮಾತನಾಡಿ, ಹೃದಯ ಮತ್ತು ಬುದ್ಧಿ ಪ್ರಚೋದಕವಾದ ಗೋಷ್ಠಿಗಳು ಸಂಗೀತಾಸಕ್ತರನ್ನು ಚಿಂತನಶೀಲರನ್ನಾಗಿ ಮಾಡಿದೆ. ಕಾಲಾವಕಾಶ ಕಡಿಮೆ ಇದ್ದರು ಬಹು ವಿದ್ವತ್ ಪೂರ್ಣವಾಗಿ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಜೆಎಸ್‌ಎಸ್ ಸಂಗೀತ ಸಂಗೀತ ಎನ್ನುವುದು ಮಹಾನ್ ಮಾರ್ಗದರ್ಶನವಾಗಿ ಬೆಳೆದು ಬಂದಿದೆ. ರಾಜಾಶ್ರಯ ನಂತರ ಸುತ್ತೂರು ಮಠದಿಂದ ಶಾಸ್ತ್ರೀಯ ಸಂಗೀತವನ್ನು ಬೆಳೆಸುವ ಕೆಲಸ ಆಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚೆನ್ನೈನಲ್ಲಿ ಸಂಗೀತ ಅಕಾಡೆಮಿ ಇದೆ. ಬೆಂಗಳೂರಿನಲ್ಲಿ ಸಂಗೀತ ಸಮಾಜವಿದೆ. ಆದರೂ ಸಂಗೀತ ಸಮ್ಮೇಳನ ಮತ್ತು ವಿದ್ವತ್ ಗೋಷ್ಠಿ ಮೈಸೂರಿನಲ್ಲಿ ಅವಶ್ಯವಾಗಿದೆ. ಶ್ರೀಗಳು ಕಲೆಯನ್ನು ಪೋಷಣೆ ಮಾಡುವ ಮಹನೀಯರು. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಮೂಲಕ ಸಂಗೀತಗಾರರಿಗೆ ವೇದಿಕೆ ಒದಗಿಸುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಇದಕ್ಕೂ ಮುನ್ನ ವಿದ್ವಾನ್ ಡಿ.ಬಾಲಕೃಷ್ಣ (ವೀಣೆ), ವಿದ್ವಾನ್ ವಿ.ವಂಶೀಧರ(ಕೊಳಲು), ವಿದ್ವಾನ್ ಬಿ.ಎಸ್.ಪ್ರಶಾಂತ್(ಮೃದಂಗ) ಹಾಗೂ ವಿದ್ವಾನ್ ಶಮಿತ್ ಎಸ್.ಗೌಡ ಅವರಿಂದ ಘಟಂ ಜುಗಲ್‌ಬಂದಿ ಪ್ರೇಕ್ಷಕರ ಮನಸೆಳೆಯಿತು. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಶಸ್ತಿ ಪಡೆದ ವಿದ್ಯಾರ್ಥಿಗಳ ವಿವರ

ಸಂಗೀತ ವಿವಿಧ ವಿಭಾಗದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳ ಇಂತಿದ್ದು, ವಚನ ಗಾಯನ ಸೀನಿಯರ್ ವಿಭಾಗದಲ್ಲಿ ಅಂಜನಾ ಮಠಂ (ಪ್ರ), ಎ.ಜಿ.ಪುನೀತ್ (ದ್ವಿ), ವಚನ ಗಾಯನ ಜೂನಿಯರ್ ವಿಭಾಗದಲ್ಲಿ ಚಾರ್ವಿ ಸತೀಶ್ (ಪ್ರ), ಎನ್.ವಿಧಾತ್ರಿ (ದ್ವಿ), ಶಾಸ್ತ್ರೀಯ ಸಂಗೀತ ಸೀನಿಯರ್ ವಿಭಾಗದಲ್ಲಿ ಅಂಜನಾ ಮಠಂ (ಪ್ರ), ಅನಘಾ ಭಾರದ್ವಾಜ್ (ದ್ವಿ), ಶಾಸ್ತ್ರೀಯ ಸಂಗೀತ ಜೂನಿಯರ್ ವಿಭಾಗದಲ್ಲಿ ಲಲಿತ ಶ್ರೀರಾಮ್ (ಪ್ರ), ಶ್ರೀಹಾನ್ ಸುಹಾಸ್ ಕರ್ವೆ (ದ್ವಿ), ಶಾಸ್ತ್ರೀಯ ವಾದ್ಯ ಸಂಗೀತ ವಯೋಲಿನ್ ಸೀನಿಯರ್ ವಿಭಾಗದಲ್ಲಿ ಎ.ಜಿ.ಪುನೀತ್ (ಪ್ರ), ಪಿ.ಎಸ್.ಶೃತ (ದ್ವಿ), ಜೂನಿಯರ್ ವಿಭಾಗದಲ್ಲಿ ಲಲಿತ ಶ್ರೀರಾಮ್ (ಪ್ರ), ವಿ.ಸಮರ್ಥ್ (ದ್ವಿ), ಶಾಸ್ತ್ರೀಯ ವಾದ್ಯ ಸಂಗೀತ–ವೀಣೆ ಜೂನಿಯರ್ ವಿಭಾಗದಲ್ಲಿ ಶ್ರೀರಂಗ ವಿ.ಚಕ್ರವರ್ತಿ (ಪ್ರ), ಎಂ.ಬಿ. ರಾಘವಿ (ದ್ವಿ), ಕೊಳಲು ಜೂನಿಯರ್ ವಿಭಾಗದಲ್ಲಿ ಬಿ.ಓಂಕಾರ್ (ಪ್ರ), ಮೃದಂಗ ಜೂನಿಯರ್ ವಿಭಾಗದಲ್ಲಿ ಕೆ.ಪ್ರಹಲ್ಲಾದ್ ದಾಸ್ (ಪ್ರ), ನಿರುಪಮ ದಿವಾಕರ್ (ದ್ವಿ) ಬಹುಮಾನ ಪಡೆದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸೀರೆ ಖರೀದಿಸಲು ಅಂಗಡಿಗೆ ಹೋದ ಮಹಿಳೆ : ಸೀರೆಗೆ ಕಡಿಮೆ ರೇಟ್ ಹಾಕಿ ಸಾರ್. ನಾವು ಯಾವಾಗಲೂ ನಿಮ್ಮ ಅಂಗಡಿಯಿಂದ ಬಟ್ಟೆ ಖರೀದಿ ಮಾಡೋದು. ನಾವು ನಿಮ್ಮ ಹಳೇ ಗಿರಾಕಿಗಳು. ಡಿಸ್ಕೌಂಟ್ ಕೊಡಿ.
ಅಂಗಡಿ ಮಾಲೀಕ : ಹೌದಾ... ನಮ್ಮ ಅಂಗಡಿ ಪ್ರಾರಂಭವಾಗಿದ್ದೆ ನಿನ್ನೆಯಿಂದ ಮೇಡಂ.

ಮೈಸೂರು ಮಿತ್ರ

ಭಾನುವಾರ, 7 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜೀವನದಲ್ಲಿ ಯಾವ ದಿನದ ಬಗ್ಗೆಯೂ ಪಶ್ಚಾತ್ತಾಪ ಪಡಬೇಡಿ. ಒಳ್ಳೆಯ ದಿನಗಳು ಸಂತೋಷ ಕೊಡುತ್ತವೆ. ಕೆಟ್ಟ ದಿನಗಳು ಅನುಭವದ ಜತೆ ಪಾಠ ಕಲಿಸುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಚ್ಚರ ತಪ್ಪಿ ಮಾತನಾಡಬಾರದು, ಹುಚ್ಚನಂತೆ ವರ್ತಿಸಬಾರದು.

ನಿಮ್ಮ ಪತ್ರಗಳು

ಸಂವಿಧಾನ ದಿನ ಆಚರಣೆಯೇನೋ ಸರಿ ಆದರೆ ಅನುಷ್ಠಾನ?

ಮಾನ್ಯರೆ,

26ನೇ ನವಂಬರ್, ಸರ್ಕಾರ, ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳು ಸೇರಿದಂತೆ ಎಲ್ಲೆಡೆ ಸಂವಿಧಾನ ದಿನವನ್ನು ಆಚರಿಸಿ ಸಂಭ್ರಮಿಸಲಾಯಿತು. ಆ ಸುದ್ದಿಯೊಂದಿಗೆ ರಾಜ್ಯದ ಮುಖ್ಯಮಂತ್ರಿ ಖುರ್ಚಿಯ ಪ್ರಹಸನವೂ ಕೂಡಾ ಸುದ್ದಿಯಲ್ಲಿತ್ತು. ಪ್ರಸ್ತುತ ಚಾಲ್ತಿಯಲ್ಲಿರುವ ಖುರ್ಚಿ ಪ್ರಹಸನದಲ್ಲಿ ಮುಖ್ಯಮಂತ್ರಿಗಳ ಆಯ್ಕೆ ಸಂವಿಧಾನದ ಪ್ರಕಾರ ಶಾಸಕರಿಗಿಲ್ಲ. ಅಲಿಖಿತ ಪದ್ಧತಿಯಂತೆ ಹೈಕಮಾಂಡ್ ನದು. ಇದನ್ನು ಸ್ವತಃ ಉಪಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇದು ಈ ದೇಶದಲ್ಲಿ ಎಲ್ಲಾ ಪಕ್ಷಗಳಲ್ಲೂ ಜಾರಿಯಲ್ಲಿರುವ ಅಲಿಖಿತ ಸಂವಿಧಾನ. ಸಂವಿಧಾನ ದಿನದ ಆಚರಣೆಯಂತೆ ಅದರ ಪಾಲನೆಯಾಗಿದ್ದರೆ ಬಹುಶಃ ಈ ಪ್ರಹಸನ ನೋಡಬೇಕಾದ ಕಿರಿಕಿರಿ ಅವರನ್ನು ಚುನಾಯಿಸಿದ ರಾಜ್ಯದ ಜನಕ್ಕೆ ಬರುತ್ತಿರಲಿಲ್ಲ. ಮುಖ್ಯಮಂತ್ರಿಗಳ ಬಗ್ಗೆ ಶಾಸಕರಿಗಾಗಲೀ ಅಥವಾ ಹೈಕಮಾಂಡ್‌ಗಾಗಲೀ ವಿಶ್ವಾಸವಿಲ್ಲವೆಂಬ ಸಂಶಯವಿದ್ದಲ್ಲಿ ಶಾಸಕಾಂಗ ಪಕ್ಷದ ಸಭೆ ಕರೆದು ಅಲ್ಲಿ ಮತಕ್ಕೆ ಹಾಕಿ ತೀರ್ಮಾನಿಸಿದ್ದರೆ ವಾರಗಟ್ಟಲೇ ಗೊಂದಲದ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ.

ಉಗುರಿನಿಂದ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡಂತಾಗಿದೆ. ಜನಪ್ರತಿನಿಧಿಗಳಿಂದ ಆಯ್ಕೆಯಾಗದೇ ಹೈಕಮಾಂಡ್‌ನಿಂದ ಹೇರಲ್ಪಟ್ಟ ಮುಖ್ಯಮಂತ್ರಿ ಜನರ ಆಯ್ಕೆಯ ಮುಖ್ಯಮಂತ್ರಿ ಆಗಲು ಹೇಗೆ ಸಾಧ್ಯ. ಜನರ ಮುಂದೆ ಬಹಿರಂಗವಾಗಿ ಆಗದ ಒಪ್ಪಂದ ಗುಪ್ತ ಕಾರ್ಯಸೂಚಿಯ ಅಲಿಖಿತ ಸಂವಿಧಾನದ ಪಾಲನೆ ಆಗುತ್ತದೆ. ಇದು ಒಂದು ರೀತಿ ಸಂವಿಧಾನ ವಿರೋಧಿ ಕ್ರಮವಾಗುವುದಿಲ್ಲವೇ? ಸ್ವಾತಂತ್ರ್ಯ ಬಂದು ಎಪ್ಪತ್ತೆಂಟು ವರ್ಷ ಕಳೆದರೂ ಇತರ ವರ್ಗದವರಿಗಿಂತಲೂ ಜೇಷ್ಠತೆಯಲ್ಲಿ, ಪ್ರತಿಭೆಯಲ್ಲಿ, ಆಡಳಿತದಲ್ಲಿ ಅರ್ಹತೆ ಇದ್ದಾಗ್ಯೂ ಸಮಾಜಕ್ಕೆ ಅರಿವಾಗದಂತೆ ಒಬ್ಬ ದಲಿತ ಮುಖ್ಯಮಂತ್ರಿ ಆಗುವುದನ್ನು ತೆರೆಯಿಂದ ಮರೆಗೆ ಸರಿಸುವ ಶಕ್ತಿ ಈ ಅಲಿಖಿತ ಸಂವಿಧಾನ ಹೊಂದಿರುವುದು ಸಂವಿಧಾನ ದಿನದ ಆಚರಣೆಗೆ ಅರ್ಥ ನೀಡುತ್ತದೆಯೇ?

ಐದು ದಶಕಗಳಿಗೂ ಹೆಚ್ಚು ಕಾಲ ರಾಜಕೀಯದಲ್ಲಿ ಒಂದೇ ಪಕ್ಷಕ್ಕೆ ನಿಷ್ಠೆ, ದಕ್ಷತೆ, ಜೇಷ್ಠತೆ ಎಲ್ಲಾ ಇದ್ದಾಗ್ಯೂ ಮುಖ್ಯಮಂತ್ರಿ ಹುದ್ದೆಯಿಂದ ನಯವಾಗಿ ತಿರಸ್ಕರಿಸಲ್ಪಟ್ಟ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಹಿರಿಯರಾದ, ಉನ್ನತ ಶಿಕ್ಷಣವನ್ನೂ ಹೊಂದಿರುವ ಅರ್ಹರಾದ ಹಾಗೂ ಎಂಟು ವರ್ಷಗಳ ಕಾಲ ರಾಜ್ಯದಲ್ಲಿ ಪಕ್ಷದ ಅಧ್ಯಕ್ಷರಾಗಿ ಪಕ್ಷವನ್ನು ಅಧಿಕಾರಕ್ಕೆ ತಂದ ಪರಮೇಶ್ವರ್ ಆಗಲಿ ಆ ಹುದ್ದೆಯಿಂದ ವಂಚಿತರಾಗಲು ಸಂವಿಧಾನ ಕಾರಣವಲ್ಲ ಈ ಅಲಿಖಿತ ಪದ್ಧತಿ. ನಿಮ್ಮ ಜೇಷ್ಠತೆಗೆ ಪಕ್ಷದಲ್ಲಿ ಬೇಕಾದರೆ ಉನ್ನತ ಹುದ್ದೆ ಅಲಂಕರಿಸಿ ಆಡಳಿತದಲ್ಲಿ ಎರಡನೇ ಸ್ಥಾನವನ್ನಾದರೂ ಪಡೆಯಿರಿ, ಆದರೆ ಉನ್ನತ ಹುದ್ದೆಯನ್ನಲ್ಲ. ಒಟ್ಟಿನಲ್ಲಿ ಎಲ್ಲಾ ಪಕ್ಷಗಳಿಗೂ ಈ ಸಂವಿಧಾನ ಪೀಠಿಕೆ ಬರೀ ತೋರಿಕೆ ಅಷ್ಟೇ. ಆಚರಣೆಗಲ್ಲ. ಈ ಅಲಿಖಿತದ ಪ್ರಭಾವ ಅಂದೂ ಅಷ್ಟೇ, ಇಂದೂ ಅಷ್ಟೇ. ಅಸಮಾನತೆಗಳು ಆ ಸಮಯದಲ್ಲಿ ಬಹಿರಂಗವಾಗಲು ಅವಕಾಶ ದೊರೆಯುವುದಿಲ್ಲ, ಚರಿತ್ರೆಯಲ್ಲಿ ಕಾಣುತ್ತದೆ ಅಷ್ಟೇ. ಇಂದಿನ ಅಸಮಾನತೆ ಮುಂದಿನ ಚರಿತ್ರೆಯಲ್ಲಿ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಎಲ್ಲಾ ಪತ್ರಿಕೆಗಳನ್ನು ಸರಿಸಮವಾಗಿ ಕಾಣುವ ಔದಾರ್ಯವನ್ನು ಬೆಳೆಸಿಕೊಳ್ಳಿ...

ಮಾನ್ಯರೆ,

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾನ್ಯವಾಗಿ ಎಲ್ಲ ಬಹಿರಂಗ ಸಭೆಗಳಲ್ಲಿ ಮತ್ತು ಸರ್ಕಾರಿ ಕಾರ್ಯಕ್ರಮಗಳಲ್ಲಿ ನಮ್ಮ ಸರ್ಕಾರ ಸಂವಿದಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಸಮಾನತೆ ವಿರುದ್ಧ ಹೋರಾಟವೇ ನಮ್ಮ ಧ್ಯೇಯ, ಸಮ–ಸಮಾಜ ನಿರ್ಮಾಣ ಮಾಡುವುದೇ ನಮ್ಮ ಗುರಿ. ನಾವು ಯಾರಲ್ಲೂ ಭೇದ – ಭಾವ ಮಾಡುವುದಿಲ್ಲ. ಎಲ್ಲರನ್ನೂ ಸಮಾನವಾಗಿ ಕಾಣುವುದೇ ನಮ್ಮ ಆಶಯ ಎಂದೆಲ್ಲಾ ಉದ್ದುದ್ದ ಭಾಷಣ ಬಿಗಿಯುವುದ ನೋಡಿದ್ದೇವೆ, ಕೇಳಿದ್ದೇವೆ. ಸರ್ಕಾರಿ ಜಾಹೀರಾತು ನೀಡುವಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವುದ ನೋಡಿದರೆ ಇವರದು ಭಾಷಣ ಬರೀ ಬೊಗಳೆ ಎನ್ನಿಸುತ್ತದೆ. ಏಕೆಂದರೆ, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯಲ್ಲಿ ಅತ್ಯಧಿಕ ಪ್ರಸರಣ ಹೊಂದಿರುವ 'ಮೈಸೂರು ಮಿತ್ರ' ದಿನಪತ್ರಿಕೆಗೆ ಸರ್ಕಾರದ ಯಾವುದೇ ಜಾಹೀರಾತುಗಳನ್ನು ನೀಡದೇ ಇರುವುದು ಇಬ್ಬಂದಿತನ ಪರಮಾವಧಿಯಲ್ಲವೇ? ಕಣ್ಣಾಯಿಸಿದೆಲ್ಲೆಡೆ ಕಂಡು ಬರುವ 'ಮೈಸೂರು ಮಿತ್ರ'ನಲ್ಲಿ ಸರ್ಕಾರಿ ಜಾಹೀರಾತುಗಳೇ ಕಾಣಸಿಗದು. ಇದಕ್ಕೆ ಕಾರಣವೇನು? ಇದು ನನ್ನಂತಹ ಸಾವಿರಾರು ಓದುಗರ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳೇ ನಮ್ಮದೇ ಊರಿನ ಪತ್ರಿಕೆಗೆ ಈ ರೀತಿ ತಾರತಮ್ಯ ತರವೇ? ಎಲ್ಲಾ ಪತ್ರಿಕೆಗಳನ್ನು ಸರಿಸಮನಾಗಿ ಕಾಣುವ ಔದಾರ್ಯವನ್ನು ಬೆಳೆಸಿಕೊಳ್ಳಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ಪತ್ರಿಕಾ ವಿತರಕರಿಗೆ ಗುಣಮಟ್ಟದ ಸ್ವೆಟರ್, ಜರ್ಕಿನ್ ವಿತರಿಸಿ

ಮಾನ್ಯರೇ,

ಪ್ರತಿದಿನ ಬೆಳಗಿನ ಜಾವದಲ್ಲಿ ತಾಜಾ ಸುದ್ದಿಯನ್ನು ಮನೆ ಮನೆಗೆ ಪತ್ರಿಕೆಗಳ ಮೂಲಕ ತಲುಪಿಸುವ ಕಾರ್ಯವು ಈ ಚಳಿಗಾಲದ ಮುಂಜಾನೆಯ ಶೀತ ಮತ್ತು ಮಂಜಿನ ವಾತಾವರಣದಲ್ಲಿ ಅತ್ಯಂತ ಕಷ್ಟಕರವಾಗಿರುತ್ತದೆ. ಅದರಲ್ಲೂ ಆರ್ಥಿಕ ಪರಿಸ್ಥಿತಿ ಅಥವಾ ಶಿಕ್ಷಣದ ವೆಚ್ಚಕ್ಕಾಗಿ ದುಡಿಯುವ 10 ರಿಂದ 15 ವರ್ಷ ವಯಸ್ಸಿನ ಮಕ್ಕಳು, ಸೂಕ್ತ ಬೆಚ್ಚಗಿನ ಉಡುಪುಗಳಿಲ್ಲದೆ ಕಾರ್ಯನಿರ್ವಹಿಸುವುದು ಅವರ ಆರೋಗ್ಯಕ್ಕೆ ಮಾರಕವಾಗಬಹುದು. ಆದುದರಿಂದ, ಪತ್ರಿಕಾ ವಿತರಕರು ತಮ್ಮ ಸಿಬ್ಬಂದಿ ವರ್ಗಕ್ಕೆ ಉತ್ತಮ ಗುಣಮಟ್ಟದ ಸ್ವೆಟರ್‌ಗಳು, ಜರ್ಕಿನ್‌ಗಳು ಮತ್ತು ಬೆಚ್ಚಗಿನ ಟೋಪಿಗಳನ್ನು ಒದಗಿಸಬೇಕು. ಇದರಿಂದ ನೀವು ಅವರ ಆರೋಗ್ಯ ಮತ್ತು ಸುರಕ್ಷತೆಯನ್ನು ಕಾಪಾಡಿದಂತೆ ಆಗುತ್ತದೆ ಮತ್ತು ಮಕ್ಕಳು ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಲು ಪ್ರೇರಣೆ ಪಡೆಯುತ್ತಾರೆ. ಇದೇ ಸಂದರ್ಭದಲ್ಲಿ, ಅಂದವಾಗಿ ಮುದ್ರಿಸಿರುವ ಪತ್ರಿಕೆಯನ್ನು ಮನೆ ಮನೆಗೆ ಹಾಕುವಾಗ ಅತಿಯಾಗಿ ಮಡಚಿ ವಿಕಾರಗೊಳಿಸುವುದು ಹಾಗೂ ಮನೆಗಳ ಬಾಗಿಲು ಅಥವಾ ಗೇಟ್ ಬಳಿ ನೀರು ನಿಂತಿದ್ದರೆ ಅದರಲ್ಲಿ ಹಾಕಿ ನೆನೆಸುವುದು ಸರಿಯಲ್ಲ. ಸಾಧ್ಯವಾದಷ್ಟು ಒಣಗಿದ ಮತ್ತು ಸುರಕ್ಷಿತವಾದ ಸ್ಥಳದಲ್ಲಿ ಪತ್ರಿಕೆಯನ್ನು ಇಡಲು ನಿಮ್ಮ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ವಿನಂತಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಸರ್ವ ಧರ್ಮ ಸಮನ್ವಿತೆ



"ಎಲ್ಲರೂ ಎಲ್ಲ ಸಮಯದಲ್ಲೂ ಒಗ್ಗಟ್ಟಾಗಿಯೇ ಇರುತ್ತಿದ್ದರೆಂದು ಹೇಳಲಾಗದಿದ್ದರೂ ಸರ್ವ ಧರ್ಮ ಸಹಿಷ್ಣುತೆ ಎಂಬುದನ್ನು ಕಲಿಸಿದುದು ಸುಳ್ಳಲ್ಲ. ಅಂತಹ ಧರ್ಮ ಸಮನ್ವಯತೆ ಇದ್ದ ಕಾಲಘಟ್ಟಕ್ಕೆ ಸೇರಿದುದು ಈ ಮೇಲೆ ಹೇಳಿದ ಶಾಸನ. ಭಾರತದ ವಿಭಜನೆಯ ಕಾಲವು ಮನುಷ್ಯರನ್ನು ಮತ್ತಷ್ಟು ದೂರ ದೂರ ಮಾಡಿದರೆ, ಮತಾಂಧತೆಯು ಈ ದಳ್ಳುರಿಯನ್ನು ಮತ್ತಷ್ಟು ಧಗಧಗಿಸುವಂತೆ ಮಾಡಿತು. ಈಗ ನಾವು ವಿಚಾರವಂತರಿದ್ದೇವೆ, ವಿದ್ಯಾವಂತರಿದ್ದೇವೆ. ಆದರೆ ಧರ್ಮ ಸಹಿಷ್ಣುತೆಯ ವಿಷಯದಲ್ಲಿ ಹಾಗೆ ಇದ್ದೇವೆಯೇ? ಎಂದು ಪ್ರತಿಯೊಬ್ಬ ಮನುಷ್ಯನೂ ಪ್ರಶ್ನಿಸಿಕೊಳ್ಳಬೇಕಾಗಿದೆ.

ಬೇಲೂರಿನ ಒಂದು ಶಾಸನದ ಬಗ್ಗೆ ಕೇಳಿದ್ದೀರಾ ಅಥವಾ ಅದನ್ನು ಓದಿದ್ದೀರಾ? ?ಯಂಶೈವಾ ಸಮುಪಾಸತೆ ಶಿವ ಇತಿ ಬ್ರ**ಹ್ಮೇತಿ ವೇದಾಂತಿನಃ ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ಅರ್ಹನ್ನಿತಿ ಜೈನ ಶಾಸನರತಾಃ ಕರ್ಮೇತಿ ಮೀಮಾಂಸಕಾಃ ಸೋ**ಯಂವೋ ವಿಧಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ(ತ್ರೈಲೋಕ್ಯನಾಥೋ ವಿಭುಃ)

ಹೀಗೆ ಬರುತ್ತದೆ ಅದು. ಇದನ್ನು ಓದಿದಾಗಲೆಲ್ಲಾ ನನಗೆ ತುಂಬಾ ಕಸಿವಿಸಿಯಾಗುತ್ತದೆ. ಏಕೆ ಎಂದಿರಾ ಹೇಳುತ್ತೇನೆ ಇರಿ. ಇದು ಹೊಯ್ಸಳರ ಕಾಲದ ಒಂದು ಶಾಸನ. ಯಾರ್ಯಾರು ಯಾವ ಯಾವ ನಂಬಿಕೆಗಳನ್ನು ಪ್ರಮಾಣವಾಗಿ ಸ್ವೀಕರಿಸುತ್ತಾರೆ ಎಂದು ಹೇಳುವಂತಹ ಒಂದು ಪದ್ಯ ಇದು. ಶೈವರು ಶಿವನನ್ನು, ವೇದಾಂತಿಗಳು ಬ್ರಹ್ಮನನ್ನು, ಬೌದ್ಧರು ಬುದ್ಧನನ್ನು, ನೈಯಾಯಿಕರು ಕರ್ತನನ್ನು, ಜೈನರು ಅರ್ಹಂತನನ್ನು ಪ್ರಮಾಣವಾಗಿ ಸ್ವೀಕರಿಸಿ ನಂಬಿದರೆ, ಮೀಮಾಂಸಕರು ಕರ್ಮ ಸಿದ್ಧಾಂತವನ್ನು ನಂಬಿದರು. ಈ ಎಂತಹವನು ಇದ್ದಾನೋ ಆ ಕೇಶವ ಅಥವಾ ತ್ರೈಲೋಕನಾಥನು ನಮ್ಮ ಇಷ್ಟಾರ್ಥವನ್ನು ಕೊಡಲಿ ಎಂಬುದು ಇದರ ಅರ್ಥ.

ಯಾರು ಯಾವುದನ್ನು ನಂಬಿದರೂ ಚಿಂತೆ ಇಲ್ಲ. ಅಥವಾ ಯಾರು ಯಾವ ದೈವವನ್ನಾಗಲೀ ಅಥವಾ ವೇದಗಳನ್ನಾಗಲೀ ಉಪನಿಷತ್ತುಗಳನ್ನಾಗಲೀ ಪ್ರಮಾಣವನ್ನಾಗಿ ಸ್ವೀಕರಿಸಿದರೂ ಅಡ್ಡಿ ಇಲ್ಲ. ನಿಮಗೆ ದೇವರ ಇರುವಿಕೆಯಲ್ಲಿ ನಂಬಿಕೆಯೇ ಇಲ್ಲವೇ ಚಿಂತೆ ಇಲ್ಲ. ನಿಮ್ಮಂತಹ ನಾಸ್ತಿಕರೂ ಇಲ್ಲಿ ಇರಬಹುದು. ನಮ್ಮಲ್ಲಿ ಚಾರ್ವಾಕರೂ ಇದ್ದರಲ್ಲ ಈ ಹಿಂದೂ ದೇಶದ ಉತ್ಕೃಷ್ಟತೆ ಅಡಗಿರುವುದೇ ಅಲ್ಲಿ. ಅಂದರೆ ಯಾವುದೇ ಧರ್ಮದ, ಮತದ, ವಿಚಾರದ, ಸಿದ್ಧಾಂತದ ವ್ಯಕ್ತಿಗೂ ಇಲ್ಲಿ ಮುಕ್ತ ಅವಕಾಶ ಇತ್ತು. ಅಂದರೆ ವೈಚಾರಿಕ ಸ್ವಾತಂತ್ರ್ಯಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬಹುಶಃ ಭಾರತ ಬಿಟ್ಟರೆ ಮತ್ತೆಲ್ಲೂ ಸಿಗಲಿಕ್ಕಿಲ್ಲ. ಇದು ಅದೆಷ್ಟು ಮಹತ್ವದ ಮತ್ತು ಗರ್ವದ ಸಂಗತಿ ಎಂದು ನಿಮಗೆ ಅನಿಸುವುದಿಲ್ಲವೇ? ಜಗತ್ತಿನ ಯಾವುದೇ ದೇಶವನ್ನು ನೋಡಿ, ಹೀಗೆ ಎಲ್ಲರನ್ನೂ ಕೈಚಾಚಿ ಬರಮಾಡಿಕೊಳ್ಳುವ ಧರ್ಮ ಎಲ್ಲಾದರೂ ಸಿಕ್ಕಿದರೆ ದಯವಿಟ್ಟು ತಿಳಿಸಿ.


ಜಗತ್ತಿನ ಅನೇಕ ನಾಗರಿಕತೆಗಳು ಇನ್ನೂ ಕಣ್ಣು ಬಿಡದಿದ್ದಾಗ ಅಥವಾ ಇನ್ನೂ ಕಣ್ಣು ಬಿಡುತ್ತಿರುವಾಗ ಅದಾಗಲೇ ಭಾರತದಲ್ಲಿ ವಸುಧೈವ ಕುಟುಂಬಕಮ್, ಸರ್ವೇ ಜನಾಃ ಸುಖಿನೋ ಭವಂತು ಎಂಬಂತಹ ಉದಾತ್ತ ವಿಚಾರಗಳು ಅನುಷ್ಠಾನಕ್ಕೆ ಬಂದಾಗಿತ್ತು. ನಮ್ಮ ಋಷಿ ಮುನಿಗಳ ಚಿಂತನ ಮಂಥನದಿಂದ ಉದಿಸಿ ಬಂದಂಥ ನವನೀತಗಳು ಅವು. ಈ ಇಡೀ ವಿಶ್ವವನ್ನು, ಅದರೊಳಗಿನ ಮನುಷ್ಯ ಕುಲವನ್ನು ಅವರು ಒಂದೇ ಕುಟುಂಬ ಎಂಬಂತೆ ಭಾವಿಸುವುದಿದೆಯಲ್ಲಾ, ಆ ಭಾವನೆಯೇ ಅದೆಷ್ಟು ಮನೋವೈಶಾಲ್ಯದಿಂದ ಕೂಡಿದುದು! ಹೀಗೆ ಭಾವಿಸಿದುದರಿಂದಲೇ ಭಾರತವು ಮೂಲತಃ ಹಿಂದೂ ದೇಶವಾದರೂ ಇಲ್ಲಿ ಅನೇಕ ಧರ್ಮ, ಮತಗಳು ಹುಟ್ಟಿದವು, ಹೊರಗಿನಿಂದ ಬಂದವು, ಬಲಾತ್ಕಾರದಿಂದ–ಒತ್ತಾಯದಿಂದ ತಳ ಊರಿದವು. ಸರ್ವ ಧರ್ಮ ಸಹಿಷ್ಣುತೆಗೆ ಇದಕ್ಕಿಂತ ಜ್ವಲಂತ ಉದಾಹರಣೆ ಸಿಗಲು ಸಾಧ್ಯವೇ?

ಪ್ರತಿಯೊಬ್ಬ ನಾಗರೀಕನಿಗೂ ಸ್ವಂತ ವಿಚಾರ ಮಾಡಿ, ತನಗೆ ಒಪ್ಪುವ, ಸರಿ ಎನಿಸುವ ಧರ್ಮವನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ನೆಲದಲ್ಲಿ ಇದ್ದಿತು. ಯಾವ ಧರ್ಮವನ್ನಾಗಲೀ, ವಿಚಾರವನ್ನಾಗಲೀ ಒಪ್ಪಲೇಬೇಕೆಂಬ ಒತ್ತಾಯ ಇಲ್ಲದೆ, ಯಾವುದನ್ನೂ ಪ್ರಶ್ನಿಸುವ ಅಧಿಕಾರವು ಮುಕ್ತವಾಗಿದ್ದುದೇ ಇಲ್ಲಿಯ ವಿಶೇಷತೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನೂ ಇದನ್ನೇ ಅರ್ಜುನನಿಗೆ ಹೇಳುತ್ತಾನೆ. ನಾನು ಹೇಳಿದ್ದೇನೆ ಎಂಬುದಕ್ಕಾಗಿ ನೀನು ಯಾವುದನ್ನೂ ಒಪ್ಪಬೇಕಾಗಿಲ್ಲ. ಪ್ರತಿಯೊಂದನ್ನೂ ಪ್ರಶ್ನಿಸು. ನಿನಗೆ ಒಪ್ಪಿಗೆ ಆದಾಗ ಮಾತ್ರ ಸ್ವೀಕರಿಸು ಎಂದು. ಇಷ್ಟು ವೈಚಾರಿಕ ಸ್ವಾತಂತ್ರ್ಯವನ್ನು ಕೊಡುವ ಧರ್ಮ ಬಹುಶಃ ಹಿಂದೂ ಧರ್ಮ ಮಾತ್ರ. ಈ ಎತ್ತರ–ಬಿತ್ತರಗಳ ವಿಚಾರಗಳು ನಮ್ಮ ಬೇರಿನಲ್ಲಿಯೇ ಇರುವಾಗ ಸಹಜವಾಗಿಯೇ ಈ ನೆಲದಲ್ಲಿ ಅನೇಕ ಧರ್ಮಗಳು ಹುಟ್ಟಿಕೊಂಡವು. ಬೌದ್ಧ, ಜೈನ, ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಚಾರ್ವಾಕ ಒಂದೇ ಎರಡೇ ಹೊರಗಿನಿಂದ ಬಂದ ಕ್ರೈಸ್ತ ಮುಸಲ್ಮಾನ, ಪಾರಸೀ ಇತ್ಯಾದಿ ಧರ್ಮಗಳೂ ಭಾರತದಲ್ಲಿ ಬೇರು ಬಿಟ್ಟವು. ಎಲ್ಲರೂ ಇದೇ ಭಾರತದ ನೆಲದಲ್ಲಿ ಅವರವರ ಧರ್ಮಗಳಿಗೆ ಅನುಸಾರವಾಗಿ ತಮ್ಮ ಗುಡಿಯೋ ಪ್ರಾರ್ಥನಾ ಮಂದಿರಗಳನ್ನು ಕಟ್ಟಿಕೊಂಡು ಇರಲು ತೊಡಗಿದುದು ವಾಸ್ತವ. ಅದರಲ್ಲಿ ಕೆಲವರು ನಮ್ಮ ಗುಡಿ ಗೋಪುರಗಳನ್ನು ಕೆಡವಿ, ಅದರ ಮೇಲೆ ತಮ್ಮ ಧರ್ಮದ ಪ್ರಾರ್ಥನಾ ಮಂದಿರಗಳನ್ನು ಕಟ್ಟುವುದನ್ನೇ ಹೆಗ್ಗಳಿಕೆ ಎಂದು ಭಾವಿಸಿದುದು ಸುಳ್ಳಲ್ಲ. ಅದಕ್ಕೆ ಕಾರಣ ಎಂದರೆ ಎಲ್ಲರಲ್ಲಿ ಒಂದಾಗಿ, ಪರಸ್ಪರ ಗೌರವಿಸುತ್ತ ಬೆರೆಯುವುದರ ಬದಲಾಗಿ ನನ್ನದೇ ಶ್ರೇಷ್ಠ ಎಂಬ ಭಾವನೆ ಇದ್ದುದು. ನಮ್ಮ ಸಾವಿರಾರು ಗುಡಿಗಳು ತಳ ಸೇರಿರುವ ಉದಾಹರಣೆ ಕಣ್ಣ ಮುಂದಿದೆ. ಇಂದು ಹಾಳು ಹಂಪೆ ಎಂದು ಕರೆಸಿಕೊಳ್ಳುವ, ಒಂದು ಕಾಲಕ್ಕೆ ಇಡೀ ಜಗತ್ತನ್ನು ಆಕರ್ಷಿಸಿದ ಹಂಪೆಯಲ್ಲಿ ಶೈವ ಗುಡಿಗಳೆಲ್ಲ ಸುಸ್ಥಿತಿಯಲ್ಲಿದ್ದು, ಭವ್ಯ ವೈಷ್ಣವ ಗುಡಿಗಳು ಮಾತ್ರ ಒಡೆದು ಮುಕ್ಕಾಗಿ ಹಾಳಾಗಿ ಹೋಗಿರುವುದಕ್ಕೆ ಕಾರಣ ಏನಿರಬಹುದು ಎಂದು ಅನೇಕ ಬಾರಿ ನನಗೆ ಅನಿಸಿದ್ದುಂಟು.

ಎಲ್ಲರೂ ಎಲ್ಲ ಸಮಯದಲ್ಲೂ ಒಗ್ಗಟ್ಟಾಗಿಯೇ ಇರುತ್ತಿದ್ದರೆಂದು ಹೇಳಲಾಗದಿದ್ದರೂ ಸರ್ವ ಧರ್ಮ ಸಹಿಷ್ಣುತೆ ಎಂಬುದನ್ನು ಕಲಿಸಿದುದು ಸುಳ್ಳಲ್ಲ. ಅಂತಹ ಧರ್ಮ ಸಮನ್ವಯತೆ ಇದ್ದ ಕಾಲಘಟ್ಟಕ್ಕೆ ಸೇರಿದುದು ಈ ಮೇಲೆ ಹೇಳಿದ ಶಾಸನ. ಭಾರತದ ವಿಭಜನೆಯ ಕಾಲವು ಮನುಷ್ಯರನ್ನು ಮತ್ತಷ್ಟು ದೂರ ದೂರ ಮಾಡಿದರೆ, ಮತಾಂಧತೆಯು ಈ ದಳ್ಳುರಿಯನ್ನು ಮತ್ತಷ್ಟು ಧಗಧಗಿಸುವಂತೆ ಮಾಡಿತು. ಈಗ ನಾವು ವಿಚಾರವಂತರಿದ್ದೇವೆ, ವಿದ್ಯಾವಂತರಿದ್ದೇವೆ. ಆದರೆ ಧರ್ಮ ಸಹಿಷ್ಣುತೆಯ ವಿಷಯದಲ್ಲಿ ಹಾಗೆ ಇದ್ದೇವೆಯೇ? ಎಂದು ಪ್ರತಿಯೊಬ್ಬ ಮನುಷ್ಯನೂ ಪ್ರಶ್ನಿಸಿಕೊಳ್ಳಬೇಕಾಗಿದೆ. ನಮ್ಮ ವಿದ್ಯೆಯ ಗುರಿ ಏನಾಗಿರಬೇಕು? ನಾವು ಸುಸಂಸ್ಕೃತರು ಎಂದು ಅನಿಸಿಕೊಳ್ಳಲು ಅರ್ಹತೆ ಬರುವುದು ಯಾವಾಗ? ನಮ್ಮ ಧರ್ಮದ ನೀತಿ ಬೋಧನೆಗಳು ಏನು? ಎಂಬುದನ್ನು ಪ್ರತೀ ಧರ್ಮದವರೂ ಕೇಳಿಕೊಳ್ಳಬೇಕಾಗಿದೆ.

ದಯವಿಲ್ಲದ ಧರ್ಮವಾವುದಯ್ಯಾ, ದಯವೇ ಧರ್ಮದ ಮೂಲವಯ್ಯಾ; ಎಂದರು ಬಸವಣ್ಣನವರು. ಸಕಲ ಪ್ರಾಣಿಗಳಲಿ ದಯೆ ಎಂಬುದು ಇರಬೇಕು ಎನ್ನುವಾಗ, ಮತಾಂಧತೆಯನ್ನು ಅಥವಾ ಮತದ ಹೆಸರಿನಲ್ಲಿ ಕ್ರೂರ–ಮಾನವೀಯ ಕೃತ್ಯಗಳನ್ನು ಮಾಡುವ ಮನಸುಗಳನ್ನು ಏನೆಂದು ಕರೆಯಬೇಕು. ಈ ಭೂಮಿಯ ಮೇಲೆ ನಮ್ಮನ್ನು ಹುಟ್ಟಿಸಿದ ಆ ಭಗವಂತ ಪ್ರಾಣಿಗಳು, ಸಸ್ಯಗಳು ಎಲ್ಲವನ್ನೂ ಸೃಷ್ಟಿಸಿ, ಎಲ್ಲರೂ ಒಟ್ಟಾಗಿ ಬಾಳಿ ಎಂದು ಹೇಳಿದ. ಪರಸ್ಪರ ಕಚ್ಚಾಡಿಕೊಂಡು, ಒಬ್ಬರನ್ನೊಬ್ಬರು ಕೊಲ್ಲುತ್ತಾ, ಹಿಂಸಿಸುತ್ತಾ ನನ್ನ ಹೆಸರಿನಲ್ಲಿ ಬಡಿದಾಡಿ ಎಂದಲ್ಲ. ನೋಡಿ, ಮತ್ತೆ ಹೇಳಬೇಕಾಗಿದೆ ದೇವನೊಬ್ಬ, ನಾಮ ಹಲವು ಎಂಬುದೂ ಭಾರತೀಯ ವಿಚಾರವೇ. ಆ ದೇವನನ್ನು ಯಾವ ಹೆಸರಿನಿಂದ ಕರೆದರೂ ಅದು ಅವನಿಗೆ ಮುಟ್ಟುತ್ತದೆ. ಇಷ್ಟು ಅರಿಯದ ಮೂಢರಿಗೆ ಏನೆನ್ನಬೇಕು ಕಲಿತ ವಿದ್ಯೆಯ ಪ್ರಯೋಜನವನ್ನು ಮತ್ತೊಬ್ಬ ಮನುಷ್ಯನನ್ನು ಕೊಲ್ಲಲು ಬಳಸಿಕೊಂಡರೆ ಅದು, ಆ ವಿದ್ಯೆಗೇ ಮಾಡುವ ಅಪಚಾರ. ತೀರಾ ಶೋಚನೀಯ ಸಂಗತಿ ಎಂದರೆ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಬಹುತೇಕ ಕ್ರೌರ್ಯ ಹಿಂಸಾಚಾರಗಳೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವುದು. ಇದಕ್ಕಿಂತ ದೊಡ್ಡ ದುರಂತ ಬೇರಿರಲು ಸಾಧ್ಯವೇ ಪ್ರಸ್ತುತ ವಾತಾವರಣವನ್ನು, ವಿದ್ಯಮಾನಗಳನ್ನು ನೋಡಿದಾಗ ಈ ಲೇಖನದ ಆರಂಭದಲ್ಲಿ ಹೇಳಿದ ಶಾಸನದ ಸಾಲುಗಳು ನಮ್ಮಲ್ಲಿ ಕಸಿವಿಸಿ ಉಂಟು ಮಾಡದಿರಲು ಹೇಗೆ ಸಾಧ್ಯ ನೀವೇ ಹೇಳಿ.

ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್‌ಗೆ ಹುಟ್ಟುಹಬ್ಬದ ಶುಭಾಶಯ...





ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಅವರನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಹಿಳಾ ಕಾಂಗ್ರೆಸ್ಸಿನ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್ ಮೋದಾಮಣಿ, ನಗರ ಕಾಂಗ್ರೆಸ್ ಓಬಿಸಿ ಘಟಕದ ಹಿರಿಯ ಉಪಾಧ್ಯಕ್ಷ ಎಂ.ಎಲ್.ಗೋಪಾಲ್, ಪ್ರಧಾನ ಕಾರ್ಯದರ್ಶಿ ವಿನೋದ್ ಉಪಾರ್, ಸಂಚಾಲಕ ಲಕ್ಷ್ಮಿ ನಾರಾಯಣ, ಸಂಘಟನಾ ಕಾರ್ಯದರ್ಶಿ ಶ್ರೀಕಾಂತ್ ಯಾದವ್, ಸೇವಾದಳದ ಮೋಹನ್, ಮಂಗಳ, ಮಂಜುಳಾ, ಲೀಲಾವತಿ ಇನ್ನಿತರರು ಸನ್ಮಾನಿಸಿ, ಶುಭಾಶಯ ಕೋರಿದರು. ಬಲಚಿತ್ರದಲ್ಲಿ ಎನ್.ಆರ್.ನಾಗೇಶ್ ಅವರು ಕುಕ್ಕೆ ಸುಬ್ರಮಣ್ಯೇಶ್ವರ ಮಠದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮುಖಂಡರಾದ ಹರೀಶ್ ರೆಡ್ಡಿ, ರಾಜು ರೆಡ್ಡಿ, ದುರ್ಗಾಂಬ ಶ್ರೀನಿವಾಸ್, ತಿ.ನರಸೀಪುರ ನಾಗೇಂದ್ರ, ಹೆಚ್.ಡಿ.ಕೋಟೆ ನರಸಿಂಹ, ಹುಣಸೂರು ದೇವರಾಜ್, ಬನ್ನೂರು ಪುರಸಭಾ ಮಾಜಿ ಸದಸ್ಯ ಮುರಳೀಧರ್, ತಿ.ನರಸೀಪುರ ಪುರಸಭಾ ಸದಸ್ಯ ನಾಗರಾಜ್, ಹ್ಯಾಂಡ್‌ಪೋಸ್ಟ್ ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.6–ಡಿ.8ರಿಂದ 13ರವರೆಗೆ ಭೂಗತ ಕೇಬಲ್ ಅಳವಡಿಸುವ ಕಾರ್ಯ ನಿಮಿತ್ತ ಬೆಳಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಡಿ.8ರಂದು ಯಾದವಗಿರಿ ಹಾಗೂ ಸುತ್ತಮುತ್ತ. ಡಿ.9ರಂದು ಪಡುವಾರಹಳ್ಳಿ, ವಿನಾಯಕನಗರ, ದೇವಸ್ಥಾನರಸ್ತೆ, ಮಹಾರಾಣಿ ಕಾಲೇಜು, ಆದಿಪಂಪಾ ರಸ್ತೆ, ವಾಲ್ಮೀಕಿ ರಸ್ತೆ ಹಾಗೂ ಸುತ್ತಮುತ್ತ. ಡಿ.8, 10 ಮತ್ತು 12ರಂದು ಹುಣಸೂರು ಮುಖ್ಯ ರಸ್ತೆ, ವಿಜಯನಗರ 1ನೇ ಹಂತ, ಮಿನಿ ವಾಟರ್ ಟ್ಯಾಂಕ್ ಏರಿಯಾ, ಕೆ.ಡಿ.ರೋಡ್ ಹಾಗೂ ಸುತ್ತಮುತ್ತ. ಡಿ.9, 11, 13ರಂದು ಕೆ.ಡಿ. ರೋಡ್, ದೇವಸ್ಥಾನದ ರಸ್ತೆ, ಬಿ.ಎಂ.ಹೆಚ್ ಸುತ್ತಮುತ್ತ, ಜಯಲಕ್ಷ್ಮಿ ಪುರಂ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಪೊಲೀಸ್ ಇಲಾಖೆಗೆ ಗೃಹರಕ್ಷಕ ದಳ ಹೆಗಲು ನೀಡಿದೆ

● ಗೃಹರಕ್ಷಕರ ಸೇವೆ ಪ್ರಶಂಸಿಸಿದ ಡಿಸಿಪಿ ಸುಂದರ್‌ರಾಜ್ ● ಮೈಸೂರಲ್ಲಿ ಗೃಹರಕ್ಷಕರ ದಿನಾಚರಣೆ

ಮೈಸೂರು,ಡಿ.6(ಎಸ್‌ಬಿಡಿ)– ಪೊಲೀಸ್ ಇಲಾಖೆಗೆ ಗೃಹರಕ್ಷಕ ದಳ ಹೆಗಲು ನೀಡಿ, ಸೇವೆ ಸಲ್ಲಿಸುತ್ತಿದೆ ಎಂದು ಮೈಸೂರು ನಗರ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಬಣ್ಣಿಸಿದರು.

ಮೈಸೂರು ಜಿಲ್ಲಾ ಗೃಹರಕ್ಷಕ ದಳದ ವತಿಯಿಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಅಖಿಲ ಭಾರತ ಗೃಹರಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ, ಅವರು ಮಾತನಾಡಿದರು. ಜಿಲ್ಲೆಯಲ್ಲಿ ಸುಮಾರು 1300 ಗೃಹರಕ್ಷಕರಿದ್ದು, ಪೊಲೀಸ್ ಸೇರಿದಂತೆ ಸುಮಾರು 18 ಇಲಾಖೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಮೂಲಕ ಗೃಹರಕ್ಷಕರು(ಹೋಂ ಗಾರ್ಡ್ಸ್) ಪೊಲೀಸರಿಗಿಂತಲೂ ಅತ್ಯಂತ ಸೂಕ್ಷ್ಮತೆಯಿಂದ ಕೆಲಸ ಮಾಡಬಲ್ಲ ಅನುಭವ ಹೊಂದಿದ್ದಾರೆ. ಹಬ್ಬ, ಉತ್ಸವ, ಜಾತ್ರೆ, ಚುನಾವಣೆ ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಬಂದೋಬಸ್ತ್‌ನಲ್ಲಿ ನೆರವಾಗುವುದರ ಜೊತೆಗೆ, ನೆರೆ, ಬರಗಾಲ, ಅವಘಡಗಳಂತಹ ಕ್ಲಿಷ್ಟಕರ ಸನ್ನಿವೇಶಗಳಲ್ಲೂ ಸಮರ್ಥವಾಗಿ ಕಾರ್ಯ ನಿರ್ವಹಿಸುವ ಗೃಹರಕ್ಷಕರ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾ ಗೃಹರಕ್ಷಕ ದಳದ ವತಿಯಿಂದ ನಡೆದ ಅಖಿಲ ಭಾರತ ಗೃಹರಕ್ಷಕರ ದಿನಾಚರಣೆಯಲ್ಲಿ ನಗರದ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಮಾತನಾಡಿದರು.

ಪೊಲೀಸ್ ಇಲಾಖೆ ಹಾಗೂ ಗೃಹರಕ್ಷಕ ದಳದ ನಡುವೆ ಬಹಳಷ್ಟು ಸಾಮ್ಯತೆಗಳಿವೆ. ಪೊಲೀಸರಿಗೆ ಉತ್ತಮ ವೇತನದ ಜೊತೆಗೆ ಇನ್ನಿತರ ಸೌಕರ್ಯಗಳಿವೆ. ಆದರೆ ಸ್ವಯಂಸೇವಕ ಸಂಘಟನೆ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹರಕ್ಷಕ ದಳದವರಿಗೆ ಸೌಕರ್ಯಗಳಿಲ್ಲ. ಪೊಲೀಸ್ ಇಲಾಖೆಯೊಂದಿಗೆ ಕೆಲಸ ಮಾಡುವವರಿಗೆ ದಿನವಹಿ 800 ರೂ. ಹಾಗೂ ಇತರೆ ಇಲಾಖೆಗಳೊಂದಿಗೆ ಕಾರ್ಯ ನಿರ್ವಹಿಸುವವರಿಗೆ 500 ರೂ. ಗೌರವ ಧನ ನೀಡುತ್ತಿರಬಹುದು. ಈ ವೇತನ ಕಡಿಮೆ ಎನಿಸಿದರೂ ನಿಷ್ಕಾಮ ಸೇವೆ ಸಲ್ಲಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ ಎಂದರು.

ನಾನೂ ಗೃಹರಕ್ಷಕ ದಳದ ಕಮಾಂಡೆಂಟ್ ಆಗಿ ಕಾರ್ಯನಿರ್ವಹಿಸಿದ್ದು, 2017ರಿಂದ ಈವರೆಗೂ ಉತ್ತಮ ಒಡನಾಟ ಹೊಂದಿದ್ದೇನೆ. ತಕ್ಷಣಕ್ಕೆ ಸಾವಿರಾರು ಸಂಖ್ಯೆಯ ಮಾನವ ಸಂಪನ್ಮೂಲವನ್ನು ಒಗ್ಗೂಡಿಸುವ ಅತ್ಯಂತ ಸವಾಲಿನ ಕಾರ್ಯ ಗೃಹರಕ್ಷಕ ದಳದಿಂದ ಮಾತ್ರ ಸಾಧ್ಯ. ನಾನು ಕೊಡಗಿನಲ್ಲಿ ಕಾರ್ಯನಿರ್ವಹಿಸುವ ವೇಳೆ ನೆರೆ ಇನ್ನಿತರ ಸಂದರ್ಭದಲ್ಲಿ ಅತ್ಯಂತ ಅದ್ಭುತವಾಗಿ ಕೆಲಸ ಮಾಡಿದ್ದನ್ನು ನೋಡಿದ್ದೇನೆ. ನಿಮ್ಮ ಸೇವೆಯೂ ಮುಖ್ಯಮಂತ್ರಿ ಹಾಗೂ ರಾಷ್ಟ್ರಪತಿ ಪದಕಗಳಿಗೆ ಪರಿಗಣಿಸಲ್ಪಟ್ಟಿದೆ ಎಂದರೆ ಸಮಾಜದಲ್ಲಿ ನಿಮ್ಮ ಸೇವೆಯ ಮಹತ್ವ ಅರಿವಾಗುತ್ತದೆ. ನಿಮ್ಮ ಆರೋಗ್ಯ ಹಾಗೂ ದೈಹಿಕ ಸದೃಢತೆಗಾಗಿ ನಿತ್ಯ ವ್ಯಾಯಾಮ, ಕ್ರೀಡೆ ಅಭ್ಯಾಸ ಮಾಡಿ ಎಂದರು.

ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಉಪ ಪೊಲೀಸ್ ಅಧೀಕ್ಷಕ ಹೆಚ್.ವಿ.ವೀರಣ್ಣ ಮಾತನಾಡಿ, ಗೃಹರಕ್ಷಕ ದಳದ ಸೇವೆಯನ್ನು ಶ್ಲಾಘಿಸಿದರು. ಇದೇ ವೇಳೆ ನಾಲ್ವರು ನಿವೃತ್ತರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಪರೇಡ್ ಕಮಾಂಡರ್ ನಿಂಗರಾಜು ಹಾಗೂ ಸಹಾಯಕ ಕಮಾಂಡರ್ ಮಧುಸೂದನ್ ನೇತೃತ್ವದಲ್ಲಿ ನಾಲ್ಕು ಗೃಹರಕ್ಷಕ ದಳಗಳು ಆಕರ್ಷಕ ಪಥ ಸಂಚಲನದ ಮೂಲಕ ಮುಖ್ಯ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದವು. ಚಾಮರಾಜನಗರ ವಿಶ್ವವಿದ್ಯಾಲಯದ ನಿವೃತ್ತ ಕುಲಸಚಿವರೂ ಆದ ನಿವೃತ್ತ ಕಮಾಂಡೆಂಟ್ ಪ್ರೊ.ಪಿ.ಮಾದೇಶ್, ಜಿಲ್ಲಾ ಗೃಹರಕ್ಷಕ ದಳ ಕಚೇರಿಯ ಸಹಾಯಕ ಆಡಳಿತಾಧಿಕಾರಿ ಮಲ್ಲಿಕಾರ್ಜುನ್ ಎಂ.ನಾಲತ್‌ವಾಡ್, ಸಂಪತ್‌ಕುಮಾರ್ ಸೇರಿದಂತೆ ಘಟಕಾಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಡಾ.ಅಂಬೇಡ್ಕರ್ 69ನೇ ಮಹಾಪರಿನಿಬ್ಬಾಣ ದಿನ

ಮೈಸೂರಲ್ಲಿ ಸಂವಿಧಾನ ಶಿಲ್ಪಿಗೆ ಗೌರವ ನಮನ; ಗುಣಗಾನ

ಮೈಸೂರು, ಡಿ.6(ಎಂಕೆ)– ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 69ನೇ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಮೈಸೂರು ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಪಾಲಿಕೆ, ವಿವಿಧ ಶೈಕ್ಷಣಿಕ ಸಂಸ್ಥೆಗಳು ಸೇರಿದಂತೆ ಹಲವೆಡೆ ಅಂಬೇಡ್ಕರ್ ಅವರ ಆದರ್ಶ, ವ್ಯಕ್ತಿತ್ವ ಹಾಗೂ ಸಾಧನೆಗಳನ್ನು ಸ್ಮರಿಸುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.

ಜಿಲ್ಲಾಡಳಿತ ವತಿಯಿಂದ ನಗರದ ಟೌನ್‌ಹಾಲ್ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿ, ವಿಶ್ವಮೈತ್ರಿ ಬುದ್ಧವಿಹಾರದ ಡಾ.ಕಲ್ಯಾಣಸಿರಿ ಬಂತೇಜಿ, ಬೋಧಿರತ್ನ ಬಂತೇಜಿ ಹಾಗೂ ಬುದ್ಧ ಪ್ರಕಾಶ್ ಬಂತೇಜಿ ನೇತೃತ್ವದಲ್ಲಿ ಸಾಮೂಹಿಕವಾಗಿ ಬುದ್ಧ ವಂದನೆ, ಧಮ್ಮ ವಂದನೆ ಹಾಗೂ ಸಂಘ ವಂದನೆ ಪ್ರಾರ್ಥನೆಯೊಂದಿಗೆ ಸ್ಮರಿಸಲಾಯಿತು.

ಈ ವೇಳೆ ಡಾ.ಕಲ್ಯಾಣಸಿರಿ ಬಂತೇಜಿ ಮಾತನಾಡಿ, ಅಂಬೇಡ್ಕರ್ ಎಂಬ ಮಹಾ ಬೆಳಕು ಭೌತಿಕವಾಗಿ ಕಣ್ಮರೆಯಾಗಿರಬಹುದು. ಸಮಾನತೆಯ ಜ್ಯೋತಿಯಾಗಿ, ಜ್ಞಾನದ ಸಂಕೇತವಾಗಿ ಭಾರತ ಮಾತ್ರವಲ್ಲದೆ ಜಗತ್ತಿನಾದ್ಯಂತ ಬೆಳಗುತ್ತಿದ್ದಾರೆ. ಆ ಮಹಾ ಬೆಳಕಿನಡಿಯಲ್ಲಿ ನಾವೆಲ್ಲರೂ ಮಾನವೀಯ ಮೌಲ್ಯಗಳನ್ನು ಒಳಗೊಂಡ ಉತ್ತಮ ಜೀವನವನ್ನು ಕಟ್ಟಿಕೊಳ್ಳಬಹುದಾಗಿದೆ. ಸಮಾನತೆಯಿಂದ ಜೀವನ ನಡೆಸಬಹುದಾಗಿದೆ ಎಂದು ತಿಳಿಸಿದರು.

ಜಾತ್ಯಾತೀತವಾಗಿ, ಧರ್ಮಾತೀತವಾಗಿ ಎಲ್ಲರೂ ಒಪ್ಪಿಕೊಳ್ಳಬಹುದಾದ ರತ್ನ ಅಂಬೇಡ್ಕರ್. ಅವರ ಚಿಂತನೆಗಳು ಪ್ರತಿಯೊಬ್ಬರಿಗೂ ಸಾಮಾಜಿಕ ಮತ್ತು ಮಾನಸಿಕ ಆರೋಗ್ಯವನ್ನು ನೀಡುವಂತಹ ಪ್ರಬುದ್ಧವಾದ ಆಲೋಚನೆಗಳಾಗಿದ್ದು, ಸರ್ವಕಾಲಕ್ಕೂ ಪ್ರಸ್ತುತವಾಗಿವೆ. ಮಾನವೀಯತೆ ಎಂಬುದು ಪ್ರಕೃತಿಯ ನಿಯಮವಾಗಿದೆ. ಮಾನವೀಯತೆ ಎಂಬ ಬೆಳಕನ್ನು ಪ್ರಪಂಚಕ್ಕೆ ಕೊಟ್ಟಂತಹ ಮೊದಲಿಗರು ಭಗವಾನ್ ಬುದ್ಧರು. ಬುದ್ಧರ ಮಾರ್ಗದಲ್ಲಿ ನಡೆದ ಬಾಬಾ ಸಾಹೇಬರು, ಭಾರತ ಭಾಗ್ಯವಿದಾತರಾಗಿದ್ದಾರೆ ಎಂದು ಸ್ಮರಿಸಿದರು.



ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಮೈಸೂರು ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಪಾಲಿಕೆ ವತಿಯಿಂದ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಸಾಮೂಹಿಕ ಪಾರ್ಥನೆಯೊಂದಿಗೆ ಗೌರವ ಸಲ್ಲಿಸಲಾಯಿತು.

ಪ್ರೇರಣೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಭಾರತದ ಎಲ್ಲಾ ವರ್ಗದ ಜನರಿಗೂ ಸಮಾನತೆ ಸಾರುವ ಸಂವಿಧಾನ ಕೊಟ್ಟಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರು, ಭೌತಿಕವಾಗಿ ನಮ್ಮ ಜೊತೆ ಇಲ್ಲದೆ ಇರಬಹುದು. ಆದರೆ, ಅವರು ನಡೆದು ಬಂದ ಹಾದಿ, ಅವರ ಆದರ್ಶ, ವ್ಯಕ್ತಿತ್ವ ನಮಗೆಲ್ಲರಿಗೂ ಸದಾ ಪ್ರೇರಣೆಯಾಗಿವೆ. ಸಂವಿಧಾನ ಆಶಯಗಳನ್ನು ಯಥಾವತ್ತಾಗಿ ಜಾರಿ ಮಾಡುವ ಸಂಕಲ್ಪದೊಂದಿಗೆ ಕರ್ನಾಟಕ ಸರ್ಕಾರವು ಶಾಲಾ–ಕಾಲೇಜುಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಸಂವಿಧಾನ ಪೀಠಿಕೆ ಬೋಧನೆ ಮಾಡಲಾಗುತ್ತಿದೆ. ಹಾಗೆಯೇ ಮೈಸೂರಿನಲ್ಲಿ ನಿರ್ಮಾಣ ಹಂತದಲ್ಲಿರುವ ಅಂಬೇಡ್ಕರ್ ಭವನವು ಆದಷ್ಟು ಬೇಗ ಲೋಕಾರ್ಪಣೆಯಾಗಲಿ ಎಂದು ಆಶಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ, ಡಿಸಿಪಿ ಬಿಂದು ಮಣಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಸಹಾಯಕ ನಿರ್ದೇಶಕ ಜನಾರ್ಧನ್ ಮತ್ತಿತರರಿದ್ದರು.

ಅಂಬೇಡ್ಕರ್ ತತ್ವಗಳೇ ನಮಗೆ ಆದರ್ಶ

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನವನ್ನು ದೇಶದಾದ್ಯಂತ ಆಚರಣೆ ಮಾಡಲಾಗುತ್ತಿದ್ದು, ಅವರು ನೀಡಿರುವ ಸಂವಿಧಾನವನ್ನು ಭಾರತದ 140 ಕೋಟಿ ಜನರು ಅಳವಡಿಸಿಕೊಂಡು ಬದುಕುತ್ತಿದ್ದೇವೆ. ಅಂಬೇಡ್ಕರ್ ಅವರ ತತ್ವಗಳೇ ನಮಗೆ ಆದರ್ಶ.

-ಕೆ.ಹರೀಶ್ ಗೌಡ, ಶಾಸಕ

ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನ



ಮೈಸೂರು ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಕೆಎಸ್‌ಆರ್‌ಟಿಸಿ ವಿಭಾಗಿಯ ಸಂಚಲನಾ ಅಧಿಕಾರಿಗಳಾದ ಸಿ.ಹೇಮಂತ್ ಕುಮಾರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಚಂದ್ರಶೇಖರ್, ಮಹದೇವಸ್ವಾಮಿ, ಸುರೇಶ್, ದೇವರಾಜ್, ಕುಮಾರ್ ಎಂ ಹಾಗೂ ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ್ ಡಾ. ಎನ್.ಮೂರ್ತಿ ಸ್ಥಾಪಿತ), ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಡಾ. ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ಟೌನ್ ಹಾಲ್ ಮುಂಭಾಗವಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಜಿಲ್ಲಾಧ್ಯಕ್ಷ ಶಂಕರ್, ದಾಸಪ್ಪ, ಮಹದೇವಸ್ವಾಮಿ, ಮಂಜುಳ, ರಾಜು, ಮಾದೇಶ್, ಲಾಂಚುರ್ ರಾಜು, ಹನುಮಂತು ಇತರರು ಹಾಜರಿದ್ದರು.



ಮೈಸೂರು ತಾಲೂಕು ನಾಗವಾಲ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69 ನೇ ಪರಿನಿಬ್ಬಾಣ ಪ್ರಯುಕ್ತ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳೂ ಆದ ನಾಗವಾಲ ಗ್ರಾಪಂ ಮಾಜಿ ಅಧ್ಯಕ್ಷ ಸಿ.ನರೇಂದ್ರ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಪಂಗಡದ ಅಧ್ಯಕ್ಷ ಕೆ.ಮಹೇಶ್, ಗ್ರಾಪಂ ಮಾಜಿ ಸದಸ್ಯರಾದ ಹುಯಿಲಾಳು ರಾಮಸ್ವಾಮಿ, ಬಿ.ಕೆ.ಈಶ್ವರ್ ಸೀಗಳ್ಳಿ, ಕುಮಾರ್, ಬಸವ ನಾಯಕ, ಕೋಳಿ ಸೂರಿ, ಜಟ್ಟಿಹುಂಡಿ ಸುನೀಲ್, ಮೈಸೂರ್ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಸಂತೋಷ್, ಚೆಲುವರಾಜು, ಮಹಿಳಾ ಸಂಘದವರು, ಗ್ರಾಮಸ್ಥರು ಉಪಸ್ಥಿತರಿದ್ದರು

ಅಶೋಕಪುರಂನಲ್ಲಿ ಭೀಮ ಜ್ಯೋತಿ ಮೆರವಣಿಗೆ



'ಭೀಮ ಜ್ಯೋತಿ' ಮೆರವಣಿಗೆಗೆ ವುಶು ಕ್ರೀಡಾಪಟು ಸಾನ್ವಿ ಚಾಲನೆ ನೀಡಿದರು

ಮೈಸೂರು, ಡಿ.6(ವಿವಿಹೆಚ್)– ಡಾ.ಬಿ.ಆರ್. ಅಂಬೇಡ್ಕರ್ ಅವರ 69ನೇ ಪರಿನಿಬ್ಬಾಣ ದಿನದ ಅಂಗವಾಗಿ ಬಹುಜನರ ಸಂಕಲ್ಪ ದಿನದ ಪ್ರಯುಕ್ತ ಅಶೋಕಪುರಂನಲ್ಲಿ ಶನಿವಾರ ಭೀಮ ಜ್ಯೋತಿ ಮೆರವಣಿಗೆಯೊಂದನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇಲ್ಲಿನ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಅಶೋಕಪುರಂನ ಬಾಲಕಿ, ಅಂತರಾಷ್ಟ್ರೀಯ ವುಶು ಕ್ರೀಡಾಪಟು ಸಾನ್ವಿ ಅವರು ಡಾ. ಅಂಬೇಡ್ಕರ್ ಮೆರವಣಿಗೆ ಟ್ಯಾಬ್ಲೋಗೆ ಪುಷ್ಪಾರ್ಚನೆ ಮಾಡುವ ಮೂಲಕ 'ಭೀಮ ಜ್ಯೋತಿ' ಮೆರವಣಿಗೆಗೆ ಚಾಲನೆ ನೀಡಿದರು.

ಅಶೋಕಪುರಂನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿತು. ಪುರಂನ ಮಹಿಳೆಯರು ಟ್ಯಾಬ್ಲೋವನ್ನು ಆದರದಿಂದ ಸ್ವಾಗತಿಸಿದರು. ಈ ವೇಳೆ ಕೆಲವರು ಪೂಜೆ ನೆರವೇರಿಸಿದರೆ, ಮತ್ತೆ ಕೆಲವರು ಪುಷ್ಪಮಳೆ ಸುರಿಸಿದರು. ವಿಶೇಷವಾಗಿ ಪುಟಾಣಿ ಮಕ್ಕಳು ಕೈಯಲ್ಲಿ ಭೀಮ ಜ್ಯೋತಿ ಹಿಡಿದು ಜೈ ಭೀಮ ಘೋಷಣೆ ಕೂಗುತ್ತ ಹಿರಿಯರೊಡನೆ ಹೆಜ್ಜೆ ಹಾಕಿದರು.

ಪರಿನಿಬ್ಬಾಣ ಸಮಿತಿಯ ಸಂಯೋಜಕ ಡಾ. ಎಸ್.ರಾಜು, ನಗರ ಪಾಲಿಕೆ ಮಾಜಿ ಸದಸ್ಯ ಪಲ್ಲವಿ ಬೇಗಂ, ಲೇಖಕ ಸಿದ್ದಸ್ವಾಮಿ, ಗಿರೀಶ್ ಬದನವಾಳು, ಬಬಿತಾ, ರಘು, ಶಿವಸ್ವಾಮಿ, ಪೇಪರ್ ಶಿವಣ್ಣ, ಜಯರಾಜು, ಬಸವರಾಜು, ಪ್ರಸಾದ್, ಅರುಣ್ ಮೇಸ್ತ್ರಿ, ಶಿಕ್ಷಕ ಸುದರ್ಶನ್ ಸೇರಿದಂತೆ ಊರಿನ ಹಿರಿಯ ಮುಖಂಡರು, ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಎಸ್‌ಸಿ ಮೋರ್ಚಾ ವತಿಯಿಂದ ಭಾರತ ರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಕ್ಯಾಂಡಲ್ ಬೆಳಗಿಸಿ ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಲಾಯಿತು. ನಗರಾಧ್ಯಕ್ಷ ಎಲ್.ನಾಗೇಂದ್ರ ಜಿಲ್ಲಾಧ್ಯಕ್ಷ ಕುಂಬರಹಳ್ಳಿ ಸುಬ್ಬಣ್ಣ, ನಗರಪಾಲಿಕೆ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಮೈಸೂರು ನಗರ ಎಸ್‌ಸಿ ಮೋರ್ಚಾ ಅಧ್ಯಕ್ಷ ಎಂ.ಅನಿಲ್ ಕುಮಾರ್, ವಕ್ತಾರ ಮಹೇಶ್ ಮತ್ತಿತರರಿದ್ದರು.

ಡಾ.ಅಂಬೇಡ್ಕರ್ ಪರಿನಿಬ್ಬಾಣ: ಕ್ಯಾಂಡಲ್ ಮಾರ್ಚ್ ಮೂಲಕ ನಮನ



ಮಾನಸ ಗಂಗೋತ್ರಿಯಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನ ಆಚರಿಸಲಾಯಿತು.

ಮೈಸೂರು, ಡಿ.6(ವಿವಿಹೆಚ್)– ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ ಹಾಗೂ ಮಾನಸಗಂಗೋತ್ರಿಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಸಹಯೋಗದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನ ಅಂಗವಾಗಿ "ಕ್ಯಾಂಡಲ್ ಮಾರ್ಚ್" ನಡೆಸಲಾಯಿತು.

ಮಾನಸ ಗಂಗೋತ್ರಿಯ ಬುದ್ಧ ವಿಹಾರದಿಂದ ಗ್ರಂಥಾಲಯ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆವರೆಗೆ ಮೆರವಣಿಗೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಬಿಐಎಂಎಸ್ ಪ್ರಾಧ್ಯಾಪಕ ಪ್ರೊ. ಡಿ.ಆನಂದ್, ಗುಲಾಮಗಿರಿ ಮನಸ್ಸಿನಿಂದ ಹೊರ ಬರಲು ಅಂಬೇಡ್ಕರ್ ಅವರ ಜ್ಞಾನವನ್ನು ಅರ್ಥಮಾಡಿಕೊಳ್ಳಬೇಕು. ಅವರ ಮಾರ್ಗದಲ್ಲಿ ನಡೆದರೆ ನಿಜ ಸ್ಮರಣೆಗೆ ಸಾಕ್ಷಿಯಾಗಬಹುದು. ಸಂಕಟದಲ್ಲಿರುವ ಜನರಿಗೆ, ನೊಂದವರ ಪರವಾಗಿ ದನಿ ಎತ್ತಿದಾಗ ಡಾ. ಅಂಬೇಡ್ಕರ್ ಅವರಿಗೆ ಕೃತಜ್ಞತೆ ಸಲ್ಲಿಸಿದಂತಾಗುತ್ತದೆ ಎಂದರು.

ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ ಮಾತನಾಡಿದರು. ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಸಮಾಜ ಸೇವಕ ಮಹೇಶ್ ಆರ್.ಸಿ, ರೇಷ್ಮೆ ಮತ್ತು ಕೃಷಿ ವಿಜ್ಞಾನ ವಿಭಾಗದ ಅಧ್ಯಕ್ಷರಾದ ಪ್ರೊ.ಬಿ.ಸಣ್ಣಪ್ಪ, ಸಂಶೋಧಕರ ಸಂಘದ ಗೌರವಾಧ್ಯಕ್ಷ ಕಲ್ಲಹಳ್ಳಿ ಕುಮಾರ್, ಉಪಾಧ್ಯಕ್ಷ ಮಲ್ಲೇಶ್ ಬಾಚಹಳ್ಳಿ, ಸಂಘಟನಾ ಕಾರ್ಯದರ್ಶಿ ಸಿ.ಎಸ್.ಮದನ್, ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಮುಖಂಡ ಗಜೇಂದ್ರ ಚಿನ್ನಸ್ವಾಮಿ ಎ.ಚಂದನಾ ಉಪಸ್ಥಿತರಿದ್ದರು.

ಗಾಂಧಿನಗರದಲ್ಲಿ ಡಾ. ಅಂಬೇಡ್ಕರ್‌ಗೆ ಮೆರವಣಿಗೆ ಮೂಲಕ ದೀಪಗಳ ನಮನ



ಗಾಂಧಿನಗರದಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಿಸಲಾಯಿತು


ಮೈಸೂರು, ಡಿ.6(ವಿವಿಹೆಚ್)– ಮೈಸೂರಿನ ಗಾಂಧಿನಗರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ 69ನೇ ವರ್ಷದ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ 'ಜ್ಞಾನ ಸೂರ್ಯನಿಗೆ ದೀಪಗಳ ನಮನ' ಮೆರವಣಿಗೆ ನಡೆಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ದಲಿತ ಮಹಾಸಭಾ ವತಿಯಿಂದ ಅಂಬೇಡ್ಕರ್ ಸರ್ಕಲ್ (ಎಫ್‌ಟಿಎಸ್) ನಿಂದ ಟೌನ್‌ಹಾಲ್ ವರೆಗೆ ಮೊಂಬತ್ತಿ ಹಿಡಿದು ಮೆರವಣಿಗೆ ನಡೆಸಿದರು. ಅಂಬೇಡ್ಕರ್ ಸರ್ಕಲ್‌ನಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಉರಿಲಿಂಗಿ ಪೆದ್ದಿಮಠದ ಶಾಖಾ ಮಠದ ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿಯವರು ಪುಷ್ಪಾರ್ಚನೆ ಮಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ದಲಿತ ಮಹಾಸಭಾದ ಅಧ್ಯಕ್ಷ ಮಟ್ಟರಂಗಸ್ವಾಮಿ, ಎಸ್‌ಐ ಲಕ್ಷ್ಮೀಕಾಂತ್ ತಳವಾರ್, ಬಿಜೆಪಿ ಮುಖಂಡ ಶರತ್ ಸತೀಶ್, ನಗರಪಾಲಿಕೆ ಮಾಜಿ ಸದಸ್ಯ ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ವಿಜಯ್ ಮಹಂತೇಶ್, ವರುಣ್, ಸಾಗರ್, ಅಮರ್, ರಂಗಸ್ವಾಮಿ, ಮೊಹಮ್ಮದ್ ರಫಿ, ಮೂರ್ತಿ, ಸತೀಶ್, ಸೋಮು ಸೇರಿದಂತೆ ಗ್ರಾಮದ ಹಿರಿಯ ಮುಖಂಡರು ಭಾಗವಹಿಸಿದ್ದರು.



ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಮರುಣ ಗ್ರಾಮದ ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನ ಆಚರಿಸಲಾಯಿತು. ಈ ವೇಳೆ ಸಮಿತಿಯ ರಾಜ್ಯಾಧ್ಯಕ್ಷ ಸಿದ್ದಪ್ಪ (ಕೊಪ್ಪಲು), ಎಂ.ಪ್ರಭುರಾಜ್, ಈಶ್ವರ್, ಸುದರ್ಶನ್, ಎನ್.ಕೆ.ಅಪ್ಪು, ನಾಗಶೆಟ್ಟಿ, ಕೃಷ್ಣ ಶಂಕರ, ಮಲ್ಲೇಶ್ ಇತರರಿದ್ದರು.



ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನದ ಅಂಗವಾಗಿ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಚಿತ್ರನಟ ಜಯಪ್ರಕಾಶ್ (ಜೆಪಿ), ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ನಳಿನಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕಚೇರಿ ಕಾರ್ಯದರ್ಶಿ ಸೋಮಶೇಖರ್, ಮುಖಂಡರಾದ ಶಿವರಾಜ್, ಪಾಪಣ್ಣ, ಸತೀಶ್, ರಘು ಆಚಾರ್, ಕಾರ್ತಿಕ್, ಹನುಮಂತೇಗೌಡ ಇನ್ನಿತರರಿದ್ದರು.

ಪ್ರಸ್ತುತ ಪರಿಸ್ಥಿತಿಯಲ್ಲಿ ಡಾ. ಅಂಬೇಡ್ಕರ್ ವಿಚಾರಗಳ ಗಂಭೀರ ಚರ್ಚೆ ಅವಶ್ಯ

ಬಿ.ಎನ್. ಬಹದ್ದೂರ್ ಇನ್‌ಸ್ಟಿಟ್ಯೂಟ್‌ನ ಪ್ರಾಧ್ಯಾಪಕ ಪ್ರೊ. ಆನಂದ್ ಪ್ರತಿಪಾದನೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿಬ್ಬಾಣ ದಿನದ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.6(ಎಂಕೆ)– ಜಗತ್ತನ್ನು ಕಾಡುತ್ತಿರುವ ಭಯ, ಆತಂಕ, ಯುದ್ಧ, ದ್ವೇಷ ಮತ್ತು ಹಿಂಸೆಯ ಕಾಲಘಟ್ಟದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರು ನಂಬಿದ್ದ ಸಿದ್ಧಾಂತಗಳ ಕುರಿತು ವಿಶ್ವವಿದ್ಯಾನಿಲಯಗಳಲ್ಲಿ ಗಂಭೀರ ಚರ್ಚೆಗಳು ಆಗಬೇಕಿದೆ ಎಂದು ಮೈಸೂರು ವಿವಿ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಅಭಿಪ್ರಾಯಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾ ಪರಿನಿಬ್ಬಾಣ ದಿನದ ಅಂಗವಾಗಿ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಾ.ಅಂಬೇಡ್ಕರ್ ಅವರನ್ನು ಕುರಿತು ವರ್ಷದ 365 ದಿನವೂ ಒಂದಲ್ಲ ಒಂದು ಕಡೆ ಚರ್ಚೆಗಳಾಗುತ್ತಿರುತ್ತವೆ. ಇಂತಹ ಚರ್ಚೆಗಳ ಮೂಲಕ ನಾವೇನಾದರೂ ಕಲಿಯಬೇಕು ಮತ್ತು ಬೇರೆಯವರಿಗೆ ಕಲಿಸಬೇಕು. ಅದರಲ್ಲೂ ಇಂತಹ ವಿಚಾರಗಳ ಚರ್ಚೆಯಲ್ಲಿ ವಿವಿಗಳ ಪಾತ್ರ ಬಹಳ ದೊಡ್ಡದಾಗಿದೆ ಎಂದರು.

ಇಡೀ ಜಗತ್ತು ಡಾ.ಅಂಬೇಡ್ಕರ್ ಅವರನ್ನು ಕುರಿತು ಮಾತನಾಡುತ್ತಿದೆ. 70 ವರ್ಷಗಳ ಹಿಂದಿನ ಡಿ.6ನೇ ತಾರೀಖು ಜಗತ್ತಿನ ಬಹಳಷ್ಟು ಪತ್ರಿಕೆಗಳು, ಭಾರತದ ಧೀಮಂತ ಧ್ವನಿ ಇಂದು ಅಡಗಿ ಹೋಯಿತು. ಜಗತ್ತು ಕಂಡ ಕ್ರಾಂತಿ ಸೂರ್ಯ ಮುಳುಗಿ ಹೋಯಿತು ಎಂದು ವರದಿ ಮಾಡಿದ್ದವು. ಆ ದಿನ ಭಾರತದ ಇತಿಹಾಸದಲ್ಲಿ ದೊಡ್ಡ ಮಟ್ಟದ ನೋವನ್ನು ಇಡೀ ಜನಸಮೂಹ ಅನುಭವಿಸಿದ ಕ್ಷಣ ಎಂದು ಸ್ಮರಿಸಿದರು.

ಅಂಬೇಡ್ಕರ್ ಅವರ ಬಗ್ಗೆ ಇಡೀ ಜಗತ್ತಿಗೆ ಅರ್ಥವಾಗಿರುವ ಕಾರಣದಿಂದಲೇ ಅವರ ಜನ್ಮದಿನವನ್ನು ವಿಶ್ವಸಂಸ್ಥೆಯು ವಿಶ್ವಜ್ಞಾನದ ದಿನವೆಂದು ಘೋಷಣೆ ಮಾಡಿತು. ಜ್ಞಾನಕ್ಕೆ ಯಾವುದೇ ಸಮಸ್ಯೆಯನ್ನು ಬಗೆಹರಿಸುವ ಹಾಗೂ ಜಗತ್ತನ್ನು ಬದಲಾವಣೆ ಮಾಡುವ ಶಕ್ತಿ ಇದ್ದು, ಆ ಜ್ಞಾನದ ಕೇಂದ್ರಗಳಾದ ವಿಶ್ವವಿದ್ಯಾನಿಲಯಗಳು ಅಂಬೇಡ್ಕರ್ ಅವರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಅಂಬೇಡ್ಕರ್ ಅವರನ್ನು ಕುರಿತು ಚರ್ಚೆ ಮಾಡುವಾಗ ಕೆಲವರು ಪೂರ್ವಗ್ರಹ ಪೀಡಿತರಾಗಿ ಮುಕ್ತವಾಗಿ ಅವರ ವಿಚಾರಗಳನ್ನು ಅರ್ಥ ಮಾಡಿಕೊಳ್ಳದೆ ಅಪಾರ್ಥ ಮಾಡಿಕೊಳ್ಳುವುದೇ ಹೆಚ್ಚಾಗಿದೆ. ಅಂಬೇಡ್ಕರ್ ಅವರ ಬಹುತ್ವದ ವ್ಯಕ್ತಿತ್ವ, ವಿಚಾರವನ್ನು ಸಿಮೀತಗೊಳಿಸಿ ಮಾತನಾಡುತ್ತಾರೆ. ಆದ್ದರಿಂದ ಅಂಬೇಡ್ಕರ್ ಅವರ ಬಗ್ಗೆ ವಿಶಾಲ ಅಧ್ಯಯನಗಳಾಗಬೇಕು ಹಾಗೂ ಚರ್ಚೆಗಳಾಗಬೇಕು ಎಂದು ತಿಳಿಸಿದರು.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ ನವೀನ್ ಕುಮಾರ್, ಪರೀಕ್ಷಾಂಗ ಕುಲಸಚಿವ ಡಾ.ಆನಂದಕುಮಾರ್, ಶೈಕ್ಷಣಿಕ ಡೀನ್ ಪ್ರೊ.ರಾಮನಾಥಂ ನಾಯ್ಡು, ಅಧ್ಯಯನ ಕೇಂದ್ರದ ಡೀನ್ ಡಾ.ಚಂದ್ರೇಗೌಡ, ಡಾ.ಶಿವಕುಮಾರಸ್ವಾಮಿ ಉಪಸ್ಥಿತರಿದ್ದರು.

ಡಾ. ಅಂಬೇಡ್ಕರ್ ವಿಚಾರಗಳನ್ನು ಶಾಲಾ–ಕಾಲೇಜು ಮಕ್ಕಳಿಗೆ ತಿಳಿಸಲು ಸರ್ಕಾರ ಅನುದಾನ ನೀಡುತ್ತಿಲ್ಲ!

- ಖ್ಯಾತ ಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ವಿಷಾದ
- ಅತ್ತ ವಿವಿಗಳು, ಸರ್ಕಾರಿ ಶಾಲೆಗಳೂ ಮುಚ್ಚುವ ಪರಿಸ್ಥಿತಿ ಬಂದಿದೆ!

ಮೈಸೂರು, ಡಿ.6(ಎಂಕೆ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಪ್ರಪಂಚ ಇರುವವರೆಗೂ ಮರೆಯಲು ಸಾಧ್ಯವಿಲ್ಲ. ಅವರು ಭಗವಾನ್ ಬುದ್ಧ, ಏಸುಕ್ರಿಸ್ತ, ಮಹಮ್ಮದ್ ಪೈಗಂಬರ್, ಬಸವಣ್ಣ ಅವರ ಸಾಲಿನಲ್ಲಿ ನಿಲ್ಲುತ್ತಾರೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಅಂಬೇಡ್ಕರ್ ಅವರ ಐತಿಹಾಸಿಕ ಭಾವಚಿತ್ರಗಳ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ಕೊಡದಿದ್ದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಸಂವಿಧಾನ ಇಲ್ಲದಿದ್ದರೆ ಏನಾಗುತ್ತೆ ಎಂಬುದನ್ನು ಚರಿತ್ರೆಯಲ್ಲಿ ತಿಳಿದಿದ್ದೇವೆ. ಆದ್ದರಿಂದ ಸಂವಿಧಾನವನ್ನು ಉಳಿಸಿಕೊಳ್ಳಬೇಕಿದೆ ಎಂದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿಬ್ಬಾಣ ದಿನದ ಅಂಗವಾಗಿ ಅಂಬೇಡ್ಕರ್ ಅವರಿಗೆ ಗೌರವ ನಮನ ಸಲ್ಲಿಸಲಾಯಿತು.

ದೃಶ್ಯ ಮಾಧ್ಯಮಗಳ ಮೂಲಕ ಅಂಬೇಡ್ಕರ್ ಅವರ ತ್ಯಾಗ, ಕೊಡುಗೆ ಕುರಿತು ಪರಿಣಾಮಕಾರಿಯಾಗಿ ದೇಶದ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುವಂತೆ ತಿಳಿಸಬಹುದಾಗಿದೆ. ಆದ್ದರಿಂದ ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಕೂಡಿಸಿ ಕಥೆಯೊಂದನ್ನು ಬರೆದಿದ್ದು, ಚಿತ್ರೀಕರಣ ಮಾಡುತ್ತಿದ್ದೇನೆ. ಅಲ್ಲದೆ ಈ ಮೊದಲೇ ಅಂಬೇಡ್ಕರ್ ಕುರಿತ ಹತ್ತು ಗಂಟೆಗಳ ಕಾಲದ ಡಾಕ್ಯುಮೆಂಟರಿಯನ್ನು ಕನ್ನಡಕ್ಕೆ ಡಬ್ ಮಾಡಿದ್ದು, ಅಧಿಕಾರಿಗಳ ನಿರುತ್ಸಾಹದಿಂದ ಪ್ರಸಾರ ಮಾಡಲಾಗದೆ ಬಿಟ್ಟಿದ್ದೇನೆ ಎಂದು ತಿಳಿಸಿದರು.

ಅಂಬೇಡ್ಕರ್ ಅವರ ಪ್ರತಿಯೊಂದು ವಿಚಾರಗಳ ಕುರಿತು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕಿದೆ. ಸಮಾನತೆಯ ಅರಿವು ಮೂಡಿಸಬೇಕಿದೆ. ಆದರೆ, ದುರಾದೃಷ್ಟವಶಾತ್ ಸರ್ಕಾರದ ಅನುದಾನವಿಲ್ಲದೆ ವಿವಿಗಳು, ಸರ್ಕಾರಿ ಶಾಲೆಗಳು ಮುಚ್ಚುವ ಹಂತಕ್ಕೆ ಬಂದಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ 'ಅಖಂಡ ಭಾರತದ ಒಂದು ಭಾಗ ಡಾ.ಅಂಬೇಡ್ಕರ್' ಕುರಿತು ಪ್ರೊ.ಪ್ರಸನ್ನ ಕುಮಾರ್ ಕೆರಗೋಡು ಮಾತನಾಡಿದರು. ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಮಣಿ, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷರಾದ ರಮೇಶ್, ಸಿದ್ದರಾಜು, ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಶಿವಪ್ರಸಾದ್, ಮುಖಂಡರಾದ ಎನ್.ಆರ್. ನಾಗೇಶ್, ಗಿರೀಶ್ ಪಿ.ತೊರೆಮಾವು, ಈಶ್ವರ್ ಚಕ್ಕಡಿ, ಸುರೇಶ್ ಪಾಳ್ಯ, ಶಿವಶಂಕರಮೂರ್ತಿ, ಸಿದ್ದಯ್ಯ, ಮಹೇಶ್ ನಾಯಕ್ ಮತ್ತಿತರರಿದ್ದರು.

ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ನೂತನ ತಳಿಗಳು ರೈತರ ಮುಟ್ಟಬೇಕು

75 ವರ್ಷಗಳು ಕಳೆದರೂ ರೈತರ ಜೀವನಮಟ್ಟ ಸುಧಾರಣೆ ಸಾಧ್ಯವಾಗಿಲ್ಲ: ಹೆಚ್‌ಡಿಕೆ

ಮಂಡ್ಯ, ಡಿ.6– ಕೃಷಿ ವಿಶ್ವವಿದ್ಯಾಲಯಗಳಲ್ಲಿನ ವಿಜ್ಞಾನಿಗಳು ಅಭಿವೃದ್ಧಿಪಡಿಸುವ ನೂತನ ತಳಿಗಳು ರೈತರನ್ನು ಮುಟ್ಟಬೇಕು ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ ಕುಮಾರಸ್ವಾಮಿ ಹೇಳಿದರು.

ತಾಲೂಕಿನ ಕೃಷಿ ವಿ.ಸಿ.ಫಾರಂನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದ 2ನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೈಸೂರು ಪ್ರಾಂತ್ಯದ ರೈತರ ಹೇಳಿಕೆಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ದೂರದೃಷ್ಟಿಯಿಂದ ಮಂಡ್ಯದಲ್ಲಿ ವಿ.ಸಿ.ಫಾರ್ಮ್ ಅನ್ನು ಸ್ಥಾಪಿ ಸಿದರು. ರಾಜ್ಯ ಸರ್ಕಾರ ವಿ.ಸಿ. ಫಾರ್ಮನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಾಡಿ ರೈತರಿಗೆ ಕೃಷಿಯ ಕುರಿತಾಗಿ ಜ್ಞಾನ ಹೆಚ್ಚಿಸಲು ಕೃಷಿ ಮೇಳವನ್ನು ಆಯೋಜಿಸಲಾಗಿದೆ ಎಂದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಪಾಲ್ಗೊಂಡು ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಬೆಳೆದಿರುವ ಬೆಳೆಯನ್ನು ವೀಕ್ಷಿಸಿದರು. ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮಿ ಮತ್ತು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಉಪಸ್ಥಿತರಿದ್ದರು.

ಪ್ರಸ್ತುತ ರೈತರ ಬದುಕು ಮತ್ತು ಆರ್ಥಿಕತೆಯ ಕುರಿತು ಚರ್ಚೆ ಮಾಡಬೇಕಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ ರೈತರ ಜೀವನಮಟ್ಟ ಸುಧಾರಣೆ ಸಾಧ್ಯವಾಗಿಲ್ಲ, ಪತ್ರಿಕೆ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೃಷಿಯಿಂದ ಲಾಭಗಳಿಸಿದ ಕೇವಲ ಕೃಷಿಕರನ್ನು ನಾವು ಕಾಣಬಹುದು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೃಷಿಕರ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿವೆ. ಕೇಂದ್ರ ಸರ್ಕಾರ ಕೃಷಿ ವಲಯಕ್ಕೆ 1 ಲಕ್ಷದ 34 ಸಾವಿರ ಕೋಟಿ ಅನುದಾನವನ್ನು ಮೀಸಲಿಟ್ಟಿದೆ ಎಂದು ಹೇಳಿದರು.

ನಾನು ರಾಜ್ಯದಲ್ಲಿ ಎರಡು ಬಾರಿ ಮುಖ್ಯ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ, ನನ್ನ ಅವಧಿಯಲ್ಲಿ ಕೃಷಿಗೆ ಸಂಬಂಧಿಸಿದ ಯಾವುದೇ ಲೋಪಗಳು ಉಂಟಾಗದಂತೆ ಜಾಗರೂಕವಾಗಿ ನೋಡಿಕೊಂಡಿದ್ದೇನೆ. 2006ರಲ್ಲಿ ಕಬ್ಬನ್ನು ಕಾರ್ಖಾನೆ ಮಾಲೀಕರು ಕೊಂಡುಕೊಳ್ಳದೇ ಕಬ್ಬು ಗದ್ದೆಗಳಲ್ಲೇ ಒಣಗಿತ್ತು. 248 ಕೋಟಿ ನೀಡಿ ಸದರಿ ಕಬ್ಬನ್ನು ಖರೀದಿ ಮಾಡಿ ರೈತರಿಗೆ ನಷ್ಟ ಉಂಟಾಗದಂತೆ ನೋಡಿಕೊಂಡಿದ್ದೇನೆ. ಕೇವಲ ಮಂಡ್ಯ ಭಾಗವಲ್ಲದೆ ಉತ್ತರ ಕರ್ನಾಟಕ ಭಾಗದಲ್ಲೂ ಈರುಳ್ಳಿ ಬೆಳೆಗಾರರಿಗೆ ನಷ್ಟವಾಗದಂತೆ ನೋಡಿಕೊಂಡಿದ್ದೇನೆ ಎಂದರು.

ಪ್ರಧಾನ ಮಂತ್ರಿಗಳು ಹೊಸ ಯೋಜನೆಯ ಮೂಲಕ ದೇಶದ ಒಂಭತ್ತು ಕೋಟಿ ರೈತರಿಗೆ ವರ್ಷಕ್ಕೆ 6 ಸಾವಿರ ರೂ.ಗಳನ್ನು ಮೂರು ಕಂತುಗಳಲ್ಲಿ ನೀಡಿದ್ದಾರೆ. ರೈತರು ಕೃಷಿಗಳಲ್ಲಿ ಹೆಚ್ಚು ಮಾನವ ಸಂಪನ್ಮೂಲ ಬಳಕೆ ಮಾಡುವ ಬದಲು ಆಧುನಿಕ ಯಂತ್ರೋ ಪಕರಣಗಳನ್ನು ಬಳಸಿದರೆ ಹಣ ಉಳಿಸಬಹುದು ಎಂದು ಸಲಹೆ ನೀಡಿದರು.

ಗೋದಾಮು, ಕೋಲ್ಡ್ ಸ್ಟೋರೇಜ್ ನಿರ್ಮಾಣದ ಚಿಂತನೆ: ನಮ್ಮ ರಾಜ್ಯದಲ್ಲಿ 5600 ಗ್ರಾಮ ಪಂಚಾಯಿತಿಗಳು ಇವೆ. ಸುಮಾರು 25 ಸಾವಿರ ಕೋಟಿ ವೆಚ್ಚದಲ್ಲಿ ಪ್ರತಿ ಗ್ರಾಮ ಪಂಚಾಯಿತಿಯ ರೈತರಿಗೆ ಆರ್ಥಿಕವಾಗಿ ಶಕ್ತಿ ತುಂಬಲು ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲೂ ಗೋದಾಮು ಮತ್ತು ಕೋಲ್ಡ್ ಸ್ಟೋರೇಜ್ ಘಟಕಗಳನ್ನು ನಿರ್ಮಾಣ ಮಾಡಬೇಕು. ರೈತರು ತಾವು ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಗುವವರೆಗೂ ತರಕಾರಿಗಳನ್ನು ಕೋಲ್ಡ್ ಸ್ಟೋರೇಜ್ ಹಾಗೂ ದ್ವಿದಳ ಧಾನ್ಯಗಳನ್ನು ಗೋಧಾಮುಗಳಲ್ಲಿ ಶೇಕರಿಸಿಕೊಳ್ಳಬಹುದಾದ ವಿಶೇಷ ಯೋಜನೆಯನ್ನು ತರಬೇಕು ಎಂದು ಚಿಂತನೆ ನಡೆಸಿದ್ದೇನೆ ಎಂದು ತಿಳಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ವಿ.ಸಿ. ಫಾರಂನಲ್ಲಿ ಕೃಷಿ ಮೇಳವನ್ನು ಅನೇಕ ಬಾರಿ ನೋಡಿದ್ದೇವೆ. ಆದರೆ, ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆದ ನಂತರ ಇಂದು ಬೃಹತ್ ಕೃಷಿಮೇಳ ಆಯೋಜನೆ ಮಾಡಲಾಗಿದೆ. ಸದರಿ ಕೃಷಿ ಮೇಳಕ್ಕೆ ತನ್ನದೇ ಆದ ಮಹತ್ವವಿದೆ ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಎಚ್.ಡಿ.ದೇವೇಗೌಡ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ವಿ.ಸಿ. ಫಾರಂನ ಕೆನಾಲ್‌ಗೆ ತೂಬು ನಿರ್ಮಾಣ ಮಾಡಿದರು. ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿ ಜಿಲ್ಲೆಯ ಜನರಿಗೆ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೂ ನೂರಕ್ಕೂ ಹೆಚ್ಚು ವಿದ್ಯುತ್ ಘಟಕಗಳನ್ನು ಸ್ಥಾಪಿಸಿ ರೈತರಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡಿದರು ಎಂದು ಹೇಳಿದರು.

ಶಾಸಕ ಎಚ್.ಟಿ.ಮಂಜು ಮಾತನಾಡಿದರು. ಇದೇ ಸಂದರ್ಭದಲ್ಲಿ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು 'ಹಸಿರು ಸಿರಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ರೈತರಿಗೆ ಉಪಯುಕ್ತವಾಗುವ ತಾಂತ್ರಿಕ ಮಾಹಿತಿ ಒಳಗೊಂಡ ಹಸ್ತಪ್ರತಿ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು.

ನಂತರ ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮೈಶುಗರ್ ಶಾಲಾ ಶಿಕ್ಷಕರ ವೇತನಕ್ಕೆ ಕೇಂದ್ರ ಸಚಿವ ಹೆಚ್‌ಡಿಕೆ ವೇತನ ಕೊಡುಗೆ



ಮಂಡ್ಯ: ಮೈಶುಗರ್ ಶಾಲೆಯ ಶಿಕ್ಷಕರ ವೇತನಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಮ್ಮ ವೇತನದ ಹಣವನ್ನು ಚೆಕ್ ಮೂಲಕ ಶುಕ್ರವಾರ ನೀಡಿದರು.

ಶುಕ್ರವಾರ ಶಾಲೆಗೆ ಭೇಟಿ ನೀಡಿದ ಅವರು ಅಧಿಕಾರಿಗಳಿಗೆ 19.94 ಲಕ್ಷ ರೂ.ಗಳ ಚೆಕ್ ಅನ್ನು ನೀಡಿದರು. ಈ ವೇಳೆ ಮಾತನಾಡಿದ ಅವರು 15 ತಿಂಗಳಿನಿಂದ ಸಂಬಳ ಆಗಿಲ್ಲ ಅಂತ ಇಲ್ಲಿನ ಶಿಕ್ಷಕರು ಅಳಲು ತೋಡಿಕೊಂಡಿದ್ದರು. ನನಗೆ ಲೋಕಸಭಾ ಸದಸ್ಯನಾಗಿ ಬರುವ ಸಂಬಳವನ್ನು ನೀಡುತ್ತೇನೆ ಎಂದು ಹೇಳಿದ್ದೆ. ಅದರಂತೆ ಸಂಬಳದ ಮೊದಲ ಬಾಪ್ತು ನೀಡಿದ್ದೇನೆ. 19.94 ಲಕ್ಷ ರೂಗಳನ್ನು ಇಂದು ಕೊಟ್ಟಿದ್ದು, ರಾಜ್ಯ ಸರ್ಕಾರಕ್ಕೂ ಈ ಶಾಲೆಯ ಉಳಿವಿನ ಬಗ್ಗೆ ಮನವಿ ಮಾಡುತ್ತೇನೆ. ಪಿಯುಸಿವರೆಗೆ ಈ ಶಾಲೆ ಮುಂದುವರಿಯಲಿ ಎಂದು ಬಯಸುತ್ತಿದ್ದು, ನಾನು ಸಹ ಶಾಲೆ ಉಳಿವಿಗೆ ಕೈ ಜೋಡಿಸುತ್ತೇನೆ ಎಂದು ಭರವಸೆ ನೀಡಿದರು.

ಮಂಡ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿ ಅನಾವರಣ



ಮಂಡ್ಯ: ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನೂತನವಾಗಿ ಸ್ಥಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಯನ್ನು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಅನಾವರಣಗೊಳಿಸಿದರು. ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಭತ್ತದ ತಾಕುಗಳನ್ನು ವೀಕ್ಷಿಸಿದರು. ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿ ದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಕೃಷಿ ಸಾಧಕರನ್ನು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸನ್ಮಾನಿಸಿದರು. ಕೃಷಿ ಮೇಳ ಸಮಾರಂಭದ ಮುಗಿದ ಬಳಿಕ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಒಂದೇ ಕಾರಿನಲ್ಲಿ ತೆರಳಿದರು.

ಡಿ.17ರಂದು ಮಳವಳ್ಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು

ಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯುತ್ಸವದಲ್ಲಿ ಭಾಗಿ

ಮಂಡ್ಯ, ಡಿ.6– ಮಳವಳ್ಳಿಯಲ್ಲಿ ಹಮ್ಮಿಕೊಂಡಿರುವ ಆದಿ ಜಗದ್ಗುರು ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಡಿ.17ರಂದು ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಆಗಮಿಸುತ್ತಿದ್ದು ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಡಿಸಿ ಡಾ.ಕುಮಾರ ತಿಳಿಸಿದರು.



ಜಿಲ್ಲಾಧಿಕಾರಿ ಡಾ.ಕುಮಾರ ಅಧಿಕಾರಿಗಳ ಸಭೆ ನಡೆಸಿ ಚರ್ಚಿಸುತ್ತಿರುವುದು.

ರಾಷ್ಟ್ರಪತಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನಗರದ ತಮ್ಮ ಕಚೇರಿಯಲ್ಲಿ ಅಗತ್ಯ ಸಿದ್ಧತೆ ಸಂಬಂಧ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಷ್ಟ್ರಪತಿಗಳ ಕರ್ತವ್ಯದಲ್ಲಿ ಲೋಪ ಆಗದಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು. ಅವರು ಸಂಚರಿಸುವ ರಸ್ತೆ ಸಂಪೂರ್ಣವಾಗಿ ದುರಸ್ತಿಗೊಳಿಸಬೇಕು. ರಸ್ತೆಗಳ ಸ್ವಚ್ಛತೆ ಮಾಡಬೇಕು. ಆಂಬ್ಯುಲೆನ್ಸ್ ಹಾಗೂ ತಜ್ಞ ವೈದ್ಯರ ಸೇವೆ ಒದಗಿಸಬೇಕು ಎಂದು ತಿಳಿಸಿದರು.

ಹೆಲಿಪ್ಯಾಡ್ ಸುತ್ತಾ ಬ್ಯಾರಿಕೇಡ್ ಹಾಕಬೇಕು, ಗ್ರೀನ್ ರೂಮ್ ನಿರ್ಮಾಣ ಸೇರಿದಂತೆ ಕಾರ್ಯಕ್ರಮದಲ್ಲಿ ಯಾವುದೇ ವಿದ್ಯುತ್ ಅಡಚಣೆ ಆಗದಂತೆ ಚೆಸ್ಕಾಂ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮದ ಸ್ಥಳದಲ್ಲಿ ಹಾಗೂ ಪ್ರವಾಸಿ ಮಂದಿರದಲ್ಲಿ ಇಂಟರ್ನೆಟ್ ಸಂಪರ್ಕ ಹಾಗೂ ಕಂಪ್ಯೂಟರ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಾರ್ಯಕ್ರಮ ನಡೆಯುವ ಸ್ಥಳ, ಹೆಲಿಪ್ಯಾಡ್ ಸ್ಥಳಗಳಲ್ಲಿ ಅಗ್ನಿ ಶಾಮಕ ದಳದ ವಾಹನ ನಿಯೋಜಿಸಬೇಕು. ರಾಷ್ಟ್ರಪತಿಗಳು ಆಗಮಿಸುವ ಹಿನ್ನೆಲೆಯಲ್ಲಿ ಯಾವುದೇ ಲೋಪ ದೋಷಗಳನ್ನು ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪ್ರಮುಖ ಇಲಾಖೆಗಳಿಂದ ಸ್ಟಾಲ್‌ಗಳ ನಿರ್ಮಾಣ ಮಾಡುವಂತೆ ಹಾಗೂ ಅಲ್ಲಿ ಅಗತ್ಯವಾಗಿ ಬೇಕಾಗಿರುವ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಮಾಡಲು ಅಗತ್ಯ ಕ್ರಮವಹಿಸಬೇಕು ಎಂದರು. ಜಿಪಂ. ಸಿಇಓ ಕೆಆರ್. ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಡಿಸಿ ಶಿವಾನಂದಮೂರ್ತಿ ಉಪಸ್ಥಿತರಿದ್ದರು.

ಎಂಎಸ್‌ಪಿ ಬೆಲೆಯನ್ನು ಕಾರ್ಯರೂಪಕ್ಕೆ ತರುವುದು ರಾಜ್ಯದ ಕರ್ತವ್ಯ: ಹೆಚ್‌ಡಿಕೆ

ಮಂಡ್ಯ, ಡಿ.6– ಎಂಎಸ್‌ಪಿ ಬೆಲೆ ನಿಗದಿ ವಿಚಾರದಲ್ಲಿ ರಾಜ್ಯ ಸರ್ಕಾರ ತಮ್ಮ ಸಮಸ್ಯೆ ಬಗೆಹರಿಸಿಕೊಂಡು ಮೊದಲು ಖರೀದಿ ಕೇಂದ್ರ ತೆರೆದು ಆ ಬಳಿಕ ಕೇಂದ್ರ ಸರ್ಕಾರವನ್ನು ಪ್ರಶ್ನಿಸಬೇಕು. ಎಂಎಸ್‌ಪಿ ಬೆಲೆಯನ್ನು ಕಾರ್ಯರೂಪಕ್ಕೆ ತರುವುದು ರಾಜ್ಯದ ಕರ್ತವ್ಯ ಎಂದು ಕೇಂದ್ರದ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಶನಿವಾರ ಮಂಡ್ಯ ನಗರದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮೇಲೆ ಟೀಕೆ ಮಾಡಲು ರಾಜ್ಯ ಸರ್ಕಾರ ಅರ್ಹತೆ ಉಳಿಸಿಕೊಂಡಿಲ್ಲ. ಸುಮ್ಮನೆ ಕೇಂದ್ರ ಸರ್ಕಾರ ಮೇಲೆ ರಾಜಕೀಯಕ್ಕೆ ಟೀಕೆ ಮಾಡಬೇಡಿ. ರಾಜ್ಯದ ಎನ್‌ಡಿಎ ಸಂಸದರನ್ನು ಪ್ರಧಾನ ಮಂತ್ರಿಗಳ ಮುಂದೆ ನಿಂತು ರಾಜ್ಯದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಬೇಕೆನ್ನುವ ಕಾಂಗ್ರೆಸ್ ಸರ್ಕಾರ ಮೊದಲು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಇವರು ಕೇಂದ್ರ ಸರ್ಕಾರ ಅನುದಾನ ಪಡೆಯಲು ಕೋರ್ಟ್‌ಗೆ ಹೋಗಬೇಕು ಅಂತಾರೆ. ಆದರೆ ನಾನು ಸಿಎಂ ಆಗಿದ್ದಾಗ ಕೋರ್ಟ್‌ಗೆ ಹೋಗಿಲ್ಲ ಸಿದ್ದರಾಮಯ್ಯ ಸಿಎಂ ಆಗಿದ್ದಾಗ 4.5 ಸಾವಿರ ಕೋಟಿ ಸಾಲವನ್ನು ನಾನು ತೀರಿಸಿದ್ದೇನೆ. ನನ್ನ ಕಾಲದ ಸಾಲವನ್ನು ಇವರೇನು ತೀರಿಸಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ವಿವಿಧ ಇಲಾಖೆಗಳಲ್ಲಿ 63% ಭ್ರಷ್ಟಾಚಾರ ಆರೋಪ ಮಾಡಿದ ಉಪ ಲೋಕಾಯುಕ್ತರ ವಿಚಾರದ ಬಗ್ಗೆ ಮಾತನಾಡಿ, ಉಪಲೋಕಾಯುಕ್ತರಿಗೆ ಒಂದು ನಮಸ್ಕಾರ. ಉಪಲೋಕಾಯುಕ್ತರಾಗಿ ಅವರು ಏನು ಕೆಲಸ ಮಾಡುತ್ತಿದ್ದಾರೆ? ಅವರ ಜವಾಬ್ದಾರಿ ಏನು? ಮಾಧ್ಯಮ ಮುಂದೆ ಹೇಳಿಕೆ ನೀಡಲಷ್ಟೇ ಅವರಿಗೆ ಅಧಿಕಾರ ನೀಡಲಾಗಿದೆಯೇ? ಇಲ್ಲಾ ದಾಖಲೆಗಳನ್ನ ಸಂಗ್ರಹಿಸಿ ಕ್ರಮ ತೆಗೆದುಕೊಳ್ಳಬೇಕಲ್ಲವೇ? ಎಂದರು.

ಒಂದನೇ ಪುಟದಿಂದ

ಕೊಟ್ಟ ಮಾತಿನಂತೆ ನಡೆದಿದೆ

ಎರಡೂವರೆ ವರ್ಷದಲ್ಲಿ 242 ಭರವಸೆಗಳನ್ನು ಈಡೇರಿಸಲಾಗಿದೆ ಎಂದರು.

2013ರಿಂದ 2018ರವರೆಗೆ ಹಾಗೂ 2023ರಿಂದ ಇಲ್ಲಿವರೆಗಿನ ನಮ್ಮ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸುವ ಪ್ರಯತ್ನ ಮಾಡುತ್ತಿದೆ. 2013–2018ರಲ್ಲಿ ನೀಡಲಾಗಿದ್ದ 162 ಭರವಸೆಗಳಲ್ಲಿ 158 ಭರವಸೆ ಈಡೇರಿಸಿದ್ದೇವೆ. 2023ರ ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಯಿತು. ಈ ಫಲವಾಗಿ ಜೂನ್ ತಿಂಗಳಲ್ಲಿ ಶಕ್ತಿ ಯೋಜನೆಯನ್ನು ಜಾರಿಗೆ ತಂದಿದ್ದು, ಸುಮಾರು 600 ಕೋಟಿಗೂ ಹೆಚ್ಚು ಮಹಿಳೆಯರು ಉಚಿತ ಬಸ್ ಸೇವೆ ಪಡೆದಿದ್ದಾರೆ.

ಹೇಮಾವತಿ ಜಲಾಶಯದ ಬಳಿ ಉದ್ಯಾನವನ ನಿರ್ಮಿಸುವ ಭರವಸೆ: ಹಾಸನ ಜಿಲ್ಲೆಯ ಗೋರೂರು ಹೇಮಾವತಿ ಜಲಾಶಯದ ಬಳಿ 700 ಎಕರೆ ಜಾಗವಿದ್ದು, ಅಲ್ಲಿ ಪ್ರವಾಸೋದ್ಯಮದ ಪ್ರೋತ್ಸಾಹಕ್ಕೆ ಉದ್ಯಾನವನ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡರು ಕೋರಿಕೆ ಸಲ್ಲಿಸಿದ್ದು, ಈ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದರು.

ಗ್ಯಾರಂಟಿಗಳ ಯಶಸ್ವಿ ಜಾರಿ: ಗ್ಯಾರಂಟಿ ಯೋಜನೆಗಳನ್ನು ಜಾರಿಯಾಗಿಸಲು ಸಾಧ್ಯವಿಲ್ಲ ಎಂದು ವಿಪಕ್ಷಗಳು ದೂರಿದವು. ಆದರೆ ಒಂದು ವರ್ಷದೊಳಗೆ ಎಲ್ಲ ಗ್ಯಾರಂಟಿ ಯೋಜನೆಗಳನ್ನು ನಮ್ಮ ಸರ್ಕಾರ ಯಶಸ್ವಿಯಾಗಿ ಜಾರಿಗೊಳಿಸಿದ್ದು, ಇದುವರೆಗೆ 108135 ಕೋಟಿ ರೂಗಳನ್ನು ವೆಚ್ಚ ಮಾಡಿದೆ. ಲೋಕಸಭೆ ಚುನಾವಣೆಯ ನಂತರ ಗ್ಯಾರಂಟಿಗಳನ್ನು ನಿಲ್ಲಿಸಲಾಗುವುದು ಎಂದು ಆರೋಪಿಸಿದರು. ಟೀಕೆಗಳು ಸಾಯುತ್ತವೆ ಆದರೆ, ನಮ್ಮ ಜನಪರ ಕಾರ್ಯಗಳು ಸದಾ ಉಳಿಯುತ್ತವೆ ಎಂದರು.

ಎಲ್ಲರೂ ಮುಖ್ಯವಾಹಿನಿಗೆ ಬರಬೇಕು: ಸಮಸಮಾಜ ನಿರ್ಮಾಣ ಮಾಡಬೇಕು, ಜಾತಿ, ವರ್ಗ ತೊಲಗಿಸಬೇಕು, ಎಲ್ಲರಿಗೂ ಸಮಾನ ಅವಕಾಶಗಳು ಹಾಗೂ ಹಕ್ಕುಗಳನ್ನು ಕೊಡಬೇಕು ಎಂದು ಸಂವಿಧಾನ ಹೇಳುತ್ತದೆ. ಇದಾಗದೇ ಹೋದರೆ ದೇಶಕ್ಕೆ ಸ್ವಾತಂತ್ರ್ಯ ದೊರಕಿರುವುದು ಸಾರ್ಥಕವಾಗುವುದಿಲ್ಲ ಎಂದರು.

ಗ್ಯಾರಂಟಿಗಳು ವ್ಯರ್ಥ ಎಂದವರಿಗೆ ಜನರೇ ಉತ್ತರ ಕೊಡಬೇಕು: ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಹಣ ಉಳಿತಾಯವಾಗುತ್ತಿದೆ. ಇದನ್ನು ವ್ಯರ್ಥ ಎಂದು ಕೆಲವರು ಟೀಕೆ ಮಾಡುತ್ತಿದ್ದು, ಇದಕ್ಕೆ ಜನರೇ ಉತ್ತರ ಕೊಡಬೇಕು ಎಂದರು. ಅಂಬೇಡ್ಕರ್ ಅವರನ್ನು ನೆನೆಸಿಕೊಂಡು ಸಮಾಜದಲ್ಲಿನ ಜಾತೀಯತೆ, ವರ್ಗ ವ್ಯವಸ್ಥೆಯನ್ನು ತೊಡೆದು ಹಾಕೋಣ. ನಮ್ಮ ಸರ್ಕಾರ ದಲಿತರು, ರೈತರು, ಮಹಿಳೆಯರು, ಕಾರ್ಮಿಕರ ಪರವಾಗಿರುವ ಸರ್ಕಾರ. ಹಾಸನ ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ಚುನಾವಣೆ ಸಂದರ್ಭದಲ್ಲಿ ಘೋಷಣೆ ಮಾಡಿದ್ದನ್ನು ನಾವು ಜಾರಿ ಮಾಡಿದ್ದೇವೆ. ಇಂದು ಉದ್ಘಾಟನೆ ಮತ್ತು ಶಂಕುಸ್ಥಾಪನೆಗೊಂಡ ಯೋಜನೆಗಳು ಜನೋಪಕಾರಿಯಾಗಿವೆ. ಇನ್ನು ಮುಂದೆಯೂ ಹಾಸನ ಜಿಲ್ಲೆಗೆ ವಿಶೇಷ ಗಮನವನ್ನು ನೀಡಲಾಗುತ್ತದೆ ಎಂದರು.

ಡಿಸಿಎಂ ಒಗಟಿನ ಮಾತು!

ಜಾರಿಯಾದರೆ ಮಂಡ್ಯ, ಮೈಸೂರು ಭಾಗದ ಜನರಿಗೆ ಕಷ್ಟಕಾಲದಲ್ಲಿ ನೀರು ಸಿಗುತ್ತದೆ ಎಂದು ಮಾಹಿತಿ ನೀಡಿದ್ದಾರೆ.

ನನ್ನ ಬದುಕು ಬಿಜೆಪಿಗೆ ತಿಳಿದಿದೆ: ಕಾರ್ಟಿಯರ್ ವಾಚ್ ಈ ವಿಚಾರವಾಗಿ ಬಿಜೆಪಿ ಎಂಎಲ್‌ಸಿ ಚಲುವಾದಿ ನಾರಾಯಣಸ್ವಾಮಿ ಆರೋಪ ಕುರಿತು ಮಾತನಾಡಿದ ಅವರು, ನನಗೆ ಎಷ್ಟು ವಾಚ್ ಬೇಕಾದರೂ ಕಟ್ಟುವಷ್ಟು ಶಕ್ತಿ ಇದೆ. ನಾನು ಒಂದು ಸಾವಿರ ರೂ ವಾಚ್ ಕಟುತ್ತೇನೆ, 10 ಲಕ್ಷ ರೂ ವಾಚ್ ಕಟುತ್ತೇನೆ. ಅದು ನನ್ನ ಸಂಪಾದನೆಯ ಆಸ್ತಿ. ನನ್ನ ವ್ಯವಹಾರ ಏನು, ನನ್ನ ಬದುಕು ಏನೆಂದು ಬಿಜೆಪಿಯವರಿಗೂ ಗೊತ್ತಿದೆ ಎಂದು ಕಿಡಿಕಾರಿದ್ದಾರೆ. ಯಾರು ಪ್ಯಾಂಟ್ ಹಾಕುತ್ತಾರೆ, ವಾಚ್ ಕಟ್ಟುತ್ತಾರೆ, ಕನ್ನಡಕ ಹಾಕುತ್ತಾರೆ ಅದನ್ನು ಕೇಳೋಕೆ ಬರಲ್ಲ. ಅದು ಅವರವರ ವೈಯಕ್ತಿಕ ವಿಚಾರ. ಕೆಲವರು ಸಾವಿರ ರೂಪಾಯಿ ಮೌಲ್ಯದ ಶೂ ಹಾಕಿಕೊಳ್ಳುತ್ತಾರೆ. ಮತ್ತೆ ಕೆಲವರು ಒಂದು ಲಕ್ಷ ರೂ ಮೌಲ್ಯದ ಶೂ ಹಾಕಿಕೊಳ್ಳುತ್ತಾರೆ. ಅದು ಅವರವರ ವೈಯಕ್ತಿಕ ವಿಚಾರ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಇದಕ್ಕೂ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ ಶಿವಕುಮಾರ್, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ದೆಹಲಿ ಪೊಲೀಸರು ನೋಟಿಸ್ ಕೊಟ್ಟ ವಿಷಯವಾಗಿ ಪ್ರತಿಕ್ರಿಯಿಸುತ್ತಾ, ನನಗೆ, ಸುರೇಶ್‌ಗೆ ನೋಟಿಸ್ ಕೊಡುತ್ತಾರೆ ಎಂದು ನಿರೀಕ್ಷೆ ಮಾಡಿರಲಿಲ್ಲ. ನಮ್ಮನ್ನು ಅವರು ಕರೆಯಬಾರದಿತ್ತು. ಇಡಿಯವರು ಚಾರ್ಜ್‌ಶೀಟ್‌ನಲ್ಲಿ ನಮ್ಮ ಹೆಸರೇನು ಸೇರಿಸಿಲ್ಲ. ನಮ್ಮ ಹೇಳಿಕೆ ತೆಗೆದುಕೊಂಡು ಬಿಟ್ಟಿದ್ದರು. ನೋಟಿಸ್ ಪೂರ್ತಿ ಓದಿದ್ದೇನೆ. ನಮ್ಮ ಲಾಯರ್‌ಗಳ ಹತ್ತಿರ ಮಾತನಾಡಿ, ಅದಕ್ಕೆ ಏನು ಉತ್ತರ ಕೊಡುತ್ತೇನೆ. ನನಗೆ ನೋಟಿಸ್ ಕೊಡುವಂತಹದ್ದು ಏನಿತ್ತು. ನಾವು ನಿಯಮಿತವಾಗಿ ತೆರಿಗೆ ಪಾವತಿ ಮಾಡುತ್ತಿದ್ದೇವೆ. ನಮ್ಮ ಹಣವನ್ನು ನಮಗೆ ಇಷ್ಟಪಟ್ಟರಿಗೆ ಕೊಡುತ್ತೇವೆ. ನಮ್ಮ ಪಾರ್ಟಿಗೆ ನಾವು ದುಡ್ಡು ಕೊಡದೆ ಇನ್ಯಾರಿಗೆ ಕೊಡೋಣ ಎಂದು ಪ್ರಶ್ನಿಸಿದ ಅವರು, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಬೆಂಬಲಿಗರಿಗೆ ಕಿರುಕುಳ ನೀಡುವುದು, ಗೊಂದಲ ಮೂಡಿಸುವುದು ಇದರ ಉದ್ದೇಶ ಎಂದು ಆರೋಪಿಸಿದರು.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಜಾಗ ಸಿಕ್ಕಿಲ್ಲ!

1.32 ಲಕ್ಷ ಕೋಟಿ ಅನುದಾನ ನೀಡಿದೆ. ಮೆಕ್ಕೆಜೋಳ ಖರೀದಿಸುವಂತೆ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಖರೀದಿ ಕೇಂದ್ರ ತೆರೆದು ಎಂಎಸ್‌ಪಿ ದರದಲ್ಲಿ ರಾಜ್ಯ ಸರ್ಕಾರ ಖರೀದಿ ಮಾಡಬೇಕು. ಆದರೆ, ಪಶು ಆಹಾರ ತಯಾರಕರ ಸಭೆ ನಡೆಸಿ, ಕೆಎಂಎಫ್‌ಗೆ 50 ಸಾವಿರ ಕೆ.ಜಿ. ಮೆಕ್ಕೆ ಜೋಳ ಖರೀದಿಸುವಂತೆ ಹೇಳಿ ಸರ್ಕಾರ ಕೈ ತೊಳೆದುಕೊಂಡಿದೆ. ನಾನು ಸಿಎಂ ಆಗಿದ್ದಾಗ 2 ಅವಧಿಯಲ್ಲೂ ರೈತರು ತಮ್ಮ ಬೆಳೆ ಮಾರಾಟ ಮಾಡಲಾಗದೆ ಪ್ರತಿಭಟಿಸಲಿಲ್ಲ. ಆಧುನಿಕ ಉಪಕರಣಗಳನ್ನು ರೈತರು ಬಳಸಿದರೆ ಶೇ.50ರಷ್ಟು ಹಣ ಉಳಿತಾಯ ಮಾಡಬಹುದು. ಕೃಷಿ ವಿಜ್ಞಾನಿಗಳ ಸಂಶೋಧನೆ ರೈತನ ಮನೆ ಮುಟ್ಟಬೇಕು ಎಂದು ಹೇಳಿದರು.

ನನ್ನ ಮೇಲೆ ಅನುಮಾನ ಬೇಡ, ನಾನೆಲ್ಲೇ ಇದ್ದರೂ ನನ್ನ ಹೃದಯದಲ್ಲಿ ಮಂಡ್ಯಕ್ಕೆ ಮೊದಲ ಸ್ಥಾನ. ಪ್ರತಿಭಟನಾ ನಿರತ ಅಂಗನವಾಡಿ ಕಾರ್ಯಕರ್ತೆಯರನ್ನ ನವದೆಹಲಿಗೆ ಕರೆಸಿ ಸಂಬಂಧಿಸಿದ ಸಚಿವರನ್ನು ಭೇಟಿ ಮಾಡಿಸಿದೆ. ಅವರ ಸಮಸ್ಯೆಗಳಿಗೆ ಈ ಬಜೆಟ್‌ನಲ್ಲಿ ಕನಿಷ್ಠ ಪರಿಹಾರವಾದರೂ ಸಿಗಲಿದೆ ಎಂದರು. ವೇದಿಕೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕರಾದ ಎಚ್.ಟಿ. ಮಂಜು, ಕೆ.ವಿವೇಕಾನಂದ, ಡಿಸಿ ಡಾ.ಕುಮಾರ, ಜಿಪಂ ಕಾರ್ಯನಿರ್ವಹಣಾಧಿಕಾರಿ ಕೆ.ಆರ್.ನಂದಿನಿ, ಕೃಷಿ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ಡಾ.ಕೆ.ಎಂ.ಹರಿಣಿಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚುಂಚಶ್ರೀ ಕ್ಷಮೆ ಕೇಳಿದ ಹೆಚ್‌ಡಿಕೆ

ರಾಜಕೀಯ ಬೆಳವಣಿಗೆಯಲ್ಲಿ ತಮ್ಮ ಹೇಳಿಕೆ ಬಗ್ಗೆ ಸ್ಪಷ್ಟನೆ

ಮಂಡ್ಯ: ಇತ್ತೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಾನು ನೀಡಿದ್ದ ಹೇಳಿಕೆಯಿಂದ ಶ್ರೀ ನಿರ್ಮಲಾನಂದ ಶ್ರೀಗಳಿಗೆ ನೋವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ತಾಲೂಕಿನ ವಿ.ಸಿ.ಫಾರಂನ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಕೃಷಿ ಮೇಳದ 2ನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಕೇಂದ್ರ ಸಚಿವರು, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಷ್ಟು ವಿದ್ಯಾವಂತರಾದ ಮತ್ತೊಬ್ಬ ಸ್ವಾಮೀಜಿಗಳು ಇಲ್ಲ. ಅವರಿಗೆ ಅಗೌರವ ತೋರಿದಂತಾಗಬಾರದು ಎಂಬ ದೃಷ್ಟಿಯಿಂದ ಶ್ರೀಗಳನ್ನು ಬಳಕೆ ಮಾಡಿಕೊಳ್ಳಬಾರದು ಎಂದಿದ್ದೆ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಗಳು ಸಮಾಜದ ಗೌರವ ಉಳಿಸಲಿಕ್ಕೆ ಬೀದಿಗೆ ಬಂದವರು. ಅವರಿಗೆ ದೇವೇಗೌಡರು ಸಿಎಂ ಆಗಲಿ ಎನ್ನುವುದು ಮನಸ್ಸಿನಲ್ಲಿತ್ತು. ನನ್ನನ್ನು ಕಂಡರೂ ಅವರಿಗೆ ತುಂಬಾ ವಾತ್ಸಲ್ಯವಿತ್ತು. ನನ್ನಿಂದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳಿಗೆ ಅಪಚಾರವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದರು.

ಪ್ರಸಕ್ತ ರಾಜಕೀಯ ವಿದ್ಯಮಾನಗಳು ಏನು ನಡೆಯುತ್ತಿವೆ ಎಂಬುದು ಎಲ್ಲರಿಗೂ ಗೊತ್ತು. ಈ ಬಗ್ಗೆ ನಮ್ಮ ನಿರ್ಮಲಾನಂದನಾಥ ಶ್ರೀಗಳು ಮಾತ ನಾಡಿದ್ದಾರೆ. ಅವರು ಮಾತಾಡಿದ್ದಕ್ಕೆ ಇನ್ಯಾರೋ ಮಾತಾಡಿದ್ದಾರೆ. ನಮ್ಮ ಸ್ವಾಮೀಜಿಯಷ್ಟು ಓದಿಕೊಂಡವರು, ಶಿಕ್ಷಣ ಪಡೆದವರು ಮತ್ತೊಬ್ಬರು ಇಲ್ಲ. ಸ್ವಾಮೀಜಿಗಳು ಅವರದ್ದೇ ಆದ ಕಲ್ಪನೆಗಳನ್ನು ಹೊಂದಿರುತ್ತಾರೆ. ಇಂತಹ ಸ್ವಾಮೀಜಿಗಳು ರಾಜಕೀಯಕ್ಕೆ ಬರಬಾರದು. ಅವರಿಗೆ ಅಗೌರವ ಆಗಬಾರದು ಎಂಬ ದೃಷ್ಟಿಯಿಂದ ಬಳಕೆ ಮಾಡಿಕೊಳ್ಳಬಾರದು ಎಂದು ಹೇಳಿದ್ದೆ. ನಮ್ಮ ಹಾಗೂ ದೊಡ್ಡ ಸ್ವಾಮೀಜಿಗಳ ಸಂಬಂಧ ಹಲವರಿಗೆ ಗೊತ್ತಿಲ್ಲ ಎಂದರು.

ಏಕದಿನ ಸರಣಿ: ಭಾರತದ ಕೈವಶ

ದಕ್ಷಿಣ ಆಫ್ರಿಕಾ 47.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 271 ರನ್‌ಗಳ ಗುರಿ ನೀಡಿತ್ತು. ಈ ಮೊತ್ತ ಬೆನ್ನತ್ತಿದ ಭಾರತ 39.5 ಓವರ್‌ನಲ್ಲಿ ಕೇವಲ 1 ವಿಕೆಟ್ ಕಳೆದುಕೊಂಡು 271 ರನ್ ಗಳಿಸಿ 9 ವಿಕೆಟ್ ಅಂತರದಲ್ಲಿ ಅಮೋಘ ಜಯಭೇರಿ ಭಾರಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಹರಿಣ ಪಡೆಗೆ ಆರಂಭಿಕ ದಾಂಡಿಗ ಕ್ವಿಂಟನ್ ಡಿಕಾಕ್ ಉತ್ತಮ ಆರಂಭ ಒದಗಿಸಿದರು. ಅವರು 89 ಎಸೆತಗಳಲ್ಲಿ 8 ಬೌಂಡರಿ, 6 ಸಿಕ್ಸರ್ ಸಹಿತ 106 ರನ್ ಗಳಿಸಿದರು. ಉಳಿದಂತೆ ರಿಯಾನ್ ರಿಕಲ್ಟನ್ ಡಕ್‌ಔಟ್, ಟೆಂಬಾ ಬವುಮ 48, ಮ್ಯಾಥ್ಯೂ ಬ್ರೀಟ್ಜ್ಕೆ 24, ಏಡನ್ ಮಾರ್ಕ್ರಮ್ 1, ಡಿವಾಲ್ಡ್ ಬ್ರೆವಿಸ್ 29, ಮಾರ್ಕೊ ಯಾನ್ಸನ್ 17, ಕಾರ್ಬಿನ್ ಬಾಷ್ 9, ಲುಂಗಿ ಎನ್‌ಗಿಡಿ 1 , ಆಟ್‌ನೀಲ್ ಬಾರ್ಟ್‌ಮನ್ 3 ರನ್ ಹಾಗೂ ಕೇಶವ್ ಮಹಾರಾಜ್ ಅಜೇಯ 20 ರನ್ ದಾಖಲಿಸಿದರು. ಭಾರತದ ಪರ ಕುಲ್‌ದೀಪ್ ಯಾದವ್, ಪ್ರಸಿದ್ಧ್ ಕೃಷ್ಣ 4 ವಿಕೆಟ್ ಪಡೆದು ಮಿಂಚಿದರು. ಅರ್ಷ್‌ದೀಪ್ ಸಿಂಗ್ ಹಾಗೂ ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಪಡೆದರು.

ಇನ್ನು ಸವಾಲಿನ ಗುರಿ ಬೆನ್ನು ಹತ್ತಿದ ಭಾರತಕ್ಕೆ ಆರಂಭಿಕರಾದ ಜೈಸ್ವಾಲ್ ಮತ್ತು ರೋಹಿತ್ ಶರ್ಮಾ ಭರ್ಜರಿ ಆರಂಭ ನೀಡಿದರು. ಶರ್ಮಾ ಕೇವಲ 73 ಎಸೆತಗಳಲ್ಲಿ 3 ಸಿಕ್ಸರ್ ಮತ್ತು 7 ಬೌಂಡರಿ ಸಹಿತ 75 ರನ್ ಸಿಡಿಸಿ ಕೇಶವ್ ಮಹಾರಾಜ್ ಬೌಲಿಂಗ್‌ನಲ್ಲಿ ಔಟಾದರು.

ಮತ್ತೊಂದು ಬದಿಯಲ್ಲಿ ತಾಳ್ಮೆಯ ಆಟವಾಡುತ್ತಿದ್ದ ಯಶಸ್ವಿ ಜೈಸ್ವಾಲ್ 121 ಎಸೆತಗಳಲ್ಲಿ 2 ಸಿಕ್ಸರ್ ಮತ್ತು 12 ಬೌಂಡರಿ ಸಹಿತ 116 ರನ್ ಸಿಡಿಸಿದರು. ಆ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ ಜೈಸ್ವಾಲ್ ತಮ್ಮ ಚೊಚ್ಚಲ ಏಕದಿನ ಶತಕ ಸಿಡಿಸಿದರು. ರೋಹಿತ್ ಔಟಾದ ಬಳಿಕ ಕ್ರೀಸ್ ಗೆ ಬಂದ ವಿರಾಟ್ ಕೊಹ್ಲಿ ಮತ್ತೆ ಸ್ಫೋಟಕ ಬ್ಯಾಟಿಂಗ್ ಮಾಡಿ ಕೇವಲ 45 ಎಸೆತಗಳಲ್ಲಿ 3 ಸಿಕ್ಸರ್ ಮತ್ತು 6 ಬೌಂಡರಿ ಸಹಿತ ಅಜೇಯ 65 ರನ್ ಗಳಿಸಿ ಗೆಲುವಿನ ತಂಡಕ್ಕೆ ಗೆಲುವು ತಂದು ಕೊಟ್ಟರು. ದಕ್ಷಿಣಾ ಆಫ್ರಿಕಾ ಕೇಶವ್ ಮಹಾರಾಜ್ ಒಂದು ವಿಕೆಟ್ ಕಿತ್ತರು.

ಸರಣಿಯುದ್ದಕ್ಕೂ ಉತ್ತಮ ಪ್ರದರ್ಶನ ತೋರಿದ ವಿರಾಟ್ ಕೊಹ್ಲಿ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರೆ, ಫೈನಲ್ ಪಂದ್ಯದ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಯಶಸ್ವಿ ಜೈಸ್ವಾಲ್ ಭಾಜನರಾದರು.

ನನಗೆ ಸಚಿವ ಸ್ಥಾನ ಬೇಡ

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದರೆ ನನಗೆ ಸಚಿವ ಸ್ಥಾನ ಬೇಡ. ಹಾಗಂತ ಡಿಸಿಎಂ ಡಿ.ಕೆ.ಶಿವಕುಮಾರ್ ಸಿಎಂ ಆಗ್ತಾರೆಂದು ಹೇಳುತ್ತಿಲ್ಲ. ಅವರು ಮುಖ್ಯಮಂತ್ರಿ ಆಗೇ ಬಿಡುತ್ತಾರೆ ಅಂದುಕೊಂಡಿದ್ದೀರಾ...? ನನಗೆ ಅಧಿಕಾರದ ದಾಹ ಇಲ್ಲ ಎಂದರು. ಇದೀಗ ರಾಜಣ್ಣ ಅವರ ಈ ಹೇಳಿಕೆ ಹೊಸ ಚರ್ಚೆಗೆ ಕಾರಣ ವಾಗಿದೆ. ಸಿಎಂ ಮತ್ತು ಡಿಸಿಎಂ ದುಬಾರಿ ವಾಚ್‌ಗಳ ಕುರಿತು ವಿರೋಧ ಪಕ್ಷದ ಟೀಕೆಯ ಬಗ್ಗೆ ಪ್ರತಿಕ್ರಿಯಿಸಿದ ರಾಜಣ್ಣ, ವಿರೋಧ ಪಕ್ಷದವರಿಗೆ ವಿರೋಧ ಮಾಡೋಕೆ ಬೇರೆ ವಿಚಾರ ಇಲ್ಲ. ವಾಚ್ ಬಗ್ಗೆ, ಊಟಕ್ಕೆ ಹೋದರೂ ಆರೋಪ ಮಾಡುತ್ತಾರೆ. ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಹರಿಸಲಿ ಅಂತಾ ಮನವಿ ಮಾಡುತ್ತೇನೆ ಎಂದರು.

ಮುಂದಿನ ಚುನಾವಣೆಗೆ ಸ್ಪರ್ಧಿಸಲ್ಲ: ಇದೇ ವೇಳೆ ನಾನು 2028ರ ವಿಧಾನಸಭಾ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂದು ಮಾಜಿ ಸಚಿವ ಕೆಎನ್ ರಾಜಣ್ಣ ಘೋಷಿಸಿದ್ದಾರೆ.

ಭಗವದ್ಗೀತೆಗೂ ಏನು ಸಂಬಂಧ?

ಕೊಲೆ ಮಾಡುವಂಥ ಕೆಟ್ಟ ವಾತಾವರಣ ನಿರ್ಮಾಣವಾಗಿದೆ. ಬದುಕಿನ ನಿಯಮಾವಳಿ ಕಲಿಸುವುದು ಸರ್ಕಾರದ ಕರ್ತವ್ಯ. ರಾಜ್ಯದಲ್ಲಿ ಕೆಟ್ಟ ಬೆಳವಣಿಗೆಗಳು ನಡೆಯುತ್ತಿದೆ. ಹಾಸನದಲ್ಲಿ ತಾಯಿ ಆತ್ಮಹತ್ಯೆ ಮಾಡಿಕೊಂಡರು ಎಂದು ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈಗಿನ ಸಮಾಜ ವೇಗವಾಗಿ ಬೆಳೆಯುತ್ತಿದೆ. ತಾಯಿ ಹೃದಯ ಅನ್ನುವುದಿಲ್ಲ. ನಾನು ಚಿಕ್ಕವನಾಗಿದ್ದಾಗ ನೋಡಿದ್ದ ಸಮಾಜ ಈಗಿಲ್ಲ. ಮನುಷ್ಯ ಸಂಬಂಧಗಳನ್ನು ಬಲಪಡಿಸಿ ಸಮಾಜವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಭಗವದ್ಗೀತೆ ಬೋಧನೆ ಅಗತ್ಯವೆಂದು ಹೇಳಿದ್ದೇನೆ ಎಂದು ಕೇಂದ್ರ ಸಚಿವರು ಹೇಳಿದರು.

ಸಿದ್ದರಾಮಯ್ಯ ತಲೆಯಲ್ಲಿ ಇರುವುದು ಸಮಾಜದಲ್ಲಿ ಘರ್ಷಣೆ ಉಂಟು ಮಾಡುವುದಷ್ಟೆ, ಕಳೆದ 10 ವರ್ಷದಿಂದ ಅಹಿಂದ ಹೆಸರಿನಲ್ಲಿ ಸಿದ್ದರಾಮಯ್ಯ ಮಜಾ ಮಾಡಿದ್ದಾರೆ. ಅವರಿಂದ ಅಹಿಂದಕ್ಕೆ ಸಿಕ್ಕ ಕೊಡುಗೆ ಏನು? ಅಹಿಂದ ಸಮಸ್ಯೆ ಎಷ್ಟು ಬಗೆ ಹರಿಸಿದ್ದಾರೆ? ಅಹಿಂದದಲ್ಲಿ ಅನೇಕ ಸಣ್ಣ ಜಾತಿಗಳಿವೆ. ಆ ಸಮಾಜಗಳಿಗೆ ಅವರ ಕೊಡುಗೆ ಏನು? ಅವರು ಯಾರಿಗೆ ಆದ್ಯತೆ ಕೊಟ್ಟಿದ್ದಾರೆ? ಸಂಬಂಧಿಕರ ಜೊತೆ ರಕ್ತದೋಕುಳಿ ನಡೆಸುವುದು ಬೇಡ ಅನ್ನುವುದು ಭಗವದ್ಗೀತೆಯಲ್ಲಿದೆ. ಭಗವದ್ಗೀತೆ ಸಾರಾಂಶ ಜನರಿಗೆ ಮಕ್ಕಳಿಗೆ ಹೇಳುವ ಅವಶ್ಯಕತೆ ಇದೆ. ಈ ಸರ್ಕಾರ ಕಾನೂನುಬಾಹಿರ ಚಟುವಟಿಕೆ ಬೆಂಬಲಿಸುತ್ತದೆ. ಇದರಿಂದ ಭಗವದ್ಗೀತೆ ಈ ಸಂದರ್ಭದಲ್ಲಿ ಅವಶ್ಯಕತೆ ಇದೆ ಎಂದು ನಾನು ಪ್ರತಿಪಾದಿಸಿದ್ದೇನೆ ಎಂದು ತಿಳಿಸಿದರು.

ಸೋನಿಯಾ ಮಹತ್ವದ ಸಭೆ


ಆದರೆ ಯಾವುದೇ ತೀರ್ಮಾನಕ್ಕೆ ಬರಲಾಗಿಲ್ಲ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಸಿ.ವೇಣುಗೋಪಾಲ್ ಚರ್ಚೆ ವೇಳೆ ಕರ್ನಾಟಕದ ವಿಚಾರ ಪ್ರಸ್ತಾಪವಾಗಿದ್ದು ನಿಜ, ಆದರೆ ಇದರ ಬಗ್ಗೆ ಯಾವುದೇ ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಮತ್ತೊಮ್ಮೆ ಸಭೆ ನಡೆಸಿ, ತೀರ್ಮಾನಿಸಲಾಗುವುದು ಎಂದರು. ಇದಕ್ಕೂ ಮುನ್ನ ಬೆಂಗಳೂರಲ್ಲಿ ಬೀಡುಬಿಟ್ಟಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದು ನವದೆಹಲಿಗೆ ಪ್ರಯಾಣ ಬೆಳೆಸಿದರು. ಈ ವೇಳೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಖರ್ಗೆ ಅವರೊಂದಿಗೆ ಅವರ ಕಾರಿನಲ್ಲೇ ವಿಮಾನ ನಿಲ್ದಾಣಕ್ಕೆ ತೆರಳಿದರು. ಇದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಹಲ್ಲೆ ಬಳಿಕ ವ್ಯಕ್ತಿ ಅಪಹರಣ

ತಪ್ಪಿಸಿಕೊಳ್ಳಲು ಯತ್ನಿಸಿದರೂ ಸಾಧ್ಯವಾಗಿಲ್ಲ. ಆ ವೇಳೆ ವ್ಯಕ್ತಿಯ ಪಾದರಕ್ಷೆ, ವಾಚ್ ಹಾಗೂ ಟೋಪಿ ರಸ್ತೆಯಲ್ಲಿ ಬಿದ್ದಿವೆ. ಹಾಲಿನ ಕೇಂದ್ರದ ಬಳಿ ನಿಂತಿದ್ದ ಜನ, ಈ ಘಟನೆ ಕಂಡು ಭಯಭೀತಿಗೊಂಡು, ವ್ಯಕ್ತಿಯ ರಕ್ಷಣೆಗೆ ಧಾವಿಸುವ ಧೈರ್ಯ ಮಾಡಿಲ್ಲ. ವಿಷಯ ತಿಳಿದ ವಿಜಯನಗರ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಘಟನೆ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಕಲೆ ಹಾಕಿದ್ದಾರೆ. ಬಳಿಕ ವಿಜಯನಗರ ಉಪವಿಭಾಗದ ಎಸಿಪಿ ರವಿಪ್ರಸಾದ್, ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಹಾಗೂ ಸಿಬ್ಬಂದಿ, ಆ ರಸ್ತೆಯಲ್ಲಿರುವ ಸಿಸಿಟಿವಿ ಕ್ಯಾಮರಾಗಳ ಫುಟೇಜ್ ಪರಿಶೀಲಿಸಿದ್ದಾರೆ. ಒಂದು ಮನೆಯ ಸಿಸಿಟಿವಿಯಲ್ಲಿ ಟಾಟಾ ಸುಮೋ ವಾಹನದಲ್ಲಿ ಬಂದ ಐದಾರು ಮಂದಿ, ವ್ಯಕ್ತಿಗೆ ಥಳಿಸಿ ಅಪಹರಿಸಿರುವ ದೃಶ್ಯ ಸೆರೆಯಾಗಿದೆ. ಈ ಹಿನ್ನೆಲೆಯಲ್ಲಿ ಅಪಹರಣಕಾರರು ನಗರ ದಾಟದಂತೆ ಕಟ್ಟೆಚ್ಚರ ವಹಿಸುವಂತೆ ಎಲ್ಲೆಡೆ ಸಂದೇಶ ರವಾನಿಸಲಾಗಿದೆ. ಅಪಹರಣಕ್ಕೊಳಗಾಗಿರುವ ವ್ಯಕ್ತಿ ಬೆಳವಾಡಿಯ ಲೋಕೇಶ್ ಎಂದು ತಿಳಿಸಿರುವ ಪೊಲೀಸ್ ಮೂಲಗಳು, ಆತನೇ ತಾನು ಸುರಕ್ಷಿತವಾಗಿ ಮನೆಗೆ ಬರುವುದಾಗಿ ತನ್ನ ಪತ್ನಿಗೆ ಮೆಸೇಜ್ ಕಳುಹಿಸಿದ್ದಾರಂತೆ. ಯಾರು, ಯಾವ ಕಾರಣಕ್ಕೆ ಅಪಹರಿಸಿದ್ದಾರೆ ಎಂಬುದು ಪೊಲೀಸರ ವಿಚಾರಣೆಯಿಂದ ಬಯಲಾಗಬೇಕಿದೆ.

ಲಂಚ ಪಡೆದಿದ್ದು ಸಾಬೀತಾದರೆ ರಾಜೀನಾಮೆ

ಬೆಂಗಳೂರು,ಡಿ.6–ನಾನು ಯಾರಿಂದಲೂ ಒಂದು ಪೈಸೆ ಲಂಚ ಪಡೆದಿಲ್ಲ. ನಾನು ಲಂಚ ಪಡೆದಿರುವುದು ಸಾಬೀತುಪಡಿಸಿದರೆ ಆ ಕ್ಷಣವೇ ಪದವಿಗೆ ರಾಜೀನಾಮೆ ನೀಡುತ್ತೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇ ಶ್ವರ್ ಹೇಳಿದ್ದಾರೆ.



ರಾಜ್ಯ ಪೊಲೀಸ್ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು, ಪೊಲೀಸ್ ಇಲಾಖೆಯಲ್ಲಿ ಯಾರೇ ಭ್ರಷ್ಟಾಚಾರ ತೊಡಗಿದರೆ ಮುಲಾಜಿಲ್ಲದೆ ಕ್ರಮ ಜರುಗಿಸಲಾಗುತ್ತದೆ ಎಂದರು. ಪೊಲೀಸರ ಭ್ರಷ್ಟಾಚಾರಕ್ಕೆ ವರ್ಗಾವಣೆ ನೀತಿಯೇ ಕಾರಣ ಎಂಬ ಆರೋಪ ವಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ವರ್ಗಾವಣೆಗೆ ಮಾತ್ರವಲ್ಲ, ಯಾವುದೇ ಕೆಲಸಕ್ಕೂ ಪೊಲೀಸರು ಅಥವಾ ಮತ್ತೊಬ್ಬರಿಂದ ಲಂಚ ಪಡೆದಿಲ್ಲ. ಲಂಚ ಪಡೆದಿರುವುದು ಸಾಬೀತುಪಡಿಸಿದರೆ ಸಚಿವ ಸ್ಥಾನ ತೊರೆಯುತ್ತೇನೆ ಎಂದು ಸಚಿವರು ಪ್ರತಿಕ್ರಿಯಿಸಿದರು.

ಬಿವಿಬಿಯಲ್ಲಿ 'ಭಾರತ ಭಾಗ್ಯ ವಿಧಾತ' ನಾಟಕ ರೂಪಕ ಪ್ರದರ್ಶನ



ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ 'ಭಾರತ ಭಾಗ್ಯ ವಿಧಾತ' ನಾಟಕ ರೂಪಕ ಪ್ರದರ್ಶನ ನಡೆಯಿತು.

ಮೈಸೂರು, ಡಿ.6(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ವರ್ಷದ ಮಹಾಪರಿನಿಬ್ಬಾಣ ದಿನದ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ಮಾಣದ 'ಭಾರತ ಭಾಗ್ಯ ವಿಧಾತ' ನಾಟಕ ರೂಪಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ ರೂಪಕ ಪ್ರದರ್ಶನ ಹಾಗೂ ಸಂವಾದ ಕಾರ್ಯಕ್ರಮವನ್ನು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಬಳಿಕ ಶಾಲೆಯ ನೂರಾರು ವಿದ್ಯಾರ್ಥಿಗಳು ನಾಟಕ ರೂಪಕ ಪ್ರದರ್ಶನ ವೀಕ್ಷಣೆ ಮಾಡಿದರು. ನಂತರ ಮೈಸೂರು ವಿವಿ ಡಾ.ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಅವರೊಂದಿಗೆ ಸಂವಾದ ನಡೆಸುವ ಮೂಲಕ ಅಂಬೇಡ್ಕರ್ ಅವರ ಸಾಧನೆ, ಬರವಣಿಗೆ, ವಿಚಾರ ಕುರಿತು ಮೆಲುಕು ಹಾಕಿದರು. ಮೈಸೂರು ವಿವಿ ಡಾ.ಅಂಬೇಡ್ಕರ್ ಸಂಶೋಧನಾ–ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್. ನರೇಂದ್ರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಶಾಲೆ ಶಿಕ್ಷಕರು, ಸಿಬ್ಬಂದಿ ಉಪಸ್ಥಿತರಿದ್ದರು.



ಶಿಕ್ಷಣ ಇಲಾಖೆಯಲ್ಲಿ 32 ವರ್ಷಗಳ ಕಾಲ ಸೇವೆ ಸಲ್ಲಿಸಿ, ಹಳ್ಳಿದಿಡ್ಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ನಿವೃತ್ತರಾದ ಬಿ.ವಿ.ಸಚ್ಚಿದಾನಂದ ಅವರನ್ನು ಶ್ರೀ ಶಾರದಾ ನಿಕೇತನ ಕಲ್ಯಾಣ ಮಂಟಪದಲ್ಲಿ 'ಸಾರ್ಥಕ ಸೇವೆಯ ಒಂದು ಸವಿನೆನಪು' ಕಾರ್ಯಕ್ರಮ ಆಯೋಜಿಸಿ, ಸಚ್ಚಿದಾನಂದ ದಂಪತಿಯನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಅಧಿಕಾರಿಗಳು, ಶಿಕ್ಷಕರು, ಸ್ನೇಹಿತರು ಇದ್ದರು.

ಡಿ.9ಕ್ಕೆ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ

ಮೈಸೂರು,ಡಿ.6(ಎಂಟಿವೈ)–ಯುವಜನರಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನಕ್ಕೆ ಡಿ.9ರ ಬೆಳಗ್ಗೆ 10.30ಕ್ಕೆ ಜೆ.ಕೆ. ಮೈದಾನದಲ್ಲಿ ಚಾಲನೆ ದೊರೆಯಲಿದ್ದು, ರಾಜ್ಯದಾದ್ಯಂತ ಜಾಗೃತಿ ಮೂಡಿಸುವ ರಥಯಾತ್ರೆ ಸಂಚರಿಸಲಿದೆ ಎಂದು ರೇಡಿಯೋ ಜಾಕಿ ಅವಿನಾಶ್ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುವ ಜನರಲ್ಲಿ ಮಾದಕ ವ್ಯಸನದ ಅಪಾಯದ ಬಗ್ಗೆ ಅರಿವು ಮೂಡಿಸುವುದು. ಮಾದಕ ವಸ್ತುಗಳ ಮಾರಾಟ, ಬಳಕೆ, ಅಪರಾಧದ ಬಗ್ಗೆ ಜನರನ್ನು ಎಚ್ಚರಗೊಳಿಸುವುದು. ಯುವ ಜನತೆ ಡ್ರಗ್ಸ್‌ರಹಿತ ಆರೋಗ್ಯಕರ ಜೀವನ ನಡೆಸಲು ಉತ್ತೇಜಿಸುವುದು ಸೇರಿದಂತೆ ವಿವಿಧ ಉದ್ದೇಶದಿಂದ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನ ನಡೆಸಲಾಗುತ್ತಿದೆ. ಇದರ ಅಂಗವಾಗಿ ಸ್ತಬ್ಧ ಚಿತ್ರವೊಂದು ಜ.19ರವರೆಗೆ ಮೈಸೂರು, ಚಾಮರಾಜನಗರ, ಕೊಡಗು, ಪುತ್ತೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಶ್ರೀನಿಧಿ, ಶೋಭಿತ್ ರಂಗಪ್ಪ, ಮೋಹಿತ್ ಇದ್ದರು.

ಕುಶಲಕರ್ಮಿಗಳು, ಉದ್ಯಮಿಗಳ ಸಮ್ಮಿಲನ 'ಸಯೋಗ ಬಜಾರ್'ಗೆ ಚಾಲನೆ

ಮೈಸೂರು, ಡಿ.6(ಎಂಕೆ)– ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಸಯೋಗ ಯೋಗ ಕೇಂದ್ರದಲ್ಲಿ ಕುಶಲಕರ್ಮಿಗಳು ಹಾಗೂ ಉದ್ಯಮಿಗಳನ್ನು ಒಂದುಗೂಡಿಸುವ ಎರಡು ದಿನಗಳ ವಿನೂತನ ಕರಕುಶಲ, ವಿಶೇಷ ಕ್ರಿಯಾತ್ಮಕ ವಸ್ತುಗಳ ಪ್ರದರ್ಶನ 'ಸಯೋಗ ಬಜಾರ್' ಕಾರ್ಯಕ್ರಮಕ್ಕೆ ಶನಿವಾರ ಚಾಲನೆ ದೊರೆಯಿತು.

'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ ಅವರು ದೀಪ ಬೆಳಗಿಸುವ ಮೂಲಕ 'ಸಂಯೋಗ ಬಜಾರ್'ಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಸಯೋಗ ಬಜಾರ್' ಕೇವಲ ವಸ್ತು ಪ್ರದರ್ಶನವಲ್ಲ. ಬದಲಿಗೆ ನಮ್ಮ ಸಂಸ್ಕೃತಿ, ಸೃಜನಶೀಲತೆಯನ್ನು ಪ್ರತಿಬಿಂಬಿಸುವ ಒಂದು ದೊಡ್ಡ ಸಂಭ್ರಮಾಚರಣೆಯಾಗಿದೆ ಎಂದು ಶ್ಲಾಘಿಸಿದರು.

ಕುಶಲಕರ್ಮಿಗಳು ಹಾಗೂ ಉದ್ಯಮಿಗಳನ್ನು ಒಂದುಗೂಡಿಸುವ ಮೂಲಕ ಮೈಸೂರಿನ ಸಾಂಸ್ಕೃತಿಕ ಗುರುತನ್ನು ಗಟ್ಟಿಗೊಳಿಸುತ್ತದೆ ಮತ್ತು ಉತ್ತಮ ಜೀವನಶೈಲಿ ರೂಢಿಸಿಕೊಳ್ಳಲು ಪ್ರೇರೇಪಿಸುತ್ತದೆ ಎಂದು ಹೇಳಿದರು.

ಸಯೋಗ ಯೋಗ ಕೇಂದ್ರದ ಮಾಲೀಕರಾದ ಶ್ರೀಮತಿ ಶ್ರುತಿ ರಂಗ ಮಾತನಾಡಿ, ಕರಕುಶಲತೆ ಮತ್ತು ಸಾರ್ವಜನಿಕರು ಒಂದೆಡೆ ಸೇರುವ ವೇದಿಕೆಯನ್ನು ಸೃಷ್ಟಿಸುವ ಉದ್ದೇಶದ ಭಾಗವಾಗಿ 'ಸಯೋಗ ಬಜಾರ್' ಆಯೋಜಿಸಿದ್ದೇವೆ. ಈ ಬಾರಿ ಮಹಿಳಾ ಉದ್ಯಮಗಳಿಗೆ ಮತ್ತು ಉತ್ತಮ ವಿನ್ಯಾಸಕ್ಕೆ ಒತ್ತು ನೀಡಿದ್ದು, ಮೈಸೂರಿನ ಜನರು ಈ ಕುಶಲಕರ್ಮಿಗಳನ್ನು ಪ್ರೋತ್ಸಾಹಿಸುತ್ತಾರೆ ಎಂಬ ನಂಬಿಕೆ ಇದೆ ಎಂದರು.

ಈ ಸಂದರ್ಭದಲ್ಲಿ ರಂಗಸನ್ಸ್ ಅಧ್ಯಕ್ಷ ಆರ್.ಗುರು, ಸ್ಪಾರ್ಕ್ ಕ್ಯಾಪಿಟಲ್‌ನ ವ್ಯವಸ್ಥಾಪಕ ನಿರ್ದೇಶಕ ಕಿಶೋರ್ ರಿಜ್ವಾನಿ, ಕಾರ್ಯ ನಿರ್ವಾಹಕ ಉಪಾಧ್ಯಕ್ಷ ಅಂಬುಜ್ ಅಶೋಕ್, ಎನ್‌ಆರ್ ಗ್ರೂಪ್ ನಿರ್ದೇಶಕ ಪವನ್ ರಂಗ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ವಿವಿ ಮೊಹಲ್ಲಾದ 4ನೇ ಮೇನ್, ನಂ.2275ರಲ್ಲಿ 'ಸಂಯೋಗ ಯೋಗ ಕೇಂದ್ರ'ದಲ್ಲಿ ಆಯೋಜಿಸಿರುವ ಎರಡು ದಿನಗಳ ವಿನೂತನ ಕರಕುಶಲ ಹಾಗೂ ವಿಶೇಷ ಕ್ರಿಯಾತ್ಮಕ ವಸ್ತುಗಳ ಪ್ರದರ್ಶನ 'ಸಂಯೋಗ ಬಜಾರ್'ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ 'ಸಂಯೋಗ ಯೋಗ ಕೇಂದ್ರ'ದ ಮಾಲೀಕರಾದ ಶ್ರೀಮತಿ ಶ್ರುತಿ ರಂಗ, ರಂಗಸನ್ಸ್ ಅಧ್ಯಕ್ಷ ಆರ್.ಗುರು, ಸ್ಪಾರ್ಕ್ ಕ್ಯಾಪಿಟಲ್‌ನ ವ್ಯವಸ್ಥಾಪಕ ನಿರ್ದೇಶಕ ಕಿಶೋರ್ ರಿಜ್ವಾನಿ, ಕಾರ್ಯನಿರ್ವಾಹಕ ಉಪಾಧ್ಯಕ್ಷ ಅಂಬುಜ್ ಅಶೋಕ್, ಎನ್‌ಆರ್ ಗ್ರೂಪ್ ನಿರ್ದೇಶಕ ಪವನ್ ರಂಗ ಮತ್ತಿತರರು ಉಪಸ್ಥಿತರಿದ್ದರು.



ಜ್ಞಾನ ಸಂಪತ್ತಾದ ಹಸ್ತಪ್ರತಿಗಳ ಸಂರಕ್ಷಣೆಗೆ ಹೊಸ ಕಾಯ್ದೆ

ರಾಜ್ಯಮಟ್ಟದ ಹಸ್ತಪ್ರತಿ ಡಿಜಿಟಲೀಕರಣ ಕಾರ್ಯಾಗಾರದಲ್ಲಿ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಪ್ರಕಟ



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಯೋಗದಲ್ಲಿ ಜ್ಞಾನ ಭಾರತಂ ಮಿಷನ್ ಅಡಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಹಸ್ತಪತ್ರಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಸಚಿವ ಹೆಚ್.ಕೆ.ಪಾಟೀಲ್ ಉದ್ಘಾಟಿಸಿದರು.

ಮೈಸೂರು, ಡಿ. 6(ಆರ್‌ಕೆ)– ನಾಡಿನ ಹಸ್ತಪ್ರತಿಗಳ ಸಂರಕ್ಷಣೆಗಾಗಿ ಹೊಸ ಕಾಯ್ದೆ ರೂಪಿಸಲು ಮುಂದಾಗಿರುವ ಸರ್ಕಾರಕ್ಕೆ ಸಲಹೆಗಳನ್ನು ಆಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಅವರು ತಿಳಿಸಿದ್ದಾರೆ.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಯೋಗದಲ್ಲಿ ಜ್ಞಾನ ಭಾರತಂ ಮಿಷನ್ ಅಡಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಹಸ್ತಪತ್ರಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣ ಕುರಿತ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

> "ಜ್ಞಾನ ಭಾರತಂ ಮಿಷನ್‌ನಡಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಶದಲ್ಲಿರುವ ಸುಮಾರು 1 ಕೋಟಿ ಹಸ್ತಪ್ರತಿಗಳ ಸಂರಕ್ಷಣೆಗೆ ಡಿಜಿಟಲೀಕರಣಗೊಳಿಸಲು ಕೇಂದ್ರ ಬಜೆಟ್‌ನಲ್ಲಿ 600 ಕೋಟಿ ರೂಗಳನ್ನು ಮೀಸಲಿರಿಸಿದ್ದಾರೆ. 1 ಸಾವಿರ ವರ್ಷಗಳ ಆಯುಸ್ಸಿರುವ ತಾಳೆಗರಿ ಹಸ್ತಪ್ರತಿಗಳು ನಶಿಸಿದಲ್ಲಿ ಮುಂದಿನ ಪೀಳಿಗೆಗೆ ಜ್ಞಾನ ಸಂಪತ್ತಾದ ಹಸ್ತಪ್ರತಿಗಳು ನಾಪತ್ತೆಯಾಗಲಿವೆ. ಅದನ್ನು ಸಂರಕ್ಷಿಸಲು ಡಿಜಿಟಲೀಕರಣ ಒಂದೇ ಮಾರ್ಗ ಈ ಕಾರ್ಯಕ್ಕೆ ರಾಜ್ಯ ಸರ್ಕಾರವೂ ಕೈಜೋಡಿಸುತ್ತಿದ್ದು, ಅದನ್ನು ದೇಶದ ಜ್ಞಾನ ಸಂಪತ್ತಾಗಿ ಉಳಿಸಲು ಅಭಿಯಾನ ಆರಂಭವಾಗಿದೆ.
> –ಡಾ. ಡಿ.ಪಿ.ಮಧುಸೂದನಾಚಾರ್ಯ ನಿರ್ದೇಶಕರು, ಪ್ರಾಚ್ಯವಸ್ತು ಸಂಶೋಧನಾ ಸಂಸ್ಥೆ, ಮೈಸೂರು.

ಹೊಸ ಕಾಯ್ದೆಯು ಹಸ್ತಪ್ರತಿಗಳನ್ನು ಹೊಂದಿರುವವರಿಗೆ ಹೊರೆಯಾಗಬಾರದು, ಬದಲಿಗೆ ನೆರವಾಗಬೇಕು. ಈ ಕ್ಷೇತ್ರದಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳ ಮುಖ್ಯಸ್ಥರು, ಹಿರಿಯ ಸಂಗ್ರಹಕರ ಅನುಭವ ಅಪಾರವಾದುದು. ಕಾಯ್ದೆಯ ಕರಡು ಸಿದ್ಧಪಡಿಸುವ ಮುನ್ನ ನೀವೆಲ್ಲರೂ ಮುಂದೆ ಬಂದು ನಿಮ್ಮ ಅಮೂಲ್ಯ ಸಲಹೆ–ಸೂಚನೆಗಳನ್ನು ಸರ್ಕಾರಕ್ಕೆ ನೀಡಬೇಕು ಎಂದು ಸಚಿವರು ಕೋರಿದರು.

ಸಂರಕ್ಷಕರಿಗೆ ಅಭಯ: ಹಸ್ತಪ್ರತಿ ನಿಮ್ಮದೇ ಮಾಹಿತಿ ನಮ್ಮದು ಹೊಸ ಕಾಯ್ದೆಯ ಬಗ್ಗೆ ಅನಗತ್ಯ ಭಯ ಬೇಡ ಎಂದು ಸ್ಪಷ್ಟಪಡಿಸಿದ ಸಚಿವರು, ಸರ್ಕಾರವು ಮೂಲ ಹಸ್ತಪ್ರತಿಗಳನ್ನು ವಶಪಡಿಸಿಕೊಳ್ಳುವುದಿಲ್ಲ, ಅವು ಆಯಾ ಸಂಸ್ಥೆ ಅಥವಾ ವ್ಯಕ್ತಿಗಳ ಸ್ವತ್ತಾಗಿಯೇ ಉಳಿಯುತ್ತವೆ. ಹಸ್ತಪ್ರತಿಗಳು ನಶಿಸಿದರೂ ಜ್ಞಾನ ಉಳಿಯಬೇಕು. ಅದಕ್ಕಾಗಿ ಸರ್ಕಾರಕ್ಕೆ ಕೇವಲ ಅದರ ಡಿಜಿಟಲ್ ಪ್ರತಿ (Digital Data) ಮತ್ತು ಸರಳ ಘೋಷಣೆ (Declaration) ಮಾತ್ರ ಸಾಕು ಎಂದು ಸಚಿವರು ತಿಳಿಸಿದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಮಾತನಾಡಿ, ಡಿಜಿಟಲೀಕರಣವು ಹಸ್ತಪ್ರತಿಗಳ ಅಳಿವಿನ ವಿರುದ್ಧ ಇರುವ ಏಕೈಕ ರಕ್ಷಣೆ. ಇದು ನಮ್ಮ ಬೌದ್ಧಿಕ ಪರಂಪರೆಯನ್ನು ಶಾಶ್ವತವಾಗಿ ಉಳಿಸಲು ಮತ್ತು ಜಾಗತಿಕವಾಗಿ ಜ್ಞಾನ ಪ್ರಸರಿಸಲು ಇರುವ ಅತ್ಯುತ್ತಮ ಮಾರ್ಗ ಎಂದು ವಿವರಿಸಿದರು.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ್‌ಚಂದ್ರ, ಜ್ಞಾನ ಭಾರತಂ ಮಿಷನ್, ಕರ್ನಾಟಕ ಮುಖ್ಯ ಸಂಚಾಲಕ ಡಾ.ಬಿ. ಗೋಪಾಲಚಾರ್ಯ, ಪುರಾತತ್ವ ಇಲಾಖೆ ಆಯುಕ್ತ ಎ. ದೇವರಾಜು, ಮೈಸೂರಿನ ಪ್ರಾಚ್ಯವಸ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ. ಡಿ.ಪಿ.ಮಧುಸೂದನಾಚಾರ್ಯ, ಬೆಂಗಳೂರಿನ ಪ್ರಾಚ್ಯವಸ್ತು ಸಂಶೋಧನಾ ಸಂಸ್ಥೆಯ ಡಾ.ಆರ್.ಶೇಜೇಶ್ವರ್ ಮತ್ತು ಡಾ.ಡಿ.ಸ್ಮಿತ ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಿ ಶಾಲೆ ಮುಚ್ಚುವ ಹುನ್ನಾರ ಖಂಡಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ



ಸರ್ಕಾರಿ ಶಾಲೆ ಮುಚ್ಚದಂತೆ ಆಗ್ರಹಿಸಿ ಎಐಡಿಎಸ್‌ಓ ಕಾರ್ಯಕರ್ತರು ಮೈಸೂರು ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರದ ಚಟ್ನಹಳ್ಳಿ–1(ಪುಟ್ಟೇಗೌಡನ ಹುಂಡಿ) ಶಾಲೆ ಮುಂದೆ ಪ್ರತಿಭಟನೆ ಮಾಡಿದರು.

ಮೈಸೂರು,ಡಿ.6(ಎಂಟಿವೈ)– ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್– ಮ್ಯಾಗ್ನೆಟ್ ಸ್ಥಾಪನೆ ಹೆಸರಿನಲ್ಲಿ ಸರ್ಕಾರಿ ಶಾಲೆಗಳ ಮುಚ್ಚುವ ನಿರ್ಧಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲೆಯ ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಚಟ್ನಹಳ್ಳಿ–1 (ಪುಟ್ಟೇಗೌಡನಹುಂಡಿ) ಹಾಗೂ ಹೊಸ ಹುಂಡಿ ಗ್ರಾಮದ ಶಾಲೆಯ ಮುಂದೆ ಎಐಡಿಎಸ್‌ಓ ಪದಾಧಿಕಾರಿಗಳು ಶಾಲಾ ವಿದ್ಯಾರ್ಥಿಗಳೊಂದಿಗೆ ಪ್ರತಿಭಟನೆ ಮಾಡಿದರು. ಸರ್ಕಾರಿ ಶಾಲೆಗಳನ್ನು ಬಲವರ್ಧನೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರ್ಕಾರ ಕೆಪಿಎಸ್–ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿಗೊಂದು ಹೊಸ ಶಾಲೆ ಮಾಡುತ್ತೇವೆ ಎಂದು ಹೇಳಿ 40 ಸಾವಿರಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ. ಈ ಯೋಜನೆ ಭಾಗವಾಗಿ ವರಕೋಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಶಾಲೆಯನ್ನಾಗಿ ಪರಿವರ್ತಿಸಿ, ಚಟ್ನಹಳ್ಳಿ–1 (ಪುಟ್ಟೇಗೌಡನಹುಂಡಿ) ಹಾಗೂ ಹೊಸ ಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ವರಕೋಡು ಶಾಲೆಗೆ ವಿಲೀನಗೊಳಿಸುವುದಾಗಿ ಹೇಳಿದ್ದಾರೆ. 91 ದಾಖಲಾತಿ ಹೊಂದಿರುವ ಈ ಶಾಲೆಯನ್ನು ಮುಚ್ಚುತ್ತಿರುವ ಸರ್ಕಾರ ಬಡ ರೈತ–ಕಾರ್ಮಿಕರ ಮಕ್ಕಳಿಗೆ ಅನ್ಯಾಯ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ನಿತಿನ್, ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ, ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದನ, ಚಂದ್ರಿಕಾ, ಹೇಮಲತಾ, ಅಭಿಷೇಕ್, ನಂದೀಶ್, ಕಾರ್ಯಕರ್ತರಾದ ರವಿಚಂದ್ರ ಹಾಗೂ ಪುಟ್ಟೇಗೌಡನ ಹುಂಡಿಯ ಗ್ರಾಮಸ್ಥರಾದ ಚಂದ್ರ ಶೇಖರ್, ನಾಗರಾಜು, ಮಹದೇವಸ್ವಾಮಿ, ಸುನೀತಾ, ಅನುರಾಧ, ನಂದಿನಿ ಹಾಗೂ ಶಾಲೆಯ ವಿದ್ಯಾರ್ಥಿಗಳು ಇದ್ದರು.

ದೇಶ – ವಿದೇಶ

ಆಸ್ಟ್ರೇಲಿಯಾದಲ್ಲಿ ಕಾಡ್ಗಿಚ್ಚು: ಸಾವಿರಾರು ಹೆಕ್ಟೇರ್ ಪ್ರದೇಶ ಬೆಂಕಿಗೆ ಆಹುತಿ



ಸಿಡ್ನಿ: ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್‌ನಲ್ಲಿ ಭೀಕರ ಕಾಡ್ಗಿಚ್ಚು ಸಂಭವಿಸಿದ್ದು, ಸಾವಿರಾರು ಹೆಕ್ಟೇರ್ ಪ್ರದೇಶವನ್ನು ಬೆಂಕಿ ಆವರಿಸಿಕೊಂಡಿದೆ. ನ್ಯೂ ಸೌತ್ ವೇಲ್ಸ್‌ನಲ್ಲಿ ಹಬ್ಬಿರುವ ಈ ಕಾಡ್ಗಿಚ್ಚಿನಿಂದ ಸುತ್ತಮುತ್ತಲಿನಲ್ಲಿರುವ ಅತ್ಯಂತ ಜನನಿಬಿಡ ಪ್ರದೇಶದಲ್ಲಿ ವಾಸಿಸುತ್ತಿರುವವರಲ್ಲಿ ಆತಂಕ ಉಂಟಾಗಿದ್ದು, ಉನ್ನತ ಮಟ್ಟದ ಪ್ರದೇಶಕ್ಕೆ ಸ್ಥಳಾಂತರ ಎಚ್ಚರಿಕೆ ನೀಡಿದ್ದಾರೆ. ಸಿಡ್ನಿಯಿಂದ ಸುಮಾರು 45 ಕಿಲೋಮೀಟರ್ ಉತ್ತರಕ್ಕೆ ಇರುವ ಪ್ರದೇಶವಿದ್ದು, ನ್ಯೂ ವೇಲ್ಸ್‌ನಲ್ಲಿರುವ ಮಧ್ಯ ಕರಾವಳಿಯಲ್ಲಿ ಭಾಗದಲ್ಲಿನ ಫೆಗನ್ಸ್ ಬೇ ಮತ್ತು ವೋಂಯ್ ವೋಯ್ ಪ್ರದೇಶದಲ್ಲಿ ವಾಸಿಸುವ 350,000ಕ್ಕೂ ಹೆಚ್ಚು ಜನರಿಗೆ ಎಚ್ಚರಿಕೆ ನೀಡಲಾಗಿದೆ.

ಆಸ್ಟ್ರೇಲಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ ವರದಿಗಳ ಪ್ರಕಾರ ಈ ಕಾಡ್ಗಿಚ್ಚಿನಿಂದಾಗಿ ಸಾವಿರಾರು ಹೆಕ್ಟೇರ್ ಪ್ರದೇಶಕ್ಕೆ ಹಾನಿಯುಂಟಾಗಿದ್ದು, ಬೆಂಕಿಯ ಕೆನ್ನಾಲಿಗೆಯಿಂದಾಗಿ ಸುಮಾರು 16 ಮನೆಗಳು ನಾಶವಾಗಿವೆ. ಆದರೆ ಈವರೆಗೂ ಯಾವುದೇ ಪ್ರಾಣಹಾನಿ ಕುರಿತು ವರದಿಯಾಗಿಲ್ಲ.


ಅಮಾನತುಗೊಂಡ ಟಿಎಂಸಿ ಶಾಸಕನಿಂದ ಬಾಬ್ರಿ ಮಸೀದಿಗೆ ಶಂಕುಸ್ಥಾಪನೆ



ಮುರ್ಷಿದಾಬಾದ್: ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ರೆಜಿ ನಗರದಲ್ಲಿ, ಶನಿವಾರ ಬಿಗಿ ಭದ್ರತೆಯ ನಡುವೆ ಅಯೋಧ್ಯೆಯ ಬಾಬರಿ ಮಸೀದಿ ಮಾದರಿಯಲ್ಲಿ ಮಸೀದಿ ನಿರ್ಮಾಣಕ್ಕೆ ತೃಣಮೂಲ ಕಾಂಗ್ರೆಸ್ ಶಾಸಕ ಹುಮಾಯೂನ್ ಕಬೀರ್ ಅವರು ಶಂಕುಸ್ಥಾಪನೆ ನೆರವೇರಿಸಿದರು.

ಇಂದು ಬೆಳಗ್ಗೆಯಿಂದ ಸಾವಿರಾರು ಜನ ಸೇರಿದ್ದ ಸ್ಥಳದಲ್ಲಿ ನಾರಾ–ಎ–ತಕ್ಬೀರ್, ಅಲ್ಲಾಹು ಅಕ್ಬರ್ ಎಂಬ ಘೋಷಣೆಗಳು ಮೊಳಗುತ್ತಿದ್ದಂತೆ, ಕಬೀರ್ ಅವರು ವೇದಿಕೆಯ ಮೇಲೆ ಧರ್ಮಗುರುಗಳ ಜೊತೆಗೆ ವಿಧ್ಯುಕ್ತವಾಗಿ ರಿಬ್ಬನ್ ಕತ್ತರಿಸುವ ಮೂಲಕ ಬಾಬ್ರಿ ಮಸೀದಿಗೆ ಅಡಿಪಾಯ ಹಾಕಿದರು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ರೆಜಿನಗರ ಮತ್ತು ಪಕ್ಕದ ಬೆಲ್ಡಂಗಾ ಪ್ರದೇಶದಾದ್ಯಂತ ಪೊಲೀಸ್, ಆರ್‌ಎಎಫ್ ಮತ್ತು ಕೇಂದ್ರ ಪಡೆಗಳ ದೊಡ್ಡ ತುಕಡಿಯನ್ನು ನಿಯೋಜಿಸಲಾಗಿತ್ತು.

ಎದೆ ಮೇಲೆ ಬಿದ್ದ ಬಾರ್ಬೆಲ್; ಮ್ಯೂಸಿಯಂ ನಿರ್ದೇಶಕ ದುರಂತ ಸಾವು



ಒಲಿಂಡಾ: ಜಿಮ್‌ನಲ್ಲಿ ಬಾರ್ಬೆಲ್ ಬಾರ್ ಎದೆ ಮೇಲೆ ಬಿದ್ದು ಬ್ರೆಜಿಲ್ ಮ್ಯೂಸಿಯಂ ನಿರ್ದೇಶಕ ದುರಂತ ಸಾವಿಗೀಡಾದ ಘಟನೆ ವರದಿಯಾಗಿದೆ ಬ್ರೆಜಿಲ್‌ನ ಒಲಿಂಡಾದಲ್ಲಿ ಈ ಘಟನೆ ನಡೆದಿದ್ದು, ಜಿಮ್‌ನಲ್ಲಿ ತೂಕ ಎತ್ತುವಾಗ 55 ವರ್ಷದ ಬ್ರೆಜಿಲ್‌ನ ಮ್ಯೂಸಿಯಂ ನಿರ್ದೇಶಕ ರೊನಾಲ್ಡ್ ಮಾಂಟೆನೆಗ್ರೊ ಎದೆ ಮೇಲೆ ಬಾರ್ಬೆಲ್ ಬಾರ್ ಬಿದ್ದು ಸಾವನ್ನಪ್ಪಿದ್ದಾರೆ. ರೊನಾಲ್ಡ್ ಮಾಂಟೆನೆಗ್ರೊ ಹವ್ಯಾಸಿ ವೇಟ್‌ಲಿಫ್ಟರ್ ಕೂಡ ಆಗಿದ್ದು, ಬ್ರೆಜಿಲ್‌ನ ವಸ್ತುಸಂಗ್ರಹಾಲಯ ಅಧ್ಯಕ್ಷರಾಗಿದ್ದರು ಎಂದು ತಿಳಿದುಬಂದಿದೆ. ಬೆಂಚ್ ಪ್ರೆಸ್ ಬಾರ್ಬೆಲ್ ಎತ್ತುವಾಗ ಬಾರ್ ಜಾರಿ ರೊನಾಲ್ಡ್ ಮಾಂಟೆನೆಗ್ರೊ ಅವರ ಎದೆ ಮೇಲೆ ಬಿದ್ದಿದೆ. ಈ ವೇಳೆ ರೊನಾಲ್ಡ್ ಮಾಂಟೆನೆಗ್ರೊ ನೋವಿನಿಂದ ಕುಸಿದಿದ್ದಾರೆ. ಅದೇ ಸಂದರ್ಭದಲ್ಲಿ ಜಿಮ್‌ನಲ್ಲಿದ್ದ ಇತರರು ಅವರ ನೆರವಿಗೆ ಧಾವಿಸಿದ್ದು, ಅವರ ದೇಹದ ಮೇಲಿದ್ದ ಬಾರ್ ತೆಗೆದು ಪಕ್ಕಕ್ಕೆ ಸರಿಸಿದ್ದಾರೆ. ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ಎಎಪಿ ಶಾಸಕ ಗೋಪಾಲ್ ಇಟಾಲಿಯಾ ಮೇಲೆ ಶೂ ಎಸೆತ



ಜಾಮ್‌ನಗರ: ಗುಜರಾತ್‌ನ ಜಾಮ್‌ನಗರದಲ್ಲಿ ಆಮ್ ಆದ್ಮಿ ಪಕ್ಷದ ರ‍್ಯಾಲಿಯಲ್ಲಿ ಪಕ್ಷದ ನಾಯಕ ಗೋಪಾಲ್ ಇಟಾಲಿಯಾ ಅವರ ಮೇಲೆ ಶೂ ಎಸೆದ ಪ್ರಕರಣ ನಡೆದಿದೆ. ವಿಸಾವದರ್ ವಿಧಾನಸಭಾ ಕ್ಷೇತ್ರದ ಶಾಸಕರು ಪಕ್ಷದ ಗುಜರಾತ್ ಜೋಡೋ ಕಾರ್ಯಕ್ರಮದ ಸಂದರ್ಭದಲ್ಲಿ ಭಾಷಣ ಮಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಅವರ ಕಡೆಗೆ ಶೂ ಎಸೆದಿದ್ದಾರೆ.

ಘಟನೆಯ ವೀಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಆರೋಪಿಯನ್ನು ಎಎಪಿ ಬೆಂಬಲಿಗರು ಥಳಿಸಿದ ನಂತರ ಸ್ಥಳದಲ್ಲಿ ವಾತಾವರಣ ಪ್ರಕ್ಷುಬ್ಧವಾಯಿತು. ಪೊಲೀಸರು ಮಧ್ಯಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಆರೋಪಿಯನ್ನು ಕಾಂಗ್ರೆಸ್ ಕಾರ್ಯಕರ್ತ ಛತ್ರಪಾಲ್‌ಸಿನ್ಹ್ ಜಡೇಜಾ ಎಂದು ಗುರುತಿಸಲಾಗಿದ್ದು, ನಂತರ ಬಂಧಿಸಿ ಆತನನ್ನು ಚಿಕಿತ್ಸೆ ನೀಡಲು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಈ ಘಟನೆಗೆ ಸಂಬಂಧಿಸಿದಂತೆ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಎಕ್ಸ್ ಪೋಸ್ಟ್‌ನಲ್ಲಿ, ಎಎಪಿಯ ಹೆಚ್ಚುತ್ತಿರುವ ಜನಪ್ರಿಯತೆಯು ಬಿಜೆಪಿ ಮತ್ತು ಕಾಂಗ್ರೆಸ್ ಅನ್ನು ಚಿಂತೆಗೀಡುಮಾಡಿದೆ.

ಇಮ್ರಾನ್ ಖಾನ್ ಮಾನಸಿಕ ಅಸ್ವಸ್ಥ ಎಂದು ಘೋಷಿಸಿದ ಪಾಕ್ ಸೇನೆ



ಇಸ್ಲಾಮಾಬಾದ್: ಪಾಕಿಸ್ತಾನದ ಅಡಿಯಾಲಾ ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮಾನಸಿಕ ಅಸ್ವಸ್ಥ ಎಂದು ಪಾಕಿಸ್ತಾನ ಸೇನೆ ಘೋಷಿಸಿದೆ. ಪಾಕಿಸ್ತಾನ ಸೇನಾ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಷರೀಫ್ ಚೌಧರಿ, ಇಮ್ರಾನ್ ಖಾನ್ ಅವರು ಸೇನಾ ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಅಂತಹ ಹೇಳಿಕೆಗಳು ಈಗ ರಾಜಕೀಯದ ವ್ಯಾಪ್ತಿಯನ್ನು ಮೀರಿ ರಾಷ್ಟ್ರೀಯ ಭದ್ರತೆಗೆ ಬೆದರಿಕೆಯನ್ನು ಒಡ್ಡಿವೆ ಎಂದರು. ಈ ಬೆದರಿಕೆ ಭ್ರಮೆಯು ಮಾನಸಿಕ ಅಸ್ವಸ್ಥನ ಮನಸ್ಥಿತಿಯಿಂದ ಹುಟ್ಟಿಕೊಂಡಿದೆ. ಆತ ತನ್ನ ದುರಹಂಕಾರದಲ್ಲಿ ತನ್ನ ಆಸೆಗಳು ಪಾಕಿಸ್ತಾನದ ಆಸೆಗಳಿಗಿಂತ ದೊಡ್ಡದಾಗಿವೆ ಎಂದು ನಂಬುತ್ತಾನೆ. ಅವರ ಅಹಂ, ಆಸೆಗಳು ಮತ್ತು ಹತಾಶೆಗಳು ಎಷ್ಟು ಬೆಳೆದಿವೆ ಎಂದರೆ ಅವರಿಲ್ಲದೆ ಜಗತ್ತು ಅಸ್ತಿತ್ವದಲ್ಲಿಲ್ಲ ಎಂದು ಅವರು ನಂಬುತ್ತಾರೆ ಎಂದು ಅಹ್ಮದ್ ಷರೀಫ್ ಚೌಧರಿ ಹೇಳಿದರು. ಸೈನ್ಯದ ವಿರುದ್ಧ ಸಾರ್ವಜನಿಕರನ್ನು ಪ್ರಚೋದಿಸಲು ನಾವು ನಿಮಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದರು.

ಮೈಸೂರು ಮಿತ್ರ ಭಾನುವಾರ 7 ಡಿಸೆಂಬರ್ 2025

ಡಾ.ಬಿ.ಆರ್.ಅಂಬೇಡ್ಕರ್ ಅವರ ಮೌಲ್ಯ, ಜೀವನ ಸಾಧನೆಗಳ ಅಧ್ಯಯನ ನಡೆಯಬೇಕು

ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಭಿಮತ



ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು.

ಮಡಿಕೇರಿ, ಡಿ.6– ಡಾ.ಬಿ.ಆರ್.ಅಂಬೇಡ್ಕರ್ ಅವರ ಮೌಲ್ಯ ಜೀವನ ಸಾಧನೆಗಳನ್ನು ಅಧ್ಯಯನ ಮಾಡುವಂತಾಗಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ದೇಶ–ವಿದೇಶಗಳಲ್ಲಿ ಅಂಬೇಡ್ಕರ್ ಅವರ ಅಧ್ಯಯನ ಕೇಂದ್ರಗಳು ಹಾಗೂ ಸಂಶೋಧನಾ ಕೇಂದ್ರಗಳು ಇವೆ. ಇಡೀ ಪ್ರಪಂಚದಲ್ಲಿಯೇ ಅವರು ಅಜರಾಮರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಸ್ಮರಿಸಿದರು.

ಅಂಬೇಡ್ಕರ್ ಅವರ ಮೌಲ್ಯಗಳು ಹಾಗೂ ಮಾರ್ಗದರ್ಶನದಂತೆ ನಡೆದುಕೊಳ್ಳಬೇಕು. ಅವರು ಬರೆದಿರುವ ಸಂವಿಧಾನವನ್ನು ಸ್ಮರಿಸಿಕೊಂಡು ಅಭಿವೃದ್ಧಿಯತ್ತ ಚಿಂತನೆ ಮಾಡಬೇಕು. ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಿ ನಡೆದುಕೊಳ್ಳಬೇಕು ಎಂದರು.

ದಸಂಸ ಜಿಲ್ಲಾ ಸಂಚಾಲಕ ಹೆಚ್.ಎಲ್. ದಿವಾಕರ ಮಾತನಾಡಿ, ಸುಮಾರು ಆರು ದಶಕಗಳ ಹೋರಾಟದ ನಂತರ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣವಾಗುತ್ತಿರುವುದು ಶ್ಲಾಘನೀಯ ಎಂದರು.

ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಾಣ ಸಂಬಂಧ ಜಿಲ್ಲಾಧಿಕಾರಿ ಅವರು ನುಡಿದಂತೆ ನಡೆದಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು. ನಗರಸಭೆ ಸದಸ್ಯ ಎಸ್.ಸಿ.ಸತೀಶ್, ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕರಾದ ದೀಪಕ್ ಪೊನ್ನಪ್ಪ, ಪ್ರಮುಖರಾದ ಮೋಹನ್ ಮೌರ್ಯ, ಪ್ರೇಮ್ ಕುಮಾರ್, ರಮೇಶ್, ಸಿದ್ದೇಶ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಿಬ್ಬಂದಿ ಇದ್ದರು.

ಎಸ್‌ಸಿ ಮೋರ್ಚಾದಿಂದ ಮಹಾ ಪರಿನಿರ್ವಾಣ ದಿನ ಆಚರಣೆ



ಡಾ.ಅಂಬೇಡ್ಕರ್ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಮಹಾ ಪರಿನಿರ್ವಾಣ ದಿನ ಆಚರಣೆ.

ಮಡಿಕೇರಿ, ಡಿ.6– ಕೊಡಗು ಭಾರತೀಯ ಜನತಾ ಪಾರ್ಟಿ ಎಸ್‌ಸಿ ಮೋರ್ಚಾದಿಂದ ಭಾರತದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನವನ್ನು ಡಾ. ಬಿ.ಆರ್. ಅಂಬೇಡ್ಕರ್ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕೊಡಗು ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ. ರವಿ ಮಾತನಾಡಿ, ಡಿ.6 ರಂದು ಆಚರಿಸಲಾಗುವ ಮಹಾಪರಿನಿರ್ವಾಣ ದಿವಸ್, ಭಾರತೀಯ ಸಂವಿಧಾನದ ಪಿತಾಮಹ ಡಾ.ಬಿ.ಆರ್. ಅಂಬೇಡ್ಕರ್ ಪುಣ್ಯತಿಥಿಯನ್ನು ಸೂಚಿಸುತ್ತದೆ. ಡಾ.ಅಂಬೇಡ್ಕರ್ ಅವರು ಆಧುನಿಕ ಭಾರತವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಪ್ರಮುಖ ನಾಯಕರಾಗಿದ್ದರು. ಅವರು ನ್ಯಾಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಸಮಾಜ ಸುಧಾರಕ ಮತ್ತು ರಾಜಕಾರಣಿಯಾಗಿದ್ದರು. ಭಾರತೀಯ ಸಂವಿಧಾನವನ್ನು ರಚಿಸಿದ ಸಮಿತಿಯ ಅಧ್ಯಕ್ಷರಾಗಿ, ಡಾ. ಅಂಬೇಡ್ಕರ್ ಅವರು ಎಲ್ಲಾ ನಾಗರಿಕರಿಗೆ ನ್ಯಾಯ, ಸಮಾನತೆ ಮತ್ತು ಘನತೆಯನ್ನು ಖಚಿತಪಡಿಸಿಕೊಳ್ಳಲು ಅವಿಶ್ರಾಂತವಾಗಿ ಶ್ರಮಿಸಿದರು. ಸಂವಿಧಾನ ಸಭೆಗೆ ಅವರು ನೀಡಿದ ಕೊಡುಗೆಗಳು ಪ್ರಜಾಪ್ರಭುತ್ವ ಮತ್ತು ಎಲ್ಲರನ್ನೂ ಒಳಗೊಂಡ ಭಾರತಕ್ಕೆ ಅಡಿಪಾಯ ಹಾಕಿದವು ಎಂದರು.

ಕಾರ್ಯಕ್ರಮದ ಮೊದಲಿಗೆ ಎಸ್‌ಸಿ ಮೋರ್ಚಾ ಮಡಿಕೇರಿ ಗ್ರಾಮಾಂತರ ಮಂಡಲದ ಪ್ರಧಾನ ಕಾರ್ಯದರ್ಶಿ, ಈರ ಸುಬ್ಬಯ್ಯ ಸ್ವಾಗತಿಸಿದರೆ, ಮಡಿಕೇರಿ ನಗರ ಮಂಡಲದ ಕಾರ್ಯದರ್ಶಿ ಮಹೇಶ್ ವಂದಿಸಿದರು. ಕಾರ್ಯಕ್ರಮದಲ್ಲಿ ಎಸ್‌ಸಿ ಮೋರ್ಚಾ ಪದಾಧಿಕಾರಿಯಾದ ಸಂದೀಶ್, ಸದಸ್ಯರು, ವಿದ್ಯಾರ್ಥಿ ನಿಲಯದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಶಾಸಕ ಪೊನ್ನಣ್ಣರಿಂದ ಕಾಂಕ್ರೀಟ್ ರಸ್ತೆ ಉದ್ಘಾಟನೆ

ಗಾಂಧಿನಗರ ಕೀರ್ತಿ ಲೇಔಟ್ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆಗಳನ್ನು ಶಾಸಕ ಪೊನ್ನಣ್ಣ ಉದ್ಘಾಟಿಸಿದರು.



ವಿರಾಜಪೇಟೆ, ಡಿ.6– ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪಟ್ಟಣ ಹಾಗೂ ಇತರ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಕಾಮಗಾರಿಗಳನ್ನು ಅಧಿಕಾರಿಗಳು ತಡಮಾಡದೆ ಕೂಡಲೇ ನಡೆಸುವಂತೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಹೇಳಿದರು.

ಪುರಸಭೆ ವ್ಯಾಪ್ತಿಯ ಗಾಂಧಿನಗರದಲ್ಲಿ ರೂ.12 ಲಕ್ಷ ಅನುದಾನದಲ್ಲಿ ಸುಸಜ್ಜಿತ ಕಾಂಕ್ರೀಟ್ ರಸ್ತೆ ಕೀರ್ತಿ ಲೇಔಟ್ ಬಡಾವಣೆಯಲ್ಲಿ ರೂ.10 ಲಕ್ಷ ಅನುದಾನದಲ್ಲಿ ಕಾಂಕ್ರೀಟ್ ರಸ್ತೆಗಳನ್ನು ಉದ್ಘಾಟಿಸಿ, ವಿರಾಜಪೇಟೆ–ಮಡಿಕೇರಿ ರಸ್ತೆ ಬೆತ್ರಿ ಕುಡಿಯುವ ನೀರು ಪೈಪ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿರುವ ಕಾರಣ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಮತ್ತು ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಂದಿದ್ದು, ಕಾಮಗಾರಿಗಳು ಸದ್ಯದಲ್ಲಿ ನಡೆಯಲಿವೆ. ಈಗ ಪಟ್ಟಣದ ಮುಖ್ಯ ರಸ್ತೆ 5 ಕೋಟಿ 60 ಲಕ್ಷ ಅನುದಾನದಲ್ಲಿ ಕಾಮಗಾರಿ ಪ್ರಾರಂಭಿಸಲಿದ್ದು ರಸ್ತೆ ಅಗಲೀಕರಣ ಸಂದರ್ಭ ರಸ್ತೆ ಬದಿಯಲ್ಲಿರುವ ನಿವಾಸಿಗಳು ಸಾರ್ವಜನಿಕ ರಸ್ತೆಗೆ ಜಾಗ ಬಿಟ್ಟು ಕೊಡುವ ಮೂಲಕ ಸಹಕಾರ ನೀಡುವಂತಾಗಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ ಅಭಿಯಂತರ ಎನ್.ಪಿ. ಹೇಮ್ ಕುಮಾರ್, ಸಹಾಯಕ ಮುರುಳಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ನಗರ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಪುರಸಭೆ ಮಾಜಿ ಅಧ್ಯಕ್ಷೆ ದೇಚಮ್ಮ ಕಾಳಪ್ಪ, ಮಾಜಿ ಸದಸ್ಯರಾದ ಡಿ.ಪಿ.ರಾಜೇಶ್, ಎಸ್.ಹೆಚ್. ಮತೀನ್, ಮಹ್ಮದ್ ರಾಫಿ, ಅತೀಕ್ ಮುನ್ನ, ಬ್ಲಾಕ್ ಯುವ ಕಾಂಗ್ರೆಸ್ ಶಭೀರ್, ಮುಂಡಂಡ ವಿ.ಕಿಶೋರ್, ಎ.ವಿ.ಮಂಜುನಾಥ್, ಜೋಕಿಂ ರಾಡ್ರಿಗಾಸ್ ಹಾಜರಿದ್ದರು.

ಡಾ. ಶ್ರೀನಿವಾಸ್, ಶೋಭ, ಸ್ಥಳೀಯ ನಿವಾಸಿಗಳು ಇದ್ದರು, ಕೀರ್ತಿ ಲೇಔಟ್ ಬಡಾವಣೆಯಲ್ಲಿ ವಿರಾಜಪೇಟೆ ಕೊಡವ ಸಮಾಜದ ಅಧ್ಯಕ್ಷ ರಾದ ರವಿ ಉತ್ತಪ್ಪ, ಉಪಾಧ್ಯಕ್ಷರಾದ ಕಾಂತರಾಜ ಜಗದೀಶ್, ಸ್ಥಳೀಯ ನಿವಾಸಿಗಳಾದ ವಿಟ್ಟು ಕಾವೇರಪ್ಪ, ಸಾಬು ಪೂವಯ್ಯ, ಪುಗ್ಗೇರ ಎಸ್.ನಂದ, ಸಿ.ಎನ್.ಗಂಗಾಧರ, ಪಿ.ಜಿ. ಸುಮೇಶ್, ಗುತ್ತಿಗೆದಾರ ಸ್ವಾಮಿ ಮತ್ತು ನವಿನ್, ಪಕ್ಷದ ಮುಖಂಡರು ಮತ್ತಿತರರು ಉಪಸ್ಥಿತರಿದ್ದರು.

ಸಿಎನ್‌ಸಿಯಿಂದ ಕೊಡವ ಯೋಧರಿಗೆ ಗೌರವ ಸಮರ್ಪಣೆ




ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಲಕ್ಕಿಕೋಟೆ ಕೊಡವ ಯುದ್ಧ ಸ್ಮಾರಕದಲ್ಲಿ ಕೊಡವ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು.

ಮಡಿಕೇರಿ,ಡಿ.6– ಕೊಡವ ನ್ಯಾಷನಲ್ ಕೌನ್ಸಿಲ್ ವತಿಯಿಂದ ನಡೆದ 32ನೇ ವರ್ಷದ ಪುತ್ತರಿ ನಮ್ಮೆ ಹಿನ್ನೆಲೆ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಲಕ್ಕಿಕೋಟೆ ಕೊಡವ ಯುದ್ಧ ಸ್ಮಾರಕದಲ್ಲಿ ಕೊಡವ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು.

ವೀರ ಮರಣವನ್ನಪ್ಪಿದ ಕೊಡವರಿಗೆ ಗೌರವ ಸಲ್ಲಿಸಿ ಮಾತನಾಡಿದ ಎನ್.ಯು. ನಾಚಪ್ಪ, 1790–92 ಮತ್ತು 1799ರ ನಡುವೆ ಕ್ರಮವಾಗಿ ಜನರಲ್ ಲಾರ್ಡ್ ಕಾರ್ನ್‌ವಾಲೀಸ್ ಹಾಗೂ ಜನರಲ್ ಲಾರ್ಡ್ ವೆಲ್ಲೆಸ್ಲಿ ನೇತೃತ್ವದಲ್ಲಿ ನಡೆದ 3ನೇ ಮತ್ತು 4ನೇ ಆಂಗ್ಲೋ–ಮೈಸೂರು ಯುದ್ಧಗಳಲ್ಲಿ ಕೊಡವರು ತೋರಿದ ಶೌರ್ಯವನ್ನು ಸ್ಮರಿಸಿದರು. ಡಿ.ವೀರ ರಾಜರ ಮಾರ್ಗದರ್ಶನದಲ್ಲಿ ಕೊಡವ ಸೈನ್ಯವು ಮೈಸೂರು ಸುಲ್ತಾನರ ವಿರುದ್ಧ ಪ್ರಬಲರೊಂದಿಗೆ ಸಮುದಾಯದ ಮಿಲಿಟರಿ ಮೈತ್ರಿಯನ್ನು ಮಾಡಿಕೊಂಡು ನಡೆಸಿದ ಯುದ್ಧದಲ್ಲಿ ಟಿಪ್ಪು ಸುಲ್ತಾನನಿಗೆ ಸೋಲಾಯಿತು. ಕೊಡವ ಯೋಧರ ವೀರಾವೇಶದಿಂದಲೇ ಮೈಸೂರು ಸುಲ್ತಾನರಿಗೆ 31 ಬಾರಿ ಸೋಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಲಿಯಂಡ ಮೀನಾ ಪ್ರಕಾಶ್, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಕಾಂಡೇರ ಸುರೇಶ್, ಬೇಪಡಿಯಂಡ ದಿನು, ಅರೆಯಡ ಗಿರೀಶ್, ನಂದೇಟಿರ ರವಿ ಸುಬ್ಬಯ್ಯ, ಬೊಟ್ಟಂಗಡ ಗಿರೀಶ್, ಚಂಬಂಡ ಜನತ್, ಕಿರಿಯಮಾಡ ಶೆರಿನ್, ಪಾರ್ವಂಗಡ ನವೀನ್, ಕಿರಿಯಮಾಡ ಶಾನ್, ಮದ್ರಿರ ಕರುಂಬಯ್ಯ, ಅಪ್ಪೆಯಂಗಡ ಮಾಲೆ ಪೂಣಚ್ಚ ಹಾಗೂ ಚೊಕ್ಕಂಡ ಕಟ್ಟಿ ಪಾಲ್ಗೊಂಡಿದ್ದರು.

ಪಾಳು ಬಿಟ್ಟಿದ್ದ ಕಾಫಿ ತೋಟದಿಂದ ಹಾರಿದ ಗುಂಡು; ಇಬ್ಬರು ಪಾದಚಾರಿಗಳಿಗೆ ಗಾಯ



ಮಡಿಕೇರಿ,ಡಿ.6– ಪಾಳು ಬಿಟ್ಟಿದ್ದ ಕಾಫಿ ತೋಟದ ಒಳಗಿನಿಂದ ಸಿಡಿದ ಗುಂಡೇಟಿಗೆ ಇಬ್ಬರು ಪಾದಚಾರಿಗಳು ಗಾಯಗೊಂಡ ಘಟನೆ ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಅತ್ತಿಮಂಗಲದಲ್ಲಿ ನಡೆದಿದೆ. ಅತ್ತಿಮಂಗಲ ಸಮೀಪದ ಸಂಪಿಗೆ ಕೊಲ್ಲಿಯ ಲೈನ್ ಮನೆಯ ನಿವಾಸಿ ಸತೀಶ್ ಮತ್ತು ಗುಡ್ಡೆ ಹೊಸೂರು ನಿವಾಸಿ ಮಿಥುನ್ ಎಂಬುವರು ಗಾಯಗೊಂಡವರಾಗಿದ್ದಾರೆ.

ಶುಕ್ರವಾರ ಸತೀಶ್ ಮತ್ತು ಮಿಥುನ್ ಅವರು ಸಿದ್ದಾಪುರ–ಮರಗೋಡು ರಸ್ತೆಯಲ್ಲಿ ತೆರಳುತ್ತಿದ್ದ ಸಂದರ್ಭ ಅತ್ತಿಮಂಗಲದ ಸಮೀಪವಿರುವ ಪಾಳು ಬಿಟ್ಟಿದ್ದ ಕಾಫಿ ತೋಟದ ಒಳಗಿನಿಂದ ಏಕಾಏಕಿ ಗುಂಡು ಸಿಡಿದಿದೆ. ಈ ವೇಳೆ ಇದೇ ರಸ್ತೆಯಲ್ಲಿ ತೆರಳುತ್ತಿದ್ದ ಮಿಥುನ್ ಮತ್ತು ಸತೀಶ್ ಅವರುಗಳಿಗೆ ಗುಂಡಿನ ಚೂರುಗಳು ತಗುಲಿದ್ದು, ಮಿಥುನ್ ಅವರ ಬೆನ್ನಿನ ಭಾಗಕ್ಕೆ ಒಟ್ಟು 6 ಚೂರುಗಳು ತಗುಲಿ ಸ್ಥಳದಲ್ಲೇ ಕುಸಿದು ಬಿದಿದ್ದಾರೆ. ಸತೀಶ್ ಅವರ ಭುಜಕ್ಕೆ 2 ಚೂರುಗಳು ಹೊಕ್ಕಿವೆ.

ಅವರನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದ್ದು, ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಡು ಪ್ರಾಣಿಗೆ ಹಾರಿಸಿದ ಗುಂಡು ಗುರಿ ತಪ್ಪಿ ಪಾದಚಾರಿಗಳಿಗೆ ತಗುಲಿರುವ ಸಾಧ್ಯತೆ ಇರುವ ಶಂಕೆ ವ್ಯಕ್ತವಾಗಿದೆ.

ಎರಡು ಕಾರುಗಳ ಮುಖಾಮುಖಿ ಡಿಕ್ಕಿ; ಕಾರಿನಲ್ಲಿದ್ದವರು ಪಾರು



ಮಡಿಕೇರಿ,ಡಿ.6– ಎರಡು ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾದ ಘಟನೆ ಪೊನ್ನಂಪೇಟೆ–ಬಾಳಲೆ ಮುಖ್ಯ ರಸ್ತೆಯ ಮತ್ತೂರು ಗ್ರಾಮದಲ್ಲಿ ಶನಿವಾರ ಸಂಜೆ ನಡೆದಿದೆ.

ಬಾಳಲೆಯಿಂದ ಪೊನ್ನಂಪೇಟೆ ಕಡೆಗೆ ಬರುತ್ತಿದ್ದ ಬಾಳಲೆ ಗ್ರಾಮದ ಮುದ್ದಿಯಡ ಪ್ರಭು ಕರುಂಬಯ್ಯರಿಗೆ ಸೇರಿದ ಬ್ರೆಜ಼ ಕಾರು ಹಾಗೂ ಪೊನ್ನಂಪೇಟೆಯಿಂದ ಬಾಳಲೆ ಕಡೆಗೆ ಹೋಗುತ್ತಿದ್ದ ಪಂದಿಯಂಡ ಸರಿ ಅಪ್ಪಯ್ಯರಿಗೆ ಸೇರಿದ ಮಾರುತಿ ಸುಜುಕಿ ಸ್ವಿಫ್ಟ್ ಕಾರುಗಳ ನಡುವೆ ಮತ್ತೂರು ಗ್ರಾಮದ ಮುಖ್ಯ ರಸ್ತೆಯಲ್ಲಿ ಶನಿವಾರ ಸಂಜೆ ಅಪಘಾತ ಸಂಭವಿಸಿದೆ.

ಅದೃಷ್ಟವಶಾತ್ ಎರಡು ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪೊನ್ನಂಪೇಟೆ ಪೊಲೀಸ್ ಠಾಣಾಧಿಕಾರಿ ನವೀನ್ ಸೂಚನೆ ಮೇರೆಗೆ ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಅನುಪಮ ಹಾಗೂ ಬಾಳಪ್ಪ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಅಪಘಾತದಲ್ಲಿ ಎರಡೂ ಕಾರುಗಳಿಗೆ ಹಾನಿ ಸಂಭವಿಸಿದೆ.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಆಚರಣೆ



ಚಾಮರಾಜನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಆಚರಿಸಲಾಯಿತು.

ಚಾಮರಾಜನಗರ: ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿ ನಿರ್ವಾಣ ದಿನ ಆಚರಿಸಲಾಯಿತು.

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅಂಬೇಡ್ಕರ್ ಅವರು ಇಡೀ ಜಗತ್ತು ಮೆಚ್ಚುವ ಸಂವಿಧಾನವನ್ನು ರಚಿಸಿದ್ದಾರೆ. ಈ ಮೂಲಕ ಭಾರತ ದೇಶದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ಹೀಗಾಗಿ ನಾವೆಲ್ಲರೂ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಅಂಬೇಡ್ಕರ್ ವ್ಯಕ್ತಿ ಅಲ್ಲ ಅವರೊಬ್ಬ ಮಹಾನ್ ಶಕ್ತಿಯಾಗಿದ್ದಾರೆ. ದಲಿತರು, ಮಹಿಳೆಯರು ಹಾಗೂ ಕಾರ್ಮಿಕರ ಪರ ಹೋರಾಟ ನಡೆಸಿದ್ದಾರೆ. ಅಂಬೇಡ್ಕರ್ ಅವರ ವಿಚಾರಧಾರೆ, ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ನಗರಸಭಾ ನಾಮನಿರ್ದೇಶನ ಸದಸ್ಯ ಸ್ವಾಮಿ, ಜಿಪಂ ಮಾಜಿ ಅಧ್ಯಕ್ಷೆ ಕಾವೇರಿ ಶಿವಕುಮಾರ್, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಸೋಮೇಶ್ವರ್, ಸದಸ್ಯರಾದ ಕುಮಾರ್ ಮರಿಯಾಲದಹುಂಡಿ, ರಾಜು ಅಮಚವಾಡಿ, ಕುಮಾರ ಸ್ವಾಮಿ, ಮಲ್ಲಿಕಾರ್ಜುನ್, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಸದಸ್ಯ ಕಲಾವತಿ, ಗ್ರಾಮಾಂತರ ಬ್ಲಾಕ್ ಅಧ್ಯಕ್ಷೆ ಶಕುಂತಲಾ ಇನ್ನಿತರರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಜಿಲ್ಲಾಡಳಿತದಿಂದ ಗೌರವ ಸಲ್ಲಿಕೆ



ಜಿಲ್ಲಾಡಳಿತದಿಂದ ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಿಸಲಾಯಿತು.

ಚಾಮರಾಜನಗರ, ಡಿ.6– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಭಾರತರತ್ನ, ಸಂವಿಧಾನ ಶಿಲ್ಪಿ ಹಾಗೂ ಮಹಾ ಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ರವರ 69ನೇ ಪರಿನಿರ್ವಾಣ ದಿನವನ್ನು ನಗರದಲ್ಲಿ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿತ್ತು.

ಮೊದಲಿಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಇನ್ನಿತರ ಗಣ್ಯರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಬಳಿಕ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕರು, ಜಿಲ್ಲಾಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು, ಗಣ್ಯರು ಡಾ. ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರದ ಮುಂದೆ ಮೊಂಬತ್ತಿ ಬೆಳಗಿಸಿ ಪುಷ್ಪನಮನದೊಂದಿಗೆ ಬುದ್ಧ ವಂದನೆ ಸಲ್ಲಿಸಲಾಯಿತು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ತಹಶೀಲ್ದಾರ್ ಗಿರಿಜಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸರ್ವರಿಗೂ ಸಮಾನತೆ ಕಲ್ಪಿಸಿದವರು ಡಾ.ಅಂಬೇಡ್ಕರ್: ಡಾ.ರೇಣುಕಾದೇವಿ



ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಕಾರ್ಯಕ್ರಮವನ್ನು ಡಾ.ರೇಣುಕಾದೇವಿ ಉದ್ಘಾಟಿಸಿದರು.

ಚಾಮರಾಜನಗರ, ಡಿ.6– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಮಾನತೆ ಕಲ್ಪಿಸಿಕೊಟ್ಟಿದ್ದಾರೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ರೇಣುಕಾದೇವಿ ಹೇಳಿದರು.

ನಗರದ ನ್ಯಾಯಾಲಯದ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಚೇರಿಯಲ್ಲಿ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಬಾಲ್ಯದಲ್ಲಿ ತಾವು ಅನುಭವಿಸಿದ ನೋವು, ಯಾತನೆಗಳನ್ನು ಮುಂದಿನ ಪೀಳಿಗೆ ಅನುಭವಿಸಬಾರದು ಎಂದು ನಿರಂತರವಾಗಿ ಅಧ್ಯಯನ ಮಾಡಿ ಅಸ್ಪೃಶ್ಯತೆ, ಅಸಮಾನತೆ, ತಾರತಮ್ಯದ ವಿರುದ್ಧ ಹೋರಾಡಿ ಪ್ರತಿಯೊಬ್ಬರಿಗೆ ನ್ಯಾಯ ಮಂಡನೆ ಮಾಡಿದರು. ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಘದ ಜಿಲ್ಲಾ ಖಜಾಂಚಿ ಶಿವಕುಮಾರಯ್ಯ, ಕಾರ್ಯಾಧ್ಯಕ್ಷ ಮಹದೇವಸ್ವಾಮಿ, ಗೌರವ ಅಧ್ಯಕ್ಷ ಮಹದೇವಯ್ಯ, ಹಿರಿಯ ಉಪಾಧ್ಯಕ್ಷ ಎಂ.ಡಿ. ಮಹದೇವಯ್ಯ, ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಸಿ.ಕೆ.ರಾಮಸ್ವಾಮಿ ಮಾತನಾಡಿದರು. ಸಂಘ ಪದಾಧಿಕಾರಿಗಳಾದ ನಂಜುಂಡ, ಮಹೇಂದ್ರ, ನಾರಾಯಣ, ಸೋಮಶೇಖರ್. ರವಿ, ವೇಲು ಕುಮಾರ್, ರಾಹುಲ್, ಸಿ.ಎಂ.ಮರುಗೇಶ್ ಕುಮಾರ್, ಎನ್.ಜಿ.ರಾಜು, ಶಿವಮೂರ್ತಿ, ಸಿ.ಕೆ.ವಾಸು. ಪುಟ್ಟಸ್ವಾಮಿ, ನಂಜುಂಡ ಸ್ವಾಮಿ, ಸುಬ್ರಹ್ಮಣ್ಯ ಹಾಜರಿದ್ದರು.

ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಲು ನೋಂದಣಿ ಕೇಂದ್ರ ಕಾರ್ಯಾರಂಭ

ಚಾಮರಾಜನಗರ, ಡಿ.6– ಕರ್ನಾಟಕ ಹಾಲು ಮಹಾಮಂಡಳಿಯು (ಕೆಎಂಎಫ್) ರೈತರಿಂದ ನೇರವಾಗಿ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಮೂಲಕ ಮೆಕ್ಕೆಜೋಳ ಖರೀದಿಸುತ್ತಿದ್ದು, ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ (ಚಾಮುಲ್) ಸಹಕಾರ ಸಂಘಗಳ ಮೂಲಕವೂ ಖರೀದಿ ಕೇಂದ್ರ ತೆರೆಯಲಾಗಿದೆ.

ಚಾಮರಾಜನಗರದ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ನಿಯಮಿತವು ಕೆಎಂಎಫ್ ಒಡೆತನದ ಪಶು ಆಹಾರ ಘಟಕಗಳಿಗೆ ಪಶು ಆಹಾರ ಉತ್ಪಾದನೆಗೆ ಅವಶ್ಯವಿರುವ ಮೆಕ್ಕೆಜೋಳವನ್ನು ರಾಜ್ಯ ಸರ್ಕಾರ ನಿಗದಿಪಡಿಸಿದ ಬೆಲೆ ಪ್ರತಿ ಕ್ವಿಂಟಾಲ್‌ಗೆ 2,400 ರೂ.ಗಳಂತೆ (ಮೂಲ ಬೆಲೆ, ಎರಡು ಗೋಣಿಚೀಲದ ಮೊತ್ತ ಮತ್ತು ಸಾಗಾಣಿಕೆ ಮೊತ್ತ ಸೇರಿದಂತೆ) ಗುಣಮಟ್ಟ ನಿಬಂಧನೆಗೊಳಪಟ್ಟು ರೈತರಿಂದ ನೇರವಾಗಿ ಖರೀದಿಸಲು ತೀರ್ಮಾನವಾಗಿರುತ್ತದೆ. ಮೆಕ್ಕೆಜೋಳ ಮಾರಾಟ ಮಾಡಲು ಆಸಕ್ತ ರೈತರು ಚಾಮರಾಜನಗರದ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ ತಾಲೂಕು ಉಪ ಕಚೇರಿಗಳನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಚಾಮುಲ್ ಮೊ.ಸಂ.6366824213, ಚಾಮರಾಜನಗರ ಮತ್ತು ಯಳಂದೂರು ಮೊ.ಸಂ. 9945828993, ಗುಂಡ್ಲುಪೇಟೆ ಮೊ.ಸಂ. 9606098335, ಹನೂರು ಮೊ.ಸಂ. 9740576484, ಕೊಳ್ಳೇಗಾಲ ಮೊ.ಸಂ. 6366824224 ಸಂಪರ್ಕಿಸುವಂತೆ ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ರಾಜ್‌ಕುಮಾರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಬಿಳಿಗಿರಿರಂಗನಬೆಟ್ಟದಲ್ಲಿ ಗ್ರಾಮ ಸಭೆಯಲ್ಲಿ ಅಕ್ರಮ ಮದ್ಯ ಮಾರಾಟದ ವಿರುದ್ಧ ಧ್ವನಿ



ಬಿಳಿಗಿರಿರಂಗನಬೆಟ್ಟದ ಗ್ರಾಪಂನಲ್ಲಿ ಶುಕ್ರವಾರ ನಡೆದ ಗ್ರಾಮಸಭೆಯಲ್ಲಿ ಪಿಡಿಒ ಶಶಿಕಲಾ ಮಾತನಾಡಿದರು. ಅಧ್ಯಕ್ಷ ಸಿ.ಡಿ. ಮಾದೇವ ಸೇರಿದಂತೆ ಇತರರು ಇದ್ದರು.

ಯಳಂದೂರು, ಡಿ.6(ವಿ.ನಾಗರಾಜು) – ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ಇಲ್ಲಿನ ಸೋಲಿಗರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು ಇದಕ್ಕೆ ಕಡಿವಾಣ ಹಾಕಬೇಕು ಎಂದು ಇಲ್ಲಿನ ನಾಗರಿಕರು ಒತ್ತಾಯಿಸಿದರು.

ಶುಕ್ರವಾರ ಬೆಟ್ಟದಲ್ಲಿ ನಡೆದ ಗ್ರಾಮಸಭೆಯಲ್ಲಿ ಕೆಲ ಸೋಲಿಗ ಮುಖಂಡರು ಈ ಬಗ್ಗೆ ಪಿಡಿಒಗೆ ದೂರು ನೀಡಿದರು. ಬೆಟ್ಟದಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿದೆ. ಅರಣ್ಯ ಇಲಾಖೆಯ ಚೆಕ್ ಪೋಸ್ಟ್ ಇದ್ದರೂ ಕೂಡ ಮದ್ಯವನ್ನು ತರಲಾಗುತ್ತಿದೆ. ಅಕ್ರಮ ಮದ್ಯ ತರುವವರ ಹಾಗೂ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮವಹಿಸಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪಿಡಿಒ ಶಶಿಕಲಾ ಈ ಬಗ್ಗೆ ಸಂಬಂಧಪಟ್ಟ ಇಲಾಖೆ ಗಮನಕ್ಕೆ ಈ ವಿಷಯ ತರಲಾಗುವುದು ಎಂದರು.

ಜಲ ಜೀವನ್ ಯೋಜನೆಯಡಿ ಶುದ್ಧ ಕುಡಿಯುವ ನೀರು ತರುವ ಯೋಜನೆಗೆ ಅರಣ್ಯ ಇಲಾಖೆ ತಡೆಯೊಡ್ಡುತ್ತಿದೆ. ಇದರಿಂದ ಕುಡಿಯುವ ನೀರು ಪೂರೈಕೆಯ ಕಾಮಗಾರಿ ಅರ್ಧಕ್ಕೆ ನಿಂತಿದೆ. ಪೋಡುಗಳಲ್ಲಿ ಪೈಪ್ ಲೈನ್ ಕಾಮಗಾರಿಗೆ ತೋಡಿರುವ ಹಳ್ಳ ಮುಚ್ಚದೇ ಹಾಗೆ ಬಿಟ್ಟಿರುವುದರಿಂದ ಹಲವರು ಬಿದ್ದು ಗಾಯಗೊಂಡಿರುವ ಘಟನೆಯೂ ನಡೆದಿದೆ. ಈ ಕಾಮಗಾರಿಯನ್ನು ಪೂರ್ಣವಾಗಿ ಮುಗಿಸುವಂತೆ ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ನರೇಗಾ ಕಾಮಗಾರಿಗೆ ಕ್ರಿಯಾಯೋಜನೆಯನ್ನು ಒಂದು ಕೋಟಿ ರೂ.ಗೆ ಮಾಡಿದರೂ ಸಹ ಇಲ್ಲಿ ಕಾಮಗಾರಿ ಕೇವಲ ಕೆಲವೇ ಲಕ್ಷ ರೂ.ಗಳ ಕೆಲಸ ನಡೆಯುತ್ತಿದೆ. ಈ ಬಗ್ಗೆ ಜಾಬ್ ಕಾರ್ಡ್ ಹೊಂದಿರುವರಿಗೆ ಕೆಲಸ ನೀಡಬೇಕು ಎಂದು ಮುಖಂಡ ವೆಂಕಟೇಶ್ ಸಲಹೆ ನೀಡಿದರು.

ಗ್ರಾಪಂ ಅಧ್ಯಕ್ಷ ಸಿ.ಡಿ.ಮಾದೇವ, ಉಪಾಧ್ಯಕ್ಷೆ ಸಾಕಮ್ಮ ಸದಸ್ಯರಾದ ರಂಗಮ್ಮ, ಕಮಲಮ್ಮ, ಪ್ರದೀಪ್‌ಕುಮಾರ್, ಮಾದಮ್ಮ, ಬಿ.ಎನ್.ಬಸವಣ್ಣ ಅರಣ್ಯ ಇಲಾಖೆಯ ನಾಗರಾಜು ಬೊಮ್ಮಯ್ಯ ಕಾರ್ಯದರ್ಶಿ ನಟರಾಜು ನಾಗೇಂದ್ರ ಚಂದು ಇತರರಿದ್ದರು.


ಗುಂಡ್ಲುಪೇಟೆ ಪುರಸಭೆಯಲ್ಲಿ ಡಾ.ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ



ಗುಂಡ್ಲುಪೇಟೆ ಪುರಸಭೆ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನ ಆಚರಿಸಲಾಯಿತು. ಪುರಸಭೆ ಮುಖ್ಯ ಅಧಿಕಾರಿ ಎಸ್.ಸರವಣ ಅವರು ಸಿಬ್ಬಂದಿಗಳೊಂದಿಗೆ ಮೇಣದಬತ್ತಿ ಹಚ್ಚುವ ಮೂಲಕ ಮೌನಾಚರಣೆ ಮಾಡಿದರು.

ಅಂಬಳೆ ಚಾಮುಂಡೇಶ್ವರಿ ದೇಗುಲದಲ್ಲಿ ಕಳವು

ಯಳಂದೂರು, ಡಿ.6(ವಿ.ನಾಗರಾಜು)– ತಾಲೂಕಿನ ಅಂಬಳೆ ಗ್ರಾಮದ ಸುವರ್ಣಾವತಿ ನದಿ ದಡದಲ್ಲಿರುವ ಐತಿಹಾಸಿಕ ಚಾಮುಂಡೇಶ್ವರಿ ದೇಗುಲದಲ್ಲಿ ಗುರುವಾರ ರಾತ್ರಿ ಕಳ್ಳತನ ನಡೆದಿದ್ದು, ಲಕ್ಷಾಂತರ ರೂ. ಹಣ ಹಾಗೂ ಚಿನ್ನದ ಒಡವೆಗಳು ಹಾಗೂ ಸಿಸಿ ಕ್ಯಾಮಾರವನ್ನೇ ಕಳ್ಳರು ಕದ್ದೊಯ್ದಿರುವ ಘಟನೆ ನಡೆದಿದೆ.



ದೇಗುಲದ ಬಾಗಿಲನ್ನು ಒಡೆದಿರುವ ಕಳ್ಳರು, ಎರಡು ಹುಂಡಿಗಳನ್ನು ದೇಗುಲದ ಹೊರ ಭಾಗಕ್ಕೆ ತಂದು ಕಬ್ಬಿಣದ ರಾಡ್‌ಗಳಿಂದ ಒಡೆದು ಅದರಲ್ಲಿದ್ದ ಹಣವನ್ನು ದೋಚಿ ಹುಂಡಿಗಳನ್ನು ಇಲ್ಲೇ ಬೀಸಾಡಿದ್ದಾರೆ. ಅಲ್ಲದೆ, ದೇವಸ್ಥಾನದ ಉತ್ಸವಮೂರ್ತಿಯಲ್ಲಿದ್ದ ಚಿನ್ನದ ತಾಳಿ, ಬೊಟ್ಟುಗಳನ್ನು ಸಹ ಕಳ್ಳತನ ಮಾಡಲಾಗಿದೆ. ಇದರೊಂದಿಗೆ ಚಾಲಾಕಿ ಕಳ್ಳರು ಸಿಸಿ ಕ್ಯಾಮಾರಾ, ಡಿವಿಆರ್ ಅನ್ನು ಸಹ ಹೊತ್ತೊಯ್ದಿದ್ದಾರೆ.

ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರ ತಂಡ ಭೇಟಿ ನೀಡಿದ್ದು ಪರಿಶೀಲನೆ ನಡೆಸಿದ್ದು ಮುಂದಿನ ಕ್ರಮ ವಹಿಸಲಾಗಿದೆ.

ಚಾ.ನಗರದಲ್ಲಿ ಗೃಹರಕ್ಷಕ ದಳ ದಿನ ಆಚರಣೆ

ಚಾಮರಾಜನಗರ: ಗೃಹರಕ್ಷಕ ದಳವು ಕಾನೂನು ಮತ್ತು ಶಿಸ್ತು ಪಾಲನೆಯಲ್ಲಿ ಪೊಲೀಸ್ ಇಲಾಖೆಗೆ ಪೂರಕವಾಗಿ ಕೆಲಸ ಮಾಡುವ ಮೂಲಕ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಕೊಳ್ಳೇಗಾಲ ವಿಭಾಗದ ಡಿವೈಎಸ್‌ಪಿ ಧರ್ಮೇಂದ್ರ ಅವರು ಹೇಳಿದರು.

ನಗರದ ಪೊಲೀಸ್ ಭವನದಲ್ಲಿಂದು ಗೃಹರಕ್ಷಕ ದಳದ ವತಿಯಿಂದ ಆಯೋಜಿಸಲಾಗಿದ್ದ ಅಖಿಲ ಭಾರತ ಗೃಹ ರಕ್ಷಕದಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಆಂತರಿಕ ಪರಿಸ್ಥಿತಿಯನ್ನು ನಿಭಾಯಿಸಲು ಗೃಹರಕ್ಷಕ ದಳವು ಸ್ವಯಂಸೇವಕರಾಗಿ ಶ್ರಮಿಸುತ್ತಿದೆ. ಪ್ರಾಮಾಣಿಕವಾಗಿ ಧೃಡಸಂಕಲ್ಪ ನಿಲುವನ್ನು ಹೊಂದುವ ಮೂಲಕ ಪೊಲೀಸ್ ಇಲಾಖೆಯೊಂದಿಗೆ ಕರ್ತವ್ಯ ನಿರ್ವಹಿಸುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗೃಹ ರಕ್ಷಕ ದಳದ ಜಿಲ್ಲಾ ಸಮದೇಷ್ಟರಾದ ಜಿ.ಎಸ್.ಮಹಾಲಿಂಗಸ್ವಾಮಿ ಅವರು ಜಿಲ್ಲೆಯಲ್ಲಿ 700 ಗೃಹರಕ್ಷಕ ಸಿಬ್ಬಂದಿಯಿದ್ದು, ಪೊಲೀಸ್ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳೊಂದಿಗೆ ಶಿಸ್ತಿನಿಂದ ಕೆಲಸ ನಿರ್ವಹಿಸುತ್ತಿದೆ ಎಂದರು. ಗೃಹರಕ್ಷಕ ದಳದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಗುಂಡ್ಲುಪೇಟೆ ವಿಭಾಗದ ಪಿ.ಶಂಕರ್, ವೈ.ಟಿ. ಕೃಷ್ಣೇಗೌಡ, ಸಿದ್ದರಾಜು, ಯಳಂದೂರು ವಿಭಾಗದ ಆರ್. ಕೃಷ್ಣಮೂರ್ತಿ, ಚಾಮರಾಜನಗರ ವಿಭಾಗದ ಕೆ.ಪ್ರಭು ಅವರನ್ನು ಸನ್ಮಾನಿಸಲಾಯಿತು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ



ಲೇಖಕರಿಗೆ ಸಂಕಟ... ಪ್ರಕಾಶಕರಿಗೆ ಪ್ರಾಣಸಂಕಟ!

ಒಬ್ಬ ಲೇಖಕ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿ ಓದುಗರ ಕೈಗಿಡುವ ಹೊತ್ತಿಗೆ ಪ್ರಸವ ವೇದನೆಯನ್ನು ಅನುಭವಿಸಿರುತ್ತಾನೆ. ಇಲ್ಲಿ ಸಿಸೇರಿಯನ್‌ಗೆ ಅವಕಾಶವಿಲ್ಲ. ನೋವಾಗುವುದೆಂದು ಬರೆಯದೆ ಇರಲೂ ಆಗದು. ಬರವಣಿಗೆಯನ್ನೇ ನಂಬಿ ಬದುಕು ಕಟ್ಟಿಕೊಂಡವರು ಬೆರಳೆಣಿಕೆಯಷ್ಟು ಲೇಖಕರನ್ನು ಹೊರತುಪಡಿಸಿದರೆ ಇಲ್ಲವೇ ಇಲ್ಲ ಎನ್ನಬಹುದು. ಕನ್ನಡ ಈಗಾಗಲೇ ಅನ್ಯ ಭಾಷೆಗಳ ಆಕ್ರಮಣದಿಂದ ಕುಲಷಿತಗೊಂಡಿದೆ, ಮತ್ತಷ್ಟು ಆಗುವುದನ್ನು ತಡೆಯುವುದಕ್ಕಾದರೂ ಕ್ರಮವಹಿಸಬೇಕಲ್ಲವೇ?.





ಮಿರ್ಲೆ ಚಂದ್ರಶೇಖರ್
ಮೊಬೈಲ್ ಸಂಖ್ಯೆ 99161 29654

ಕಥೆ, ಕವನ, ಲೇಖನಗಳನ್ನು ಬರೆಯುವವರು ಓದುಗರ ಸಂಖ್ಯೆಗಿಂತ ಹೆಚ್ಚು ಇದ್ದಾರೆ ಎನ್ನಬಹುದು. ಕಾರಣ ಓದುವ ಅಭಿರುಚಿ ಜನಸಾಮಾನ್ಯರಲ್ಲಿ ಇಲ್ಲವಾಗಿದೆ. ಏನಿದ್ದರೂ ನೋಡುವುದು ಇಲ್ಲವೇ ಕೇಳುವುದಾಗಿದೆ. ನವಂಬರ್ ತಿಂಗಳು ಪೂರಾ ಕನ್ನಡ ರಾಜ್ಯೋತ್ಸವದ ಗುಂಗಿನಲ್ಲಿ ಕಳೆದಿದ್ದೇವೆ. ಎಂದಿನಂತೆ ಈ ತಿಂಗಳಿನಿಂದ ಕನ್ನಡ ನಮ್ಮದಲ್ಲ ಎಂಬ ಸ್ಥಿತಿಗೆ ಬಂದು ಮುಂದಿನ ನವಂಬರ್‌ವರೆಗೂ ದೀರ್ಘ ರಜೆ ಪಡೆದಿದ್ದೇವೆ, ರಜೆಯಿಂದ ಹೊರಗೆ ಬಂದು ವರ್ಷಪೂರ ನವೆಂಬರ್ ಗಾಳಿ ಬೀಸುವಂತಾಗಲಿ. ಕನ್ನಡವನ್ನು ಉಳಿಸಿಬೆಳೆಸುವುದರಲ್ಲಿ ಎಚ್ಚೆತ್ತು ಎಲ್ಲರೂ ಕೈಜೋಡಿಸಿದಾಗ ಮಾತ್ರ ಸಾಧ್ಯ. ಕನ್ನಡವನ್ನು ಓದುವ, ಬರೆಯುವ, ಮಾತನಾಡಿದಾಗ ಹಾಗೂ ಅನ್ಯ ಭಾಷೆಗಳ ಆಕ್ರಮಣವಾಗದಂತೆ ಹೊಸಹೊಸ ಪದಗಳನ್ನು ಹುಟ್ಟುಹಾಕಿದಾಗ ಪುರಾತನ ಇತಿಹಾಸ ಇರುವ ನಮ್ಮ ಭಾಷೆ ಜೀವಂತ ಇರುತ್ತದೆ. ಈಗಾಗಲೇ ಅನ್ಯಭಾಷೆಗಳ ಪದಗಳು ಒಳಹೊಕ್ಕಿ ಭಾಷೆ ಕುಲಷಿತಗೊಂಡಿದೆ.

ಏನೇ ಬೆಳೆಯಬೇಕಾದರೂ ಅದರಿಂದ ಬೆಳೆಸುವವನಿಗೆ ಲಾಭ ಇದ್ದಾಗ ಅದರಲ್ಲಿ ಹೆಚ್ಚು ತೊಡಗಿಸಿಕೊಳ್ಳಲಿಕ್ಕೆ ಆಗುವುದು. ಕನ್ನಡ ಭಾಷೆಯ ವಿಷಯಕ್ಕೆ ಬಂದರೆ ಕನ್ನಡ ಮಾಧ್ಯಮದಲ್ಲಿ, ಸರ್ಕಾರಿ ಶಾಲೆಯಲ್ಲಿ ಓದಿದವನಿಗೆ ಮಾನ್ಯತೆ ಅಥವಾ ಪೂರ್ಣ ಪ್ರಮಾಣದಲ್ಲಿ ಮೀಸಲಾತಿ ಇಲ್ಲವಾದ್ದರಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳಿಲ್ಲದೆ ಖಾಲಿ ಹೊಡೆಯುತ್ತಿವೆ ಹಾಗೂ ಮುಚ್ಚುವ ಸ್ಥಿತಿಯಲ್ಲಿವೆ. ಇಲ್ಲಿ ಇನ್ನೊಂದು ಮುಖ್ಯ ವಿಷಯವೊಂದನ್ನು ಹಂಚಿಕೊಳ್ಳಲೇಬೇಕು, ಹಳ್ಳಿಗಳಲ್ಲೂ ಇಂಗ್ಲೀಷ್ ಕಾನ್ವೆಂಟ್‌ಗಳು ತಲೆ ಎತ್ತಿವೆ. ಹೋಬಳಿ ಮಟ್ಟದ ಊರುಗಳಲ್ಲಿ ಎರಡುಮೂರು ಕಾನ್ವೆಂಟ್‌ಗಳಿವೆ. ಇದರಿಂದ ಕನ್ನಡ ಶಾಲೆಯಲ್ಲಿ ಓದುವ ಮಕ್ಕಳು ಇಲ್ಲವಾಗಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದ ಹಳ್ಳಿಯ ಮಕ್ಕಳೂ ಸಹ ಇಂಗ್ಲೀಷ್ ಕಾನ್ವೆಂಟ್‌ಗಳಲ್ಲಿ ಓದುತ್ತಿರುವುದರಿಂದ ಇಂಗ್ಲೀಷ್ ಭಾಷೆಯು ಅವರುಗಳ ಬಾಯಿಗಳಲ್ಲಿ ಸುಲಲಿತವಾಗಿ ಹರಿದಾಡುತ್ತಿದೆ, ಅಲ್ಲಿಗೆ ಕನ್ನಡವನ್ನು ಬಳಸುವುದು ಕಡಿಮೆ ಆದಂತೆ ಆಯಿತು, ಅನ್ಯ ಭಾಷೆಯ ಆಕ್ರಮಣ ನಗರಗಳಿಂದ ಹಳ್ಳಿಗಳಿಗೂ ವಿಸ್ತರಿಸಿತು, ಹೀಗಾದರೆ ಮಾತೃಭಾಷೆಯನ್ನು ಉಳಿಸಿ ಬೆಳೆಸುವವರು ಯಾರು?. ಈ ಬದಲಾವಣೆಗೆ ಮುಖ್ಯ ಕಾರಣ ಶಿಕ್ಷಣ ಕ್ಷೇತ್ರವು ಲಾಭ ತರುವ ಉದ್ಯಮವಾಗಿದ್ದು ಹಾಗೂ ಇಂಗ್ಲೀಷ್‌ನ ವ್ಯಾಮೋಹ.

ಇಂಥಹ ಕೆಟ್ಟ ಪರಿಸ್ಥಿತಿಯಲ್ಲಿ ಭಾಷೆಯ ಬೆಳವಣಿಗೆ ಹಾಗೂ ಅಭಿವೃದ್ಧಿಯ ಕಾರ್ಯದಲ್ಲಿ ಸಾಹಿತ್ಯ ಕ್ಷೇತ್ರದ ಪಾತ್ರ ಪ್ರಮುಖವಾಗಿದೆ. ಸರ್ಕಾರದಿಂದ ಸಿಗಬೇಕಾಗಿರುವ ಸೌಲಭ್ಯಗಳ ಕೊರತೆಯ ಕಾರಣ ಸಾಹಿತಿಗಳು, ಲೇಖಕರು, ಪ್ರಕಾಶಕರು ಮತ್ತು ಮುದ್ರಕರ ಸ್ಥಿತಿಯು ತೀರಾ ಹದಗೆಟ್ಟಿರುವ ಹಂತದಲ್ಲಿದೆ, ಲೇಖಕರು ಸಾಹಿತ್ಯವನ್ನು ಬಿಡಲೂ ಆಗದೆ, ಕಟ್ಟಿಕೊಳ್ಳಲೂ ಆಗದೆ ಅತಂತ್ರ ಸ್ಥಿತಿಯಲ್ಲಿದ್ದಾರೆ.

ಒಬ್ಬ ಲೇಖಕ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿ ಓದುಗರ ಕೈಗಿಡುವ ಹೊತ್ತಿಗೆ ಪ್ರಸವ ವೇದನೆಯನ್ನು ಅನುಭವಿಸಿರುತ್ತಾನೆ, ಇಲ್ಲಿ ಸಿಸೇರಿಯನ್‌ಗೆ ಅವಕಾಶವಿಲ್ಲ, ನೋವಾಗುವುದೆಂದು ಬರೆಯದೆ ಇರಲೂ ಆಗದು. ಬರವಣಿಗೆಯನ್ನೇ ನಂಬಿ ಬದುಕು ಕಟ್ಟಿಕೊಂಡವರು ಬೆರಳೆಣಿಕೆಯಷ್ಟು ಲೇಖಕರನ್ನು ಹೊರತುಪಡಿಸಿದರೆ ಇಲ್ಲವೇ ಇಲ್ಲ ಎನ್ನಬಹುದು, ಬರವಣಿಗೆಯ ಜೊತಜೊತೆಯಲ್ಲಿ ಪ್ರಚಾರಕ್ಕಾಗಿ ಗಿಮಿಕ್ ಮಾಡಿಕೊಂಡಿರುವ ಕೆಲವು ಮಂದಿ ಬರಹಗಾರರು ಹಣ ಮಾಡುತ್ತಿರಬಹುದು, ತೃಪ್ತಿಯಾಗಿರುವ ಇವರು ಉಳಿದವರ ಬಗ್ಗೆ ಚಿಂತಿಸುವುದಿಲ್ಲ ಹಾಗೂ ಪುಸ್ತಕೋದ್ಯಮದ ಸಮಸ್ಯೆಗಳ ಪರಿಹಾರಕ್ಕೆ ತಲೆಹಾಕುವುದಿಲ್ಲ. ಲೇಖಕರು ತಮ್ಮ ಬದುಕು ಕಟ್ಟಿಕೊಳ್ಳುವುದಿರಲಿ ತನ್ನ ಬರವಣಿಗೆಯನ್ನು ಆಸಕ್ತಿಯಿಂದ ಬರೆಯುವುದಕ್ಕಾದರೂ ಪ್ರೋತ್ಸಾಹ ಬೇಕಲ್ಲವೇ?.

ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆಮೂಲೆಗಳಿಗೆ ತೆಗೆದುಕೊಂಡು ಹೋಗಲು, ಕನ್ನಡ ಪುಸ್ತಕ ಪ್ರಕಟಣೆ, ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಭಾಷೆಗಾಗಿ ಶ್ರಮಿಸಲು 1915ರಲ್ಲಿ ಶ್ರೀ ಹೆಚ್.ವಿ.ನಂಜುಂಡಯ್ಯನವರನ್ನು ಅಧ್ಯಕ್ಷರನ್ನಾಗಿ ನೇಮಿಸಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಗೆ ಚಾಲನೆ ನೀಡಿದರು. ಸಾಹಿತ್ಯ ಪರಿಷತ್ತು ಪ್ರತೀ ವರ್ಷ ಸರ್ಕಾರದಿಂದ ಸಾಕಷ್ಟು ಅನುದಾನ ಪಡೆದು ಸಮ್ಮೇಳನವನ್ನು ರಾಜಕೀಯಗೊಳಿಸಿ ನಡೆಸುವ ಕೆಲಸದಲ್ಲಿ ತೊಡಗಿಸಿಕೊಂಡಿದೆಯಾದರೂ ಲೇಖಕರು ಹಾಗೂ ಪ್ರಕಾಶಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದು ಬೇಸರದ ಸಂಗತಿ.

ಹಣ ಮಾಡುವುದೊಂದು ಕಲೆ, ಆ ಕಲೆ ಸಾಹಿತ್ಯ ಕ್ಷೇತ್ರದಲ್ಲಿ ಉಪಯೋಗಕ್ಕೆ ಬರುತ್ತಿಲ್ಲ. ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂಬುದೊಂದು ದಂಡವಾಗಿದೆ ಎಂದರೆ ತಪ್ಪಿಲ್ಲ. ಮಂಡ್ಯದಲ್ಲಿ ನಡೆದ 89ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 30.00 ಕೋಟಿ ಖರ್ಚು ಮಾಡಿ ನಡೆಸಲಾಯಿತು, ಅಲ್ಲಿ ತಿಂದುಂಡಿದ್ದೇ ಲಾಭವಾಯಿತು, ಸಮ್ಮೇಳನದ ಉಪಯೋಗ ಯಾರಿಗಾಯಿತು?. ಒಂದು ಸಮ್ಮೇಳನವನ್ನು ನಡೆಸುವ ಹೊತ್ತಿಗೆ ನೂರೆಂಟು ಗೋಜಲುಗಳು.

ಹಣ ಮಾಡುವುದೊಂದು ಕಲೆ, ಆ ಕಲೆ ಸಾಹಿತ್ಯ ಕ್ಷೇತ್ರದಲ್ಲಿ ಉಪಯೋಗಕ್ಕೆ ಬರುತ್ತಿಲ್ಲ, ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂಬುದೊಂದು ದಂಡವಾಗಿದೆ ಎಂದರೆ ತಪ್ಪಿಲ್ಲ. ಮಂಡ್ಯದಲ್ಲಿ ನಡೆದ 89ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 30.00 ಕೋಟಿ ಖರ್ಚು ಮಾಡಿ ನಡೆಸಲಾಯಿತು, ಅಲ್ಲಿ ತಿಂದುಂಡಿದ್ದೇ ಲಾಭವಾಯಿತು, ಸಮ್ಮೇಳನದ ಉಪಯೋಗ ಯಾರಿಗಾಯಿತು?. ಒಂದು ಸಮ್ಮೇಳನವನ್ನು ನಡೆಸುವ ಹೊತ್ತಿಗೆ ನೂರೆಂಟು ಗೋಜಲುಗಳು.

ಇತ್ತ ಮೈಸೂರಿನಲ್ಲಿ ಲೇಖಕರು ಮತ್ತು ಪ್ರಕಾಶಕರು ಒಕ್ಕೂಟವನ್ನು ಮಾಡಿಕೊಂಡು ಅನುದಾನ ನೀಡಿ, ಗ್ರಂಥಾಲಯಕ್ಕೆ ಪುಸ್ತಕಗಳನ್ನು ತೆಗೆದುಕೊಳ್ಳಿ, ಸಮಯಕ್ಕೆ ಸರಿಯಾಗಿ ಹಣ ಕೊಡಿ ಎಂದು ಸರ್ಕಾರದ ಬಾಗಿಲು ತಟ್ಟುತ್ತಿದ್ದರೂ ಭರವಸೆ ಮಾತ್ರ ಸಿಗುತ್ತಿದೆಯೇ ಹೊರತು ಪ್ರಯೋಜನಕ್ಕೆ ಬರುತ್ತಿಲ್ಲ.

ಸಮಸ್ಯೆ ಬಿಡಿಸಲಾರದ ಕಗ್ಗಂಟೇನಲ್ಲ, ಜನನಾಯಕರಿಗೆ ಇಚ್ಛಾಶಕ್ತಿ ಇಲ್ಲದಿದ್ದರೆ ಅನ್ನದಾತರ ಸಮಸ್ಯೆಗಳ ಹಾಗೆ ಇದೂ ಕೂಡ ಎಂದಿಗೂ ಬಗೆಹರಿಯಲಾರದು. ಲೇಖಕರಿಗೆ ಸಂಕಟ, ಪ್ರಕಾಶಕರಿಗೆ ಪ್ರಾಣಸಂಕಟ.

ಉದಯೋನ್ಮುಖ ಬರಹಗಾರರು ಒಂದು ಪುಸ್ತಕವನ್ನೂ ಪ್ರಕಟಿಸಲು ಆಗದಂತಾಗಿದೆ. ಇನ್ನು ಹಿರಿಯ ಬರಹಗಾರರ ಪರಿಸ್ಥಿತಿಯು ಅದಕ್ಕಿಂತ ಭಿನ್ನವೇನಲ್ಲ. ಲೇಖಕರು ಪ್ರಕಾಶಕರ ಬಳಿಗೆ ಕೈಬರಹದ ಪ್ರತಿ ಹಿಡಿದು ಪುಸ್ತಕವನ್ನು ಮಾಡಿಕೊಡುವಂತೆ ಕೇಳಿದರೆ ಲೇಖಕರಿಗೆ ಇಪ್ಪತ್ತೈದು/ಐವತ್ತು ಪ್ರತಿಗಳನ್ನು ಕೊಡುವುದಾಗಿ ಹೇಳುತ್ತಾರೆ, ಕೆಲವರು ನೂರು ಪ್ರತಿಗಳನ್ನು ಕೊಡುವುದುಂಟು. ಮಾರಾಟದಿಂದ ಬರುವ ರಾಯಲ್ಟಿ ಎಂಬುದನ್ನು ಯಾರು ತೆಗೆದುಕೊಳ್ಳುತ್ತಿದ್ದಾರೋ ಭಗವಂತನಿಗೇ ಗೊತ್ತು. ನನ್ನದೇ ಸ್ವಂತ ಅನುಭವ ನನಗೆ ನೂರು ಪ್ರತಿಗಳನ್ನು ಗೌರವಪೂರ್ವಕವಾಗಿ ನೀಡಿದರು. ಹೆಚ್ಚುವರಿ ಪ್ರತಿಗಳಿಗೆ ವಿಧಿ ಇಲ್ಲದೆ ಮುದ್ರಣ ಖರ್ಚನ್ನು ಕೊಟ್ಟು ತೆಗೆದುಕೊಳ್ಳಬೇಕಾಯಿತು.


ಇಲ್ಲಿ ಪ್ರಕಾಶಕರದ್ದು ತಪ್ಪೆಂದು ನಾನು ಹೇಳಲಾರೆ. ಅವರಿಗೆ ಮುದ್ರಿಸುವ ಖರ್ಚಾದರೂ ಸಿಗಬೇಕಲ್ಲ. ಅವರು ಪ್ರಕಟಿಸುವ ಸಾವಿರ ಪ್ರತಿಗಳಲ್ಲಿ ಮೂನ್ನೂರು ಪುಸ್ತಕಗಳನ್ನು ಇಲಾಖೆಯು ಸಕಾಲಕ್ಕೆ ಹಣ ಕೊಟ್ಟು ಕೊಂಡು, ಉಳಿದವು ಮಾರುಕಟ್ಟೆಯಲ್ಲಿ ಮಾರಾಟವಾದರೆ ಲೇಖಕರಿಗೂ ಸೂಕ್ತ ಸಂಭಾವನೆ ಹಾಗೂ ಗೌರವ ಕೊಡುತ್ತಿದ್ದರು. ಲೇಖಕರ ಪರಿಸ್ಥಿತಿ ಹೇಗಿದೆಯೆಂದರೆ 'ಊರೆಲ್ಲಾ ನೆಂಟರು ಉಣ್ಣಾಕಿಕ್ಕೋರೊಬ್ಬರಿಲ್ಲ' ಎಂಬಂತಾಗಿದೆ.

ಲೇಖಕರು ಮತ್ತು ಪ್ರಕಾಶಕರು ಪ್ರತೀ ವರ್ಷ ಸರ್ಕಾರವನ್ನು ಕೇಳುವ ಕೇವಲ 30.00 ಕೋಟಿಯಷ್ಟು ಹಣವನ್ನು, ಕೊಡುತ್ತಿಲ್ಲವೇಕೆ?, ನಾಲ್ಕು ಲಕ್ಷ ಕೋಟಿ ಬಜೆಟ್‌ನಲ್ಲಿ ಕೇಳುತ್ತಿರುವುದು ಪುಡಿಗಾಸು!. ಯಾವುದೇ ಸರ್ಕಾರಗಳಿದ್ದರೂ ಇದೊಂದು ನಿರ್ಲಕ್ಷ್ಯಕ್ಕೆ ಒಳಗಾದ ಕ್ಷೇತ್ರವಾಗಿಬಿಟ್ಟಿದೆ. ಉಪಯೋಗಕ್ಕೆ ಬಾರದ ದುಂದು ವೆಚ್ಚದ ಸಾಹಿತ್ಯ ಸಮ್ಮೇಳನಕ್ಕೆ ಹಣ ಕೊಡುವ ಬದಲು ಪುಸ್ತಕ ಕೊಳ್ಳುವುದಕ್ಕಾದರೂ ಹಣ ನೀಡಿದರೆ ಲೇಖಕರು, ಪ್ರಕಾಶಕರು ಮತ್ತು ಮುದ್ರಕರು ನಿರುಮ್ಮಳವಾಗಿ ಉಸಿರಾಡಿ, ಸರ್ಕಾರಕ್ಕೆ ಕೃತಜ್ಞರಾಗಿ ಕನ್ನಡ ಸಾಹಿತ್ಯವನ್ನು ನಾಡಿನ ಮೂಲೆಮೂಲೆಗಳಿಗೆ ತೆಗೆದುಕೊಂಡು ಹೋಗಲು, ಕನ್ನಡ ಪುಸ್ತಕ ಪ್ರಕಟಣೆ, ಕನ್ನಡ ನಾಡು-ನುಡಿಯ ಸಂರಕ್ಷಣೆ ಮತ್ತು ಭಾಷೆಗಾಗಿ ಶ್ರಮಿಸಲು ಖುಷಿಯಿಂದ ತೊಡಗಿಸಿ ಕೊಳ್ಳುತ್ತಿದ್ದರು. ಸರ್ಕಾರ ಕೃಪೆ ಮಾಡಿದರೆ 'ಆಲ್ಮೊಂಡ್ ತಿನ್ನುತ್ತಿದ್ದೋನಿಗೆ ಹರಿ ರಾಗಿ ಕೊಟ್ಟಂಗಾಯ್ತದೆ' ಹೌದಲ್ಲವೇ ಸಾಹಿತ್ಯಾಸಕ್ತರೆ?.


ಬೆಳೀಬೇಕು.. ಬೆಳೀಬೇಕು ನಮ್ಮ ಕನ್ನಡ ಅಂಥ ಬರೆ ಮಾತ್ನಲ್ಲಿ ಹೇಳಿದ್ರೆ ಆಯ್ತುದಾ?, ಬೆಳೆಯಲಿಕ್ಕೆ ಶಕ್ತಿ ಬೇಕಲ್ವೇ? ಮತ್ತೆ ಹೊಟ್ಟೆ ತುಂಬಾ ಉಣ್ಣಾಕಿಕ್ಕಿ!.

ಮಕ್ಕಳ ಚಿತ್ರಕಥೆ: 'ನಾಲ್ವರು ಸ್ನೇಹಿತರು'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಅದೊಂದು ದಟ್ಟವಾದ ಕಾಡು, ಅಲ್ಲಿ ಮೂವರು ಸ್ನೇಹಿತರಿದ್ದರು. ಅವರೇ ಆಮೆ,ಇಲಿ ಮತ್ತು ಕಾಗೆ.




ಆ ಕಾಡಲ್ಲಿ ಸರೋವರವೊಂದಿತ್ತು. ಅದರಲ್ಲಿ ಆಮೆಯೂ ವಾಸವಿತ್ತು



ಸರೋವರದ ಬಳಿ ಮರವೊಂದಿತ್ತು. ಆ ಮರದಲ್ಲಿ ಕಾಗೆಯು ಗೂಡು ಕಟ್ಟಿಕೊಂಡು ವಾಸವಾಗಿತ್ತು



ಅಲ್ಲಿಯೇ ಸಮೀಪದಲ್ಲಿ ಇಲಿಯೂ ಬಿಲವನ್ನು ಮಾಡಿಕೊಂಡು ವಾಸವಾಗಿತ್ತು.



ಈ ಮೂವರೂ ಆಗಾಗ ಪರಸ್ಪರ ಭೇಟಿಯಾಗುತ್ತಿದ್ದರು. ನೋವು-ನಲಿವುಗಳನ್ನು ಹಂಚಿಕೊಳ್ಳುತ್ತಿದ್ದರು. ಇವರಲ್ಲಿ ಆತ್ಮೀಯವಾದ ಸಂಬಂಧ ಬೆಳೆದಿತ್ತು.



ಒಂದು ದಿನ ಆಮೆ,ಇಲಿ ಮತ್ತು ಕಾಗೆ ಸರೋವರದಲ್ಲಿ ಹರಟೆ ಹೊಡೆಯುತ್ತಿದ್ದವು. ಆಗ ಜಿಂಕೆಯೊಂದು ಓಡುತ್ತಾ ಇವುಗಳ ಬಳಿ ಬಂತು. (ಮುಂದುವರೆಯುವುದು)

ವಾರಭವಿಷ್ಯ

07.12.2025 ರಿಂದ 13.12.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಶ್ಚಿಕ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ವೃಶ್ಚಿಕ, ಬುಧ-ವೃಶ್ಚಿಕ, ಗುರು-ಮಿಥುನ, ಶುಕ್ರ-ವೃಶ್ಚಿಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ನಿಮ್ಮ ಚಿಂತನೆಗಳು ನೀವು ಏನನ್ನು ಮಾಡಲು ಬಯಸುತ್ತೀರೋ ಅದಕ್ಕೆ ಪೂರಕವಾಗಿಲ್ಲ. ಈ ವಾರ ನಿಮ್ಮ ಬಜೆಟ್ ನಿಮ್ಮ ಆದಾಯವನ್ನು ಮೀರುವ ಸಾಧ್ಯತೆ ಇದೆ. ಉದ್ಯೋಗಾರ್ಥಿಗಳಿಗೆ ಸಂದರ್ಶನ ಪತ್ರ ಬರುವ ಸಾಧ್ಯತೆ ಇದ್ದು, ನಿಮ್ಮ ರೆಸ್ಯೂಮ್ ಅಪ್‌ಡೇಟ್ ಮಾಡಿಕೊಳ್ಳಿ. ನೆರೆಹೊರೆಯಲ್ಲಿ ಸ್ನೇಹಮಯವಾಗಿರಲು ಪ್ರಯತ್ನಿಸಿ. ಆತುರದ ವಾಹನ ಚಲನೆ ಆತಂಕಕ್ಕೆ ಕಾರಣವಾಗುವುದು.
ಶ್ರೀ ಸ್ಕಂದ ಪ್ರಾರ್ಥನೆ, ಶುಭ ಸಂಖ್ಯೆ-7

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದಾರಂಭಕ್ಕೆ ನಿಮ್ಮ ಪ್ರೀತಿ ಪಾತ್ರರ ಭೇಟಿಯಿಂದ ಹರ್ಷಿತರಾಗುವಿರಿ. ನಿಮ್ಮ ಬುದ್ಧಿವಂತಿಕೆಯಿಂದ ನಿರ್ವಹಿಸಿ, ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗುವಿರಿ. ಆಸ್ತಿ ವಿಲೇವಾರಿ ಕಾರಣ ಕಾನೂನು ಸಲಹೆಯನ್ನು ಪಡೆಯಲು ವಕೀಲರ ಭೇಟಿ ಮಾಡಬೇಕಾದೀತು. ನಿಮ್ಮ ಬಾಳ ಸಂಗಾತಿಯ ಜೊತೆಗಿನ ಭಾವನಾತ್ಮಕ ಬಂಧ ಗಟ್ಟಿಗೊಳ್ಳಲಿದೆ. ನಿಮ್ಮ ಉದಾರ ಬುದ್ಧಿಯಿಂದ ಸಾಮಾಜದ ಮೆಚ್ಚುಗೆಗೆ ಪಾತ್ರರಾಗುವಿರಿ.
ಶ್ರೀ ದೇವೀ ಆರಾಧನೆ. ಶುಭ ಸಂಖ್ಯೆ-4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಸಪ್ತಾಹದ ಆದಿಗೆ ನಿಮ್ಮ ರಾಶಿಗೆ ಪ್ರವೇಶಿಸುವ ಚಂದ್ರ, ಮೈ-ಮನಗಳಲ್ಲಿ ನವ ಹುರುಪನ್ನು ನೀಡಲಿದ್ದಾನೆ. ಧನ-ಧಾನ್ಯ-ಲಾಭ, ಉತ್ತಮ ಜನರ ಸಂಗ, ಸುಭೋಜನ, ಶ್ರೀಮತಿಯಲ್ಲಿ ಅನುರಾಗ. ಅಧಿಕಾರಿ ವರ್ಗದವರಿಗೆ ಬಡ್ತಿ ದೊರೆಯುವ ಸಂಭವ. ಶೇರು ಮ್ಯೂಚುಯಲ್ ಫಂಡ್ ದಂಧೆಯಿಂದ ಕೈ ಸುಟ್ಟುಕೊಳ್ಳುವಿರಿ. ಯಾವುದೇ ಮುಖ್ಯ ದಸ್ತಾವೇಜುಗಳಿಗೆ ಸಹಿ ಮಾಡುವ ಮುನ್ನ ಎರಡು ಬಾರಿ ಯೋಚಿಸಿ.
ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ-1

ಕಟಕ (ಹೊ,ಹು,ಹೆ,ಡ,ಡಿ,ಡು)
ವಾರದ ಆದಿಗೆ ಪರೋಪಕಾರ ಕಾರ್ಯಗಳಲ್ಲಿ ಆಸಕ್ತಿ ತೋರುವಿರಿ. ಸಜ್ಜನರ ಸಹವಾಸದಲ್ಲಿ ಬೆರೆಯುವುದರಿಂದ ಆಪತ್ತುಗಳಿಂದ ಪಾರಾಗುವಿರಿ. ಸರ್ಕಾರಿ ಕೆಲಸ ಕಾರ್ಯಗಳು ನೀವಂದುಕೊಂಡಂತೆ ಸಾಗದು. ವಾರ ಮಧ್ಯೆ ನಿಮ್ಮ ರಾಶ್ಯಾಧಿಪತಿ ಚಂದ್ರನಿಂದ ಧನಲಾಭ, ಶರೀರ ಸೌಖ್ಯ. ಹೊಸ ಸಂದರ್ಶನಗಳಿಗೆ ಕರೆ ಬರಬಹುದು. ಸಟ್ಟಾ, ಜೂಜುಗಳು ಧನ ನಷ್ಟಕ್ಕೆ ಹೇತುವಾಗುವುದು.
ಶ್ರೀ ಶಿವ ಪಂಚಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಗುರು ಬಲ ಮರುಕಳಿಸಿದೆ. ಇಷ್ಟ ಕಾರ್ಯಸಿದ್ಧಿಯೊಂದಿಗೆ ಧನ ಪ್ರಾಪ್ತಿಯೂ ಉಂಟು. ಹಲವರು ಸುವರ್ಣ ವಸ್ತು ಖರೀದಿಸುವರು. ಐಹಿಕ ಸುಖಭೋಗಗಳನ್ನು ಅನುಭವಿಸುವಿರಿ. ಧನುರ್ಮಾಸಕ್ಕೆ ಮುಂಚೆ ವಿವಾಹಯೋಗ್ಯರಿಗೆ ವಧು-ವರ ಪ್ರಾಪ್ತಿ ಯೋಗವಿದೆ. ಕೃಷಿಕರಿಗೆ ಬೆಳೆ ಹಾಗೂ ಬೆಲೆಯಲ್ಲಿ ನಿರಾಶೆ ಉಂಟಾಗುವುದು. ದೂರ ಪ್ರಯಾಣಗಳನ್ನು ತಳ್ಳಿ ಹಾಕಲಾಗದು. ದೇಹವೂ ಬಳಲುವುದು.
ಶ್ರೀ ಕಾಲಭೈರವಾಷ್ಟಕ ಪಠಿಸಿ. ಶುಭ ಸಂಖ್ಯೆ-4

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಹಣಕಾಸಿನ ಪರಿಸ್ಥಿತಿ ಯಥಾಸ್ಥಿತಿ ಮುಂದುವರೆದರೂ ನಿಮ್ಮ ಆಸೆ ಆಕಾಂಕ್ಷೆಗಳು ಈಡೇರುತ್ತದೆ. ಮಕ್ಕಳ ನಡವಳಿಕೆಗಳು ನಿಮ್ಮನ್ನು ಸಂದಿಗ್ಧ ಪರಿಸ್ಥಿತಿಯಲ್ಲಿ ನಿಲ್ಲಿಸಬಹುದು. ಈ ವಾರ ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ. ಹತ್ತಿರದ ಬಂಧುಗಳ ಜೊತೆ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ಕೃಷಿಕರಿಗೆ ನಿರೀಕ್ಷಿತ ಬೆಳೆ ಬರದೆ ನಿರಾಶೆ ಎದುರಾಗುವುದು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಅನಿರೀಕ್ಷಿತ ಲಾಭದ ಮೂಲಗಳು ಹೆಚ್ಚಾಗುವ ಸಂಭವವಿದೆ. ಕುಟುಂಬ ಸದಸ್ಯರಲ್ಲಿ ಒಮ್ಮತದಿಂದ ಆಸ್ತಿ ವಿಭಾಗಗಳು ಜರುಗುವುದು. ಸ್ವಲ್ಪ ಸಮಯ ಮನೆ ಮಂದಿಯೊಂದಿಗೆ ವಾತ್ಸಲ್ಯಮಯವಾಗಿ ನಡೆದುಕೊಳ್ಳಿ. ಮನೆ ಕಂಟ್ರಾಕ್ಟರುಗಳಿಗೆ ಉತ್ತಮ ಯೋಜನೆ ದೊರೆಯುವುದು. ಮನೆಗೆ ಬೆಲೆ ಬಾಳುವ ವಸ್ತುವನ್ನು ತರುವಿರಿ. ವಾರಾಂತ್ಯಕ್ಕೆ ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-6

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಈ ವಾರ ಹೊಸ ಹೂಡಿಕೆಗಳನ್ನು ತೀವ್ರ ಎಚ್ಚರಿಕೆಯಿಂದ ಮಾಡಬೇಕಾದೀತು. ಹೆಚ್ಚಿನ ವರಮಾನವಿದ್ದರೂ ಅನಗತ್ಯ ವೆಚ್ಚಗಳು ಎದುರಾಗಿ ಜೇಬು ಮಾತ್ರ ಖಾಲಿ. ರಾಜಕೀಯ ಮಹತ್ವಾಕಾಂಕ್ಷಿಗಳಿಗೆ ಕಾಣದ ಕೈಗಳಿಂದ ಅಡಚಣೆಗಳು ಕಾಡುತ್ತವೆ. ದುಡುಕಿ ಮಾತನಾಡದಿರಿ. ಇದರಿಂದ ಸಂಬಂಧಗಳು ಕೆಡುತ್ತವೆ. ಸಮಾಜ ವಿರೋಧಿ ಜನರಿಂದ ದೂರವಿರಿ. ಅನ್ಯಥಾ ಆರಕ್ಷಕ ಠಾಣೆಗೆ ಅಲೆಯಬೇಕಾದೀತು.
ಶ್ರೀ ನೃಸಿಂಹ ಉಪಾಸನೆ. ಶುಭ ಸಂಖ್ಯೆ-9

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಕಳೆದ ವಾರಗಳಲ್ಲಿ ಮಾಡಿದ್ದ ಪ್ರಯತ್ನಗಳು ಈ ವಾರದಲ್ಲಿ ಯಶಸ್ವಿಯಾಗಲಿದೆ. ನಿಮ್ಮ ಆಯ್ಕೆಯ ಕ್ಷೇತ್ರದಲ್ಲಿನ ಪ್ರಯತ್ನಗಳು ಮುಂದುವರೆಯಲಿ. 'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ'. ನೆನೆಗುದಿಗೆ ಬಿದ್ದ ಸ್ಥಿರಾಸ್ತಿ ಸಂಬಂಧಿತ ಕಾರ್ಯಗಳು ಸುಗಮವಾಗಲಿದೆ. ಮನೆಯಲ್ಲಿ ದೇವತಾ ಕಾರ್ಯಗಳು ನಡೆಯುವುದು. ನಿಮಗೆ ಸಂಬಂಧಪಡದ ವಿಷಯಕ್ಕೆ ತಲೆ ಹಾಕದಿರಿ.
ಶ್ರೀ ಗುರುಚರಣ ಸೇವೆ. ಶುಭ ಸಂಖ್ಯೆ-8

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ಈ ವಾರ ನಿಮ್ಮ ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಒಳ್ಳೆಯದು. ಆದರೆ ನಿಮಗಾಗದವರ ಮೇಲೆ ಒಂದು ಕಣ್ಣಿರಲಿ. ರಾಹು-ಕೇತುಗಳ ಚಲನೆ ಶುಭವಿಲ್ಲದ ಕಾರಣ ನಿಮ್ಮ ವಿರೋಧಿಗಳು ತಮ್ಮ ಕಾರಸ್ಥಾನವನ್ನು ಚುರುಕುಗೊಳಿಸಬಹುದು. ನಿಮ್ಮ ಮೇಲಧಿಕಾರಿಗಳ ವಿಶ್ವಾಸ ಗಳಿಸಲು ಪ್ರಯತ್ನಿಸಿ. ಆರೋಗ್ಯದ ಕಡೆ ಕಾಳಜಿ ಇರಲಿ, ಶಾಂತ ಮನಸ್ಸಿನಿಂದ ವಾಹನ ಡ್ರೈವಿಂಗ್ ಮಾಡಿ.
ಶ್ರೀ ಕುಲದೇವತಾ ಪ್ರಾರ್ಥನೆ. ಶುಭ ಸಂಖ್ಯೆ-7

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಕಠಿಣ ಪ್ರಯತ್ನ ಹಾಗೂ ಸಂಯಮ ನೀವು ಯಶಸ್ಸು ಗಳಿಸುವಲ್ಲಿ ಸಹಕರಿಸುತ್ತವೆ. ಮನೆಯೊಳಗಿನ ಸಮಸ್ಯೆಗಳನ್ನು ಸಾಮರಸ್ಯದಿಂದ ಪರಿಹರಿಸಿಕೊಳ್ಳುವುದು ಜಾಣತನ. ಅನ್ಯಥಾ ಅಹಿತಕರ ಸನ್ನಿವೇಶಗಳು ಎದುರಾಗಬಹುದು. ವಾರದ ಉತ್ತರಾರ್ಧದಲ್ಲಿ ಕೆಲಸದ ನಿಮಿತ್ತ ಪ್ರಯಾಣ ಮಾಡಬೇಕಾಗಬಹುದು. ದುಡುಕಿನ ವಾಹನ ಡ್ರೈವಿಂಗ್ ಮುಳುವಾಗಬಹುದು.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-2

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಅನಾವಶ್ಯಕ ಮಾನಸಿಕ ಒತ್ತಡದಿಂದ ಹೊರ ಬರಲು ನಿಮ್ಮ ನಿಯಮಿತ ಕೆಲಸ ಕಾರ್ಯಗಳನ್ನು ಎಂದಿನಂತೆ ನಡೆಸುತ್ತಿರಬೇಕು. ಈ ವಾರದಲ್ಲಿ ಗ್ರಹಗತಿಗಳು ಅಷ್ಟೊಂದು ಶುಭವಿಲ್ಲದ ಕಾರಣ ವಾದ-ವಿವಾದಗಳಿಂದ ದೂರವಿರಿ. ಜನ್ಮಸ್ಥ ಶನಿದೇವನ ಸಂಚಾರದಿಂದ ಅನಾರೋಗ್ಯ, ಹಣಕಾಸಿನ ವ್ಯವಹಾರದಲ್ಲಿ ನಷ್ಟ, ಬಿದ್ದು ಪೆಟ್ಟು ಮಾಡಿಕೊಳ್ಳುವುದು ಘಟಿಸಬಹುದು.
ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ನಂ.ಗೂಡಲ್ಲಿ ಶ್ರೀಕಂಠೇಶ್ವರಸ್ವಾಮಿಯ ವೈಭವದ ತೆಪ್ಪೋತ್ಸವ





ನಂಜನಗೂಡಿನ ಪುರಾಣ ಪ್ರಸಿದ್ಧ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕಜಾತ್ರೆ ಪ್ರಯುಕ್ತ ಶನಿವಾರ ಕಪಿಲಾನದಿಯಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ ವಿಜೃಂಭಣೆಯಿಂದ ಜರುಗಿತು. ತೆಪ್ಪೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತರನ್ನು ಬಲ ಚಿತ್ರದಲ್ಲಿ ಕಾಣಬಹುದು.

ನಂಜನಗೂಡು: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕಜಾತ್ರೆ ಪ್ರಯುಕ್ತ ಶನಿವಾರ ಕಪಿಲಾನದಿಯಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ ವಿಜೃಂಭಣೆಯಿಂದ ಜರುಗಿತು.

ಸಂಜೆ 7 ಗಂಟೆಗೆ ದೇವಾಲಯದಲ್ಲಿ ಆಗಮಿಕ ನಾಗಚಂದ್ರ ಧೀಕ್ಷಿತ್ ನೇತೃತ್ವದಲ್ಲಿ ಋತ್ವಿಕರು ಪಾರ್ವತಿ ಸಮೇತ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ ಮೂರ್ತಿಗೆ ವಜ್ರ, ವೈಡೂರ್ಯಗಳಿಂದ ಕೂಡಿದ ಆಭರಣಗಳಿಂದ ಅಲಂಕರಿಸಿ, ಪಲ್ಲಕ್ಕಿಯಲ್ಲಿರಿಸಿ ಕಪಿಲಾ ನದಿಯ ಬಳಿಗೆ ಹೊತ್ತು ತಂದರು. ನದಿಯ ದಂಡೆಯಲ್ಲಿ ಸಕಲ ಪೂಜಾ ವಿಧಿಗಳನ್ನು ನಡೆಸಿದ ನಂತರ ತೇಲುವ ದೇವಾಲಯದಲ್ಲಿ ಇರಿಸಿ ನದಿಯಲ್ಲಿ ಮೂರು ಸುತ್ತು ಪ್ರದಕ್ಷಿಣೆ ಹಾಕಿಸಲಾಯಿತು. ನದಿಯ ಎರಡು ದಂಡೆಗಳಲ್ಲಿ ನೆರೆದಿದ್ದ ಭಕ್ತರು ಶ್ರೀಕಂಠೇಶ್ವರ ಸ್ವಾಮಿಯವರಿಗೆ ಜೈಕಾರ ಹಾಕಿ, ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ತೆಪ್ಪೋತ್ಸವದ ನಂತರ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಏರ್ಪಡಿಸಲಾಗಿತ್ತು, ಡಿವೈಎಸ್ಪಿ ರಘು ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಚಿಕ್ಕದೇವಮ್ಮನ ಬೆಟ್ಟ–ಇಟ್ನ ರಸ್ತೆ ಅಭಿವೃದ್ಧಿ ಮಾಡುವೆ



ಇಟ್ನಾ ಗ್ರಾಮದಲ್ಲಿ ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ಸರಗೂರು: ಚಿಕ್ಕದೇವಮ್ಮನ ಬೆಟ್ಟ–ಇಟ್ನ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಇಟ್ನಾ ಗ್ರಾಮದಲ್ಲಿ ಶನಿವಾರ 50 ಲಕ್ಷ ರೂ. ಅನುದಾನದಲ್ಲಿ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಸ್ತೆಯು ಕಿರಿದಾಗಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಗ್ರಾಮಸ್ಥರು ಈ ಸಮಸ್ಯೆ ಬಗೆಹರಿಸಿಕೊಂಡ ಬಳಿಕ ಕಾಮಗಾರಿ ಆರಂಭಿಸಬೇಕು. ನೆನೆಗುದಿಗೆ ಬಿದ್ದ ರಸ್ತೆ ಡಾಂಬರೀಕರಣವನ್ನು ಗುಣಮಟ್ಟದಿಂದ ಮಾಡಬೇಕು ಎಂದು ಸೂಚನೆ ನೀಡಿದರು.

ಕ್ಷೇತ್ರದ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಸಾಕಷ್ಟು ಅನುದಾನವನ್ನು ನೀಡಲಾಗಿದ್ದು, ಅ ಪೈಕಿ ಸಿಸಿ ರಸ್ತೆ ಚರಂಡಿ, ಭವನ ನಿರ್ಮಾಣ, ಸೇರಿದಂತೆ ಹತ್ತಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಜನಪರ ಕೆಲಸ ಮಾಡಲಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಕ್ಷೇತ್ರಕ್ಕೆ ಮಾಡಲಾದ ಕೆಲಸಗಳು ಕ್ಷೇತ್ರ ಜನರಿಗೆ ಗೊತ್ತಿದೆ. ನನ್ನ ಅವಧಿಯಲ್ಲಿ ಉತ್ತಮ ಅಭಿವೃದ್ಧಿ ಕೆಲಸ ಮಾಡಲಾಗಿದೆ. ಹೀಗಾಗಿ ಗ್ರಾಮಸ್ಥರು ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಹಕಾರ ನೀಡಬೇಕು ಎಂದು ತಿಳಿಸಿದರು.

ಗ್ರಾಮ ಪಂಚಾಯತಿ ಸದಸ್ಯರಾದ ಜಯರಾಮ್ ಮಾತನಾಡಿ, ಗ್ರಾಮದ ಸಮಸ್ಯೆಗಳ ಕುರಿತು ಶಾಸಕರಲ್ಲಿ ಮನವಿ ಪತ್ರ ಸಲ್ಲಿಸಿದರು. ಗ್ರಾಪಂ ಅಧ್ಯಕ್ಷ ಚನ್ನನಾಯಕ, ಸದಸ್ಯರಾದ ಕಾಳಿಂಗನಾಯಕ, ಜಯರಾಮ್, ಆದಿ ಕರ್ನಾಟಕ ಮಹಾಸಭಾದ ಅಧ್ಯಕ್ಷ ಇಟ್ನರಾಜಣ್ಣ, ಯಜಮಾನರಾದ ನಿಂಗರಾಜು, ಬೆಟ್ಟನಾಯಕ, ಚಿನ್ನನಾಯಕ, ಚಿಕ್ಕದೇವಮ್ಮನ ಟ್ರಸ್ಟ್ ಅಧ್ಯಕ್ಷ ದೊಡ್ಡವೀರನಾಯಕ, ಡೈರಿ ಬೆಟ್ಟನಾಯಕ, ಹೂವಿನ ಈರನಾಯಕ, ಯಜಮಾನರಾದ ಕೆ.ನಾಗರಾಜು, ರಾಮನಾಯಕ ರವಿಕುಮಾರ್, ಪಿಡಿಓ ಚನ್ನಸ್ವಾಮಿ, ವಸಿರಿ ಉಮೇಶ್, ಶಿವಪಾಟೀಲ್, ಸೌಮ್ಯಮಂಜುನಾಥ್, ನವೀನ್, ಯತಿರಾಜ್, ಮಹಾಸಾಗರ್, ಇತರರು ಹಾಜರಿದ್ದರು.

ತಿ.ನರಸೀಪುರಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ದಿನಾಚರಣೆ

ಅಂಬೇಡ್ಕರ್‌ರವರ ಆದರ್ಶ ನಮಗೆಲ್ಲ ಪ್ರೇರಣಾ ಶಕ್ತಿ



ಅಂಬೇಡ್ಕರ್ ಪರಿನಿರ್ವಾಣ ಕಾರ್ಯಕ್ರಮದಲ್ಲಿ ದಲಿತ ಮುಖಂಡರು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ತಿ.ನರಸೀಪುರ, ಡಿ.6– ಡಾ.ಬಿ.ಆರ್. ಅಂಬೇಡ್ಕರ್ ಅವರು ಅಸ್ಪೃಶ್ಯತೆ ಎಂಬ ಸಾಮಾಜಿಕ ಪಿಡುಗು ನಿವಾರಣೆ ಮಾಡಿ ಸಮ ಸಮಾಜಕ್ಕಾಗಿ ಶ್ರಮಿಸಿದವರು, ಅವರ ಆದರ್ಶ ನಮಗೆ ಪ್ರೇರಣಾ ಶಕ್ತಿಯಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಹೇಳಿದರು.

ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಪಟ್ಟಣದ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ದೇಶದ ಏಳಿಗೆಗಾಗಿ ಬಾಬಾ ಸಾಹೇಬರು ಕೊಟ್ಟ ಕೊಡುಗೆ ಅನನ್ಯ. ಪ್ರಪಂಚ ಕಂಡ ಪ್ರತಿಭಾವಂತ ಅರ್ಥಶಾಸ್ತ್ರಜ್ಞರಾಗಿರುವ ಅವರು ಮಹಿಳಾ ಸಮಾನತೆ, ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದವರು. ದೇಶಕ್ಕೆ ಸಶಕ್ತ ಸಂವಿಧಾನ ನೀಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ರೂಪ ನೀಡಿದವರು ಎಂದರು.

ವಿಶ್ವದಲ್ಲೇ ಮಾದರಿಯಾದ ಸಂವಿಧಾನ ಸಮಾನತೆ, ಭಾತೃತ್ವ ಸೌಹಾರ್ದತೆಯನ್ನು ಸಾರುತ್ತದೆ. ಅವರು ತೋರಿಸಿದ ಹಾದಿಯಲ್ಲಿ ನಡೆಯುವ ಸಂಕಲ್ಪವನ್ನು ನಾವೆಲ್ಲರೂ ಮಾಡಬೇಕಿದೆ, ಬೌದ್ಧ ಧರ್ಮದ ಧರ್ಮ ಗ್ರಂಥ 'ತ್ರಿಪಿಟಕ'ವನ್ನು ಅಧ್ಯಯನ ಮಾಡಿದ ಅಂಬೇಡ್ಕರ್ ಅವರು ಅದರಲ್ಲಿ ಅಡಕವಾಗಿದ್ದ ಶಾಂತಿ, ವಿಶ್ವ ಪ್ರೇಮ, ವಿಶ್ವ ಬಾಂಧವ್ಯ, ಜಾತ್ಯತೀತ ನಿಲುವುಗಳನ್ನು ಅರಿತು ಆ ಧರ್ಮವನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಆ ಧರ್ಮವನ್ನು ಸ್ವೀಕರಿಸಿದರು. ಅಂಬೇಡ್ಕರ್ ನಂತರ ಬಹಳಷ್ಟು ಮಂದಿ ಆ ಧರ್ಮವನ್ನು ಪೋಷಿಸಿದ್ದಾರೆ. ಅಂತೆಯೆ ಅಂಬೇಡ್ಕರ್ ಅವರಿಂದ ಬೌದ್ಧ ಧರ್ಮದ ಪುನರುತ್ಥಾನವಾಗಿದೆ ಎಂದರೆ ತಪ್ಪಾಗಲಾರದು ಎಂದರು.

ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎನ್. ಸಿದ್ದಾರ್ಥ ಮಾತನಾಡಿ ಅಂಬೇಡ್ಕರ್ ಅವರು ಈ ದೇಶಕ್ಕೆ ಹಾಗೂ ನಮ್ಮ ಸಾಮಾಜಿಕ ಬದುಕಿಗೆ ಅಗತ್ಯವಾದಂತಹ ಸಂವಿಧಾನವನ್ನು ಕೊಟ್ಟಿದ್ದಾರೆ. ಜಗತ್ತಿನಲ್ಲಿಯೇ ಶ್ರೇಷ್ಠ ಲಿಖಿತ ಸಂವಿಧಾನವೆಂದು ನಮ್ಮ ಸಂವಿಧಾನ ಖ್ಯಾತಿ ಪಡೆದಿದೆ. ಸಂವಿಧಾನದ ಶ್ರೇಷ್ಠತೆ ತಿಳಿಯಬೇಕಾದರೆ ಒಳ್ಳೆಯವರ ಕೈಯಲ್ಲಿ ಅನುಷ್ಠಾನವಾಗಬೇಕು.ಕೆಟ್ಟವರ ಕೈಗೆ ಹೋದರೆ ಕೆಟ್ಟದಾಗುತ್ತದೆ ಎಂದು ಅಂಬೇಡ್ಕರ್ ಅವರು ಸ್ಪಷ್ಟವಾಗಿ ಈ ದೇಶದ ಜನರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದರು. ದಲಿತರಿಗೆ ಮಾತ್ರವಲ್ಲದೇ ಸಮಸ್ತ ವರ್ಗದವರಿಗೂ ಸಾಮಾಜಿಕ ಅವಕಾಶಗಳನ್ನು ದೊರಕಿಸಲು ಅವರು ಶ್ರಮಿಸಿದರು ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ ಮಾತನಾಡಿ ಬಾಬಾ ಸಾಹೇಬರು ಸಂವಿಧಾನದಿಂದ ಅನುಕೂಲ ಪಡೆದವರು ಅವರ ಸೋದರ ಜನಾಂಗಗಳಿಗೆ ಸಹಾಯ ಮಾಡಬೇಕು. ಎಲ್ಲರೂ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಬೇಕೆಂದು ಬಯಸಿದ್ದರು. ಬಹಳ ಜನ ಸಂವಿಧಾನವನ್ನು ವಿರೋಧಿಸುತ್ತಾರೆ. ಭಾರತ ಬಹುಸಂಸ್ಕೃತಿಯ, ಬಹುತ್ವದ ದೇಶ. ಅನೇಕ ಜಾತಿ, ಧರ್ಮಗಳಿವೆ. ಅನೇಕ ಭಾಷೆಗಳೂ ಇವೆ. ಇದಕ್ಕೆ ಯೋಗ್ಯವಾದ ಸಂವಿಧಾನವನ್ನು ಕೊಟ್ಟವರು ಅಂಬೇಡ್ಕರ್ ಎಂದರು.

ಈ ವೇಳೆ ಎಸ್‌ಸಿಎಸ್‌ಟಿ ಹಿತ ರಕ್ಷಣಾ ಸಮಿತಿಯ ಸದಸ್ಯ ಸೋಸಲೆ ಮಹದೇವಸ್ವಾಮಿ, ಗಣೇಶ್,ಗ್ರಾಪಂಮಾಜಿ ಸದಸ್ಯ ಎಂ.ಮಿಥುನ್, ಮುಖಂಡರಾದ ಕೆಂಪರಾಜ್, ಕಾಂತಣ್ಣ, ಶ್ರೀಧರ್, ಗೋವಿಂದರಾಜು, ಶಿವಣ್ಣ, ಮಲ್ಲರಾಜು, ರವಿ, ಭವಾನಿ, ರಂಗಸ್ವಾಮಿ ಇದ್ದರು.

ಅಂಬೇಡ್ಕರ್ ಹೋರಾಟದಿಂದ ನೊಂದವರು, ದಮನಿತರು, ಬಡವರ ಬದುಕು ಹಸನು



ಕೆ.ಆರ್.ನಗರ: ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಹೋರಾಟಗಾರರಿಂದ ದೇಶದಲ್ಲಿ ನೊಂದವರು, ದಮನಿತರು, ಬಡವರು ಹಾಗೂ ಮಹಿಳೆಯರ ಬದುಕು ಹಸನಾಯಿತು ಎಂದು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಹಂಗರಬಾಯನಹಳ್ಳಿ ತಮ್ಮಣ್ಣ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವಿವಿದೋದ್ದೇಶ ಸಹಕಾರ ಸಂಘ ಮತ್ತು ಅಚ್ಯುತಾ ಸ್ನೇಹ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಬಾಬಾ ಸಾಹೇಬರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಅಂಬೇಡ್ಕರ್ ಅವರ ಆದರ್ಶಗಳು ನಮಗೆ ಮಾರ್ಗದರ್ಶನವಾಗಿದ್ದು, ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಿ, ಸಂಘಟಿತರಾಗಿ ಹೋರಾಟ ಮಾಡಿದಾಗ ಮಾತ್ರ ನಮಗೆ ದೊರಕಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗಲಿದೆ ಎಂದರು.

ಅಂಬೇಡ್ಕರ್ ವಿವಿದೋದ್ದೇಶ ಸಹಕಾರ ಸಂಘದ ಕಾರ್ಯದರ್ಶಿ ಬಿ.ಡಿ.ರೇವಣ್ಣ, ಸಾಲಿಗ್ರಾಮ ನಾಗಣ್ಣ, ಶಿವರಾಮ್, ಮಧುವನಹಳ್ಳಿ ಈರಯ್ಯ,ಲೋಕೇಶ್, ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಅವಿನಾಶ್, ಗೋವಿಂದರಾಜು, ನಿವೃತ್ತ ಅಧಿಕಾರಿಗಳಾದ ದಾಶರಥಿ, ಮಹದೇವಯ್ಯ, ಕೆ.ಎಲ್.ಕೃಷ್ಣಯ್ಯ, ಸೇರಿದಂತೆ ಹಲವಾರು ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅಭಿಮಾನಿ ಬಳಗದಿಂದ ಹಿರಿಯ ಪತ್ರಕರ್ತ ಕೆ.ಟಿ.ರಮೇಶ್‌ಗೆ ಶ್ರದ್ಧಾಂಜಲಿ



ಕೆ.ಆರ್.ನಗರ: ಸಾಮಾಜಿಕ ಕಳಕಳಿ, ಬದ್ಧತೆ, ಜನ ಸಾಮಾನ್ಯ ಸಮಸ್ಯೆಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸುವ ಮೂಲಕ ಜನಾನುರಾಗಿಯಾಗಿದ್ದ ಪತ್ರಕರ್ತ ಕೆ.ಟಿ. ರಮೇಶ್ ಇಷ್ಟೊಂದು ಜನರು ಸೇರಿ ಶ್ರದ್ಧಾಂಜಲಿ ಅರ್ಪಿಸುತ್ತಿರುವುದಕ್ಕೆ ಸಾಕ್ಷಿ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ಪಟ್ಟಣದ ಕೃಷ್ಣ ಮಂದಿರದಲ್ಲಿ ಹಿರಿಯ ಪತ್ರಕರ್ತ ಹಾಗೂ ಮೈಸೂರು ಮಿತ್ರ ವರದಿಗಾರ ದಿವಂಗತ. ಕೆ.ಟಿ.ರಮೇಶ್ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು ಹುಟ್ಟು ಆಕಸ್ಮಿಕ ಮತ್ತು ಸಾವು ನಿಶ್ಚಿತವಾಗಿದ್ದು ಈ ಮಧ್ಯೆ ನಾವುಗಳು ಮಾಡುವ ಒಳ್ಳೆಯ ಕೆಲಸಗಳು ಮಾತ್ರ ಶಾಶ್ವತ ಎಂದರು.

ಶಾಸಕಾಂಗ ಮತ್ತು ಪತ್ರಿಕಾರಂಗ ಎರಡು ಸೇವೆ ಮಾಡುವ ರಂಗಗಳಾಗಿದ್ದು ಈ ಎರಡರಲ್ಲಿ ಕೆಲಸ ನಿರ್ವಹಿಸುವವರು ಬಹಳ ಜವಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಹೇಳಿದರು.

ನವ ನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ, ಕೆ.ಎನ್.ಬಸಂತ್, ಕಸಾಪ ತಾಲೂಕು ಅಧ್ಯಕ್ಷ ಡಿಂಡಿಮಶಂಕರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಪುರಸಭೆ ಮಾಜಿ ಉಪಾಧ್ಯಕ್ಷೆ ನಾಗರತ್ನಮ್ಮ, ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಮೈಸೂರು ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿವೆಂಕಟೇಶ್, ಮಾತನಾಡಿದರು.

ಮೈಸೂರು ಪತ್ರಕರ್ತರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು, ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್, ಖಜಾಂಚಿ ನಾಗೇಶ್, ಪತ್ರಕರ್ತರಾದ ಪಂಡಿತ್ ನಾಟಿಕರ್, ಕೆ.ಆರ್.ಶ್ರೀನಿವಾಸ್, ದಿವಂಗತ ಕೆ.ಟಿ. ರಮೇಶ್ ಶ್ರದ್ಧಾಂಜಲಿ ಸಭೆಯ ನೇತೃತ್ವದ ವಹಿಸಿದ್ದ ಹಿರಿಯ ಪತ್ರಕರ್ತ ಹೆಚ್.ಪಿ.ಶಿವಣ್ಣ ಪುರಸಭೆ ಮಾಜಿ ಸದಸ್ಯರಾದ ಮೊಹಮ್ಮದ್ ಸಿರಾಜ್, ಕೆ.ಪಿ.ಪ್ರಭುಶಂಕರ್, ಎನ್. ಶಿವಕುಮಾರ್, ದಿವಂಗತ ಕೆ.ಟಿ.ರಮೇಶ್ ಸಹೋದರ ಗಣೇಶ್, ಪುತ್ರಿ ದಿವಿಶಾ, ತಾ.ರೈತ ಯುವ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಮ್ ಪ್ರಸಾದ್, ತಾ. ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ನಾಗೇಶ್, ಜಿಲ್ಲಾ ಜಾದಳ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾ.ಜಾದಳ ಅಧ್ಯಕ್ಷೆ ರಾಜಲಕ್ಷ್ಮೀ, ನಗರ ಕಾರ್ಯದರ್ಶಿ ಭಾಗ್ಯಲಕ್ಷ್ಮೀ, ರೋಟರಿ ಕ್ಲಬ್ ಅಧ್ಯಕ್ಷ ಟಿ.ಎನ್ ದಯಾನಂದ್, ಕೆ.ಟಿ.ರಮೇಶ್ ಅಭಿಮಾನಿಗಳು ಮತ್ತು ವಿವಿದ ಸಂಘ ಸಂಸ್ಥೆಯ ಪಧಾದಿಕಾರಿಗಳು ಹಾಜರಿದ್ದರು.


ಗೌತಮ ಬುದ್ಧ ಜನಸೇವಾ ಟ್ರಸ್ಟ್ ಅಧ್ಯಕ್ಷರಿಗೆ ಕರ್ನಾಟಕ ಸೇವಾ ರತ್ನ ಪ್ರಶಸ್ತಿ

ತಿ.ನರಸೀಪುರ, ಡಿ.6– ಪಟ್ಟಣದ ಗೌತಮ ಬುದ್ದ ಜನಸೇವಾ ಟ್ರಸ್ಟ್ ಅಧ್ಯಕ್ಷೆ ಕೋಮಲಾಕ್ಷಿ ನಾಗರಾಜು ಅವರಿಗೆ ಮೈಸೂರಿನ ಓಂ ಸಾಯಿ ಸೇವಾ ಸಂಸ್ಥೆ ಶಿಫಾರಸ್ಸಿನ ಮೇರೆಗೆ ಬೆಂಗಳೂರಿನ ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆಯು ಕರ್ನಾಟಕ ಸೇವಾ ರತ್ನಪ್ರಶಸ್ತಿ ನೀಡಿ ಗೌರವಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ಸಂಬಂಧ ಪ್ರಶಸ್ತಿ ಬಂದ ಸಂತಸ ಹಂಚಿಕೊಂಡ ಅವರು, ಗೌತಮಬುದ್ದ ಜನಸೇವಾ ಟ್ರಸ್ಟ್ ಸಂಸ್ಥೆಯನ್ನು ದಿ.ಶ್ರೀನಿವಾಸಮೂರ್ತಿಯವರು ಹತ್ತಾರು ವರ್ಷಗಳ ಶ್ರಮದಿಂದ ಕಟ್ಟಿ ಬೆಳೆಸಿ ಸಂಸ್ಥೆಗೋಸ್ಕರ ಜೀವವನ್ನೇ ತ್ಯಾಗ ಮಾಡಿ ಹೋಗಿದ್ದಾರೆ, ಅವರ ಕನಸು ನನಸು ಮಾಡಲು ಅವರ ಮಾರ್ಗದರ್ಶನದಂತೆ ಟ್ರಸ್ಟಿಗಳೆಲ್ಲರೂ ಬಹಳ ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆ ಎಂದರು. ಈಗ ಸಂಸ್ಥೆಯ ಮಾರ್ಗದರ್ಶನದಲ್ಲಿ ಕೋಮಲಾಕ್ಷಿ ನಾಗರಾಜು ಅವರು ಬಹಳ ಅಚ್ಚುಕಟ್ಟಾಗಿ ಕೆಲಸ ನಿರ್ವಹಿಸಿಕೊಂಡು ಸಮಾಜ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಅಂಬೇಡ್ಕರ್‌ರವರ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿ

ನಂಜನಗೂಡಿನಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ಕಾರ್ಯಕ್ರಮ



ನಂಜನಗೂಡಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ನಂಜನಗೂಡು: ಡಾ.ಬಿ.ಆರ್.ಅಂಬೇಡ್ಕರ್ ಇಡೀ ವಿಶ್ವ ಕಂಡ ಒಬ್ಬ ಮಹಾನ್ ನಾಯಕರಾಗಿದ್ದು, ಅವರು ರಚಿಸಿದ ಸಂವಿಧಾನ ಇಡೀ ವಿಶ್ವಕ್ಕೆ ಮಾದರಿಯಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಪರಿನಿಬ್ಬಾಣ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಭಾರತ ದೇಶದ ನ್ಯಾಯಾಂಗ ಮತ್ತು ಕಾನೂನು ವ್ಯವಸ್ಥೆಯ ಕಂಬವಾಗಿದ್ದರು. ಅವರು ರಚಿಸಿದ ಸಂವಿಧಾನದ ಮೂಲಕ ಶೋಷಿತರು, ಕಾರ್ಮಿಕರು, ಮಹಿಳೆಯರು, ಹಿಂದುಳಿದವರು, ದುರ್ಬಲರು, ಸೇರಿದಂತೆ ಇಡೀ ಮಾನವ ಕುಲಕ್ಕೆ ಸಮಾನವಾದ ಹಕ್ಕು ದೊರೆಯುವಂತಾಗಿದೆ, ಆದ್ದರಿಂದ ಅವರು ಒಂದೇ ಜಾತಿಗೆ ಸೀಮಿತರಾದವ ರಲ್ಲ, ಇನ್ನು ಅಂಬೇಡ್ಕರ್ ಅವರು ಒಬ್ಬ ಅರ್ಥಶಾಸ್ತ್ರಜ್ಞರಾಗಿ, ಸಮಾಜವಾದಿಯಾಗಿ, ರಾಜಕೀಯ ತಜ್ಞರಾಗಿ ಭಾರತ ದೇಶಕ್ಕೆ ಹಲವಾರು ಕೊಡುಗೆಯನ್ನು ನೀಡಿದ್ದಾರೆ ಎಂದರು.

ಬಾಬಾ ಸಾಹೇಬರ ಸಂವಿಧಾನದಿಂದಾಗಿ ವಿವಿಧತೆಯಲ್ಲಿ ಏಕತೆ ಇರುವ ಭಾರತದಂತ ದೇಶ ಒಗ್ಗಟ್ಟಾಗಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುನ್ನಡೆಯುವ ಮೂಲಕ ಇಡೀ ವಿಶ್ವಕ್ಕೆ ಮಾದರಿಯಾಗಿದೆ, ಆದ್ದರಿಂದ ನಾವೆಲ್ಲರೂ ಡಾ. ಬಿ.ಆರ್ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅವರ ಹಾಕಿಕೊಟ್ಟ ಹಾದಿಯಲ್ಲಿ ಮುನ್ನಡೆಯಬೇಕು, ಆಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಶಾಸಕರು ಹೇಳಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಚ್.ಸಿ.ಬಸವರಾಜು, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಎಸ್.ಸಿ.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಮುಖಂಡರಾದ ದೊರೆಸ್ವಾಮಿನಾಯಕ, ಗೋವಿಂದರಾಜು, ನಾಗರಾಜಯ್ಯ, ಶ್ರೀಧರ್, ಕಳಲೆ ರಾಜೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯಕುಮಾರ್, ಗ್ರಾಪಂ ಸದಸ್ಯ ಮುದ್ದುಮಾದಶೆಟ್ಟಿ, ದಸಂಸ ಸಂಚಾಲಕರಾದ ಮಲ್ಲಹಳ್ಳಿನಾರಾಯಣ, ನಗರ್ಲೆ ವಿಜಯಕುಮಾರ್, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗ, ಚೆಸ್ಕಾಂ ಎಇಇ ದೇವರಾಜಯ್ಯ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಸಂವಿಧಾನದ ಆಶಯ, ಕಾನೂನುಗಳನ್ನು ಅಳವಡಿಸಿಕೊಳ್ಳಿ



ಹುಣಸೂರು, ಡಿ.6– ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದ ಸಂವಿಧಾನದ ಬಗ್ಗೆ ಮಾತನಾಡುವುದಲ್ಲ. ಸಂವಿಧಾನದ ಆಶಯಗಳನ್ನು ಮತ್ತು ಸಾಂವಿಧಾನಿಕ ಕಾನೂನುಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಅನಂದಸ್ವಾಮಿ ಕರೆ ನೀಡಿದರು.

ತಾಲೂಕಿನ ರತ್ನಪುರಿ ಗ್ರಾಮದಲ್ಲಿ ಏರ್ಪಡಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿಬ್ಬಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಜಗತ್ತಿನ ವಿವಿಧ ದೇಶಗಳ ಸಂವಿಧಾನ ಮತ್ತು ವಿದ್ವತ್‌ಪೂರ್ಣವಾದ ಕೃತಿಗಳನ್ನು ಅಧ್ಯಯನ ಮಾಡುತ್ತಿದ್ದರು. ಆದ್ದರಿಂದಲೇ ಅಂಬೇಡ್ಕರ್ ವಿಶ್ವಶ್ರೇಷ್ಠವಾದ ಸಂವಿಧಾನವನ್ನು ರಚಿಸಿ, ವಿಶ್ವಜ್ಞಾನಿ ಎಂದು ಗೌರವಿಸಲ್ಪಡುತ್ತಿದ್ದಾರೆ.

ದಸಂಸ ಜಿಲ್ಲಾ ಸಂಘಟನೆ ಸದಸ್ಯ ರತ್ನಪುರಿ ಪುಟ್ಟಸ್ವಾಮಿ ಮಾತನಾಡಿ, ದೇಶದಲ್ಲಿ ಎಷ್ಟೋ ಜನರು ಶಾಸಕ, ಸಂಸದ, ಮಂತ್ರಿಗಳಾಗಿ ಹೋಗಿದ್ದಾರೆ. ಆದರೆ ಅವರಾರೂ ಜನಮಾನಸದಲ್ಲಿ ಜೀವಂತವಾಗಿ ಉಳಿದಿಲ್ಲ. ಆದರೆ ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಪಾಂಡಿತ್ಯ, ಪರಿಶ್ರಮ, ಜೀವಪರ, ಜನಪರ ಚಿಂತನೆ, ಕರುಣೆ–ಕಾಳಜಿಯ ಕಾರಣದಿಂದ ದೇಶದ ಜನರ ಬದುಕಿನ ಭಾಗವಾಗಿ ಉಳಿದಿದ್ದಾರೆ ಎಂದು ಬಣ್ಣಿಸಿದರು.

ಅಂಬೇಡ್ಕರ್ ಚಿಂತಕ ವಿಜೇಂದ್ರಕುಮಾರ್, ಅಜ್ಜರ್ ಪಾಷ, ಪ್ರಸನ್ನ, ವಿಜೇಂದ್ರಕುಮಾರ್ ಮಾತನಾಡಿದರು. ಗ್ರಾ.ಪಂ ಅಧ್ಯಕ್ಷ ನಾಗೇಶರಾವ್ ಮೇಗಾಣಿ, ಮುಜೀಬ್, ಮಹೇಶ್, ಶಿವಣ್ಣ, ಮಲ್ಲಿಕಾರ್ಜುನ ಸ್ವಾಮಿ, ಸುದರ್ಶನ್ ಸಿಂಗ್(ದೀಪು) ಉಪಸ್ಥಿತರಿದ್ದರು.

ಮಾದಹಳ್ಳಿಕೊಪ್ಪಲಿನಲ್ಲಿ 24X7 ನೀರು ಸರಬರಾಜು



ಹುಣಸೂರು ತಾಲೂಕಿನ ಬನ್ನಿಕುಪ್ಪೆ ವ್ಯಾಪ್ತಿಯ ಮಾದಹಳ್ಳಿ ಕೊಪ್ಪಲು ಗ್ರಾಮದಲ್ಲಿ ಜಲಜೀವನ ಮಿಷನ್ ಯೋಜನೆಯಡಿ 24 ಗಂಟೆಗಳ ಶುದ್ಧ ಕುಡಿಯುವ ನೀರಿನ ಕಾರ್ಯಕ್ರಮಕ್ಕೆ ಕಾರ್ಯ ನಿರ್ವಹಣಾಧಿಕಾರಿ ಹೊಂಗಯ್ಯ ಚಾಲನೆ ನೀಡಿದರು.

ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ನರೇಂದ್ರನಾಯಕ ನಿಧನ



ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಆಲಂಬಾಡಿ ಕಾವಲು ಗ್ರಾಮದ ಹಿರಿಯ ಮುಖಂಡ ಹಾಗೂ ತಾಲೂಕು ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷರಾದ ನರೇಂದ್ರನಾಯಕ (55) ಶನಿವಾರ ಸಂಜೆ ನಿಧನ ಹೊಂದಿದರು. ಮೃತರು ಪತ್ನಿ ದ್ರಾಕ್ಷಾಯಿಣಿ, ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಹುಟ್ಟೂರು ಆಲಂಬಾಡಿಕಾವಲು ಗ್ರಾಮದಲ್ಲಿ ಡಿ.7ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಮನುಷ್ಯನಿಗೆ ಹೃದಯದಷ್ಟೆ ಸಂವಿಧಾನವೂ ಮುಖ್ಯ



ಅಂಬೇಡ್ಕರ್ ಅವರ 69ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಹೆಚ್.ಡಿ.ಕೋಟೆ: ನಮ್ಮ ದೇಹಕ್ಕೆ ಹೃದಯ ಎಷ್ಟು ಮುಖ್ಯವೋ ಅದೇ ರೀತಿ ನಮ್ಮ ದೇಶಕ್ಕೆ ಸಂವಿಧಾನ ಅಷ್ಟೇ ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವದಲ್ಲಿ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದು, ನಮ್ಮ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದೇವೆ ಎಂದರೆ ಸಂವಿಧಾನ.ಅಂಬೇಡ್ಕರ್ ಅವರು ಸಂವಿಧಾನ ಮೂಲಕ ಮೀಸಲಾತಿ ನೀಡದೆ ಇದ್ದಿದ್ದರೆ ನಾವ್ಯಾರು ಸ್ವತಂತ್ರವಾಗಿ ನಿಂತು ಮಾತನಾಡಲು ಸಾಧ್ಯವಿರಲಿಲ್ಲ. ಕಾಣದ ದೇವರಿಗೆ ಕಾಯಿ ಒಡೆದು ಪೂಜೆ ಮಾಡುತ್ತೇವೆ, ಆದರೆ ಎಲರೂ ಸಮಾನಾಗಿ ಬದುಕುವ ಅವಕಾಶ ನೀಡಿದ ನಿಜ ದೈವ ಅಂಬೇಡ್ಕರ್ ಅವರನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣ ಆಗಿದೆ. ಯಾವುದೇ ಸ್ವಾರ್ಥ ಇಲ್ಲದೆ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕೆಲಸ ಮಾಡಬೇಕು. ವಿಶ್ವ ಕಂಡ ಅಪ್ರತಿಮ ನಾಯಕನನ್ನು ಕಳೆದುಕೊಂಡ ದಿನ ಇಂದು ತುಂಬಾ ಸಂಕಟವಾಗುತ್ತದೆ ಎಂದು ತಿಳಿಸಿದರು.

ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೈರಿಗೆ ಶಿವರಾಜು ಮಾತನಾಡಿ ಬಾಬಾ ಸಾಹೇಬರ ಫಲವನ್ನು ಭಾರತದ ಪ್ರತಿಯೊಬ್ಬ ಪ್ರಜೆಯು ಪಡೆಯುತ್ತಿದ್ದಾರೆ ಆದರೆ ಅವರ ವಿಚಾರಧಾರೆಗಳನ್ನು ಕೇಳುತ್ತಾರೆ ಆದರೆ ಅನುಸರಿಸುವ ಕೆಲಸ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇಡೀ ವಿಶ್ವವೇ ಅಂಬೇಡ್ಕರ್ ಅವರನ್ನು ಗೌರವಿಸುತ್ತದೆ ಆದರೆ ನಮ್ಮ ದೇಶ ಅವರನ್ನು ತಿರಸ್ಕಾರ ಭಾವನೆ ತೋರಿದೆ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಹೋರಾಟಗಾರನಿಗೆ ಗೌರವಿಸುವ ಕೆಲಸ ಮಾಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೀಶ್, ಬಿಆರ್.ಕೃಷ್ಣಯ್ಯ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ರಮೇಶ್, ಆದಿ ಕರ್ನಾಟಕ ಮಹಾಸಭ ತಾಲೂಕು ಅಧ್ಯಕ್ಷ ಹೈರಿಗೆ ಶಿವರಾಜು, ಸೋಗಹಳ್ಳಿ ಶಿವಣ್ಣ, ಮಲಾರ ಪುಟ್ಟಯ್ಯ, ಎಚ್.ಸಿ.ನರಸಿಂಹಮೂರ್ತಿ, ನಂಜಪ್ಪ ಪ್ರೇಮ್ ಸಾಗರ್, ಎಂ.ಡಿ.ಮಂಚಯ್ಯ, ಪರಶಿವಮೂರ್ತಿ, ಬಸವರಾಜು, ಸಣ್ಣಕುಮಾರ್, ಅನುಷಾ ಕೋಟೆ, ಶಿವಯ್ಯ, ಪ್ರಕಾಶ್ ಬುದ್ದ, ಪುಟ್ಟಮಾದು, ಸೌಮ್ಯ ಮಂಜುನಾಥ್, ಮುದ್ದಮಲ್ಲಯ್ಯ, ಡಾ.ರವಿ ಕುಮಾರ್, ಶಿವರಾಜ್, ಶಶಿಕಲಾ, ದೀಪಾ, ಸುರೇಶ ನಾಯಕ ಇದ್ದರು.

ಕೆಎಸ್‌ಟಿಡಿಸಿಯಿಂದ ಮೈಸೂರು ಸುತ್ತಲಿನ ಪ್ರವಾಸಿ ತಾಣಗಳಿಗೆ ಸರ್ಕ್ಯೂಟ್ ಟೂರ್

ಮೈಸೂರು, ಡಿ. 6 (ಆರ್‌ಕೆ)– ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ವು ಮೈಸೂರು ಮತ್ತು ಸುತ್ತಲಿನ ಪ್ರವಾಸಿ ತಾಣಗಳಿಗೆ 6 ಹಂತದ ಸರ್ಕ್ಯೂಟ್ ಟೂರ್ ವ್ಯವಸ್ಥೆ ಮಾಡಿದೆ.

ಸಾಂಸ್ಕೃತಿಕ ರಾಜಧಾನಿ ಮೈಸೂರು, ಸಿಲಿಕಾನ್ ಸಿಟಿ ಬೆಂಗಳೂರು ಸುತ್ತಲಿನ ಪ್ರವಾಸಿತಾಣಗಳು ಹಾಗೂ ಧಾರ್ಮಿಕ ಕ್ಷೇತ್ರಗಳನ್ನು ವೀಕ್ಷಿಸಲು ಪ್ರವಾಸಿಗರಿಗೆ ಹವಾನಿಯಂತ್ರಿತ (ಎಸಿ) ಬಸ್‌ಗಳಲ್ಲಿ ಸರ್ಕ್ಯೂಟ್ ಟೂರ್ ವ್ಯವಸ್ಥೆ ಮಾಡಲಾಗಿದೆ.

ಸರ್ಕ್ಯೂಟ್ 1 (ಒಂದು ದಿನದ ಪ್ರವಾಸ, ಒಬ್ಬರಿಗೆ 510 ರೂ. ಊಟ ಹೊರತುಪಡಿಸಿ): ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಯೂರ ಹೊಯ್ಸಳ ಹೋಟೆಲ್ ಆವರಣದಿಂದ ಬೆಳಗ್ಗೆ 8.30 ಗಂಟೆಗೆ ಹೊರಡಲಿರುವ ಬಸ್ ಅರಮನೆ, ಚಾಮುಂಡಿ ಬೆಟ್ಟ, ಜಗನ್ಮೋಹನ ಅರಮನೆ, ಸೇಂಟ್ ಫಿಲೋಮಿನಾ ಚರ್ಚ್, ಮೃಗಾಲಯ, ಶ್ರೀರಂಗಪಟ್ಟಣದ ದರಿಯಾ ದೌಲತ್‌ಗೆ ಭೇಟಿ ನೀಡಿದ ಬಳಿಕ ಸಂಜೆ ಕೆಆರ್‌ಎಸ್‌ಗೆ ಕರೆದೊಯ್ದು, ರಾತ್ರಿ ಮರಳಿ ಮೈಸೂರು ತಲುಪಲಿದೆ.

ಸರ್ಕ್ಯೂಟ್ 2 (ಎರಡು ದಿನದ ಪ್ರವಾಸ, ಒಬ್ಬರಿಗೆ 7,750 ರೂ. ಊಟ, ತಿಂಡಿ ಸೇರಿ): ಬೆಂಗಳೂರಿನಿಂದ ಆರಂಭವಾಗುವ ಟ್ರಿಪ್‌ನಲ್ಲಿ ಮೊದಲ ದಿನ ಬೆಳಗ್ಗೆ 6.30 ಗಂಟೆಗೆ ಬೆಂಗಳೂರಿನಿಂದ ಪ್ರಯಾಣ ಬೆಳೆಸಿ ಜಾನಪದ ಲೋಕ ಭೇಟಿ ಮಾಡಿದ ಬಳಿಕ ಮೈಸೂರಿಗೆ ಬಂದು ಸೇಂಟ್ ಫಿಲೋಮಿನಾ ಚರ್ಚ್, ಅರಮನೆ, ಜಗನ್ಮೋಹನ ಕಲಾ ಗ್ಯಾಲರಿ, ಮೈಸೂರು ಸಿಲ್ಕ್ ಫ್ಯಾಕ್ಟರಿ, ರೈಲ್ವೆ ಮ್ಯೂಸಿಯಂ, ಕೆಆರ್‌ಎಸ್ ಬೃಂದಾವನ ಭೇಟಿ ಬಳಿಕ ಅಂದು ರಾತ್ರಿ ಅಲ್ಲಿಯೇ ವಾಸ್ತವ್ಯ.

ಎರಡನೇ ದಿನ ಬೆಳಗ್ಗೆ ಚಾಮುಂಡಿ ಬೆಟ್ಟ, ಮೃಗಾಲಯ, ವರುಣಾ ಕೆರೆ, ಶ್ರೀರಂಗಪಟ್ಟಣ, ಗೋಲ್ ಗುಂಬಜ್, ಶ್ರೀರಂಗಪಟ್ಟಣ ಕೋಟೆ ವೀಕ್ಷಣೆ ನಂತರ ಬೆಂಗಳೂರಿಗೆ ವಾಪಸ್ಸಾಗುವುದು.

ಸರ್ಕ್ಯೂಟ್ 3 (ಎರಡು ದಿನದ ಪ್ರವಾಸ, ಒಬ್ಬರಿಗೆ 8,200 ರೂ. ಊಟ, ತಿಂಡಿ ಸೇರಿ): ಬೆಂಗಳೂರು–ಮೈಸೂರು–ಕೆಆರ್‌ಎಸ್–ಶ್ರೀರಂಗಪಟ್ಟಣ ಪ್ರವಾಸದಲ್ಲಿ ಮೊದಲ ದಿನ ಬೆಳಗ್ಗೆ 6.30 ಗಂಟೆಗೆ ಬೆಂಗಳೂರಿನಿಂದ ಹೊರಟು ಜಾನಪದ ಲೋಕ ಭೇಟಿ ಬಳಿಕ ಮೈಸೂರಿಗೆ ಆಗಮಿಸಿ ಸೇಂಟ್ ಫಿಲೋಮಿನಾ ಚರ್ಚ್, ಅರಮನೆ, ಕಾಕನ ಕೋಟೆ ವೀಕ್ಷಣೆ ನುತರ ಮೈಸೂರಿನ ಮಯೂರ ಹೊಯ್ಸಳ ಹೋಟೆಲ್‌ನಲ್ಲಿ ವಾಸ್ತವ್ಯ.

ಎರಡನೇ ದಿನ ಬೆಳಗ್ಗೆ ಚಾಮುಂಡಿ ಬೆಟ್ಟ, ಮೃಗಾಲಯ, ವರುಣಾ ಕೆರೆ, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣ, ಕೆಆರ್‌ಎಸ್‌ಗೆ ಭೇಟಿ ನೀಡಿದ ಬಳಿಕ ಬೆಂಗಳೂರಿಗೆ ವಾಪಸಾಗುವುದು.

ಸರ್ಕ್ಯೂಟ್ 4 (3 ದಿನದ ಪ್ರವಾಸ, ಒಬ್ಬರಿಗೆ 12,650 ರೂ. ಊಟ ,ತಿಂಡಿ ಸೇರಿ): ಮೊದಲ ದಿನ ಬೆಂಗಳೂರಿನಿಂದ ಹೊರಟು ಜಾನಪದ ಲೋಕ, ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್, ಅರಮನೆ, ಜಗನ್ಮೋಹನ ಕಲಾ ಗ್ಯಾಲರಿ, ಸಿಲ್ಕ್ ಫ್ಯಾಕ್ಟರಿ, ರೈಲ್ವೆ ಮ್ಯೂಸಿಯಂ, ಕೆಆರ್‌ಎಸ್ ಬೃಂದಾವನ ಅಂದು ರಾತ್ರಿ ವಾಸ್ತವ್ಯ.

ಎರಡನೇ ದಿನ ಚಾಮುಂಡಿ ಬೆಟ್ಟ, ಮೃಗಾಲಯ, ಕಾಕನ ಕೋಟೆ, ಭಾಗಮಂಡಲ ಭೇಟಿ ಬಳಿಕ ಅಲ್ಲಿನ ಮಯೂರ ತಲಕಾವೇರಿ ಹೋಟೆಲ್‌ನಲ್ಲಿ ವಾಸ್ತವ್ಯ.

ಮೂರನೇ ದಿನ ಅಬ್ಬಿ ಫಾಲ್ಸ್, ಮಂಡಲಪಟ್ಟಿ ದುಬಾರೆ ಆನೆ ಶಿಬಿರ, ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನ ವೀಕ್ಷಣೆ ನಂತರ ಬೆಂಗಳೂರಿಗೆ ವಾಪಸ್ಸಾಗುವುದು.

ಸರ್ಕ್ಯೂಟ್ 5 (3 ದಿನದ ಪ್ರವಾಸ, ಒಬ್ಬರಿಗೆ 13,150 ರೂ., ಊಟ,ತಿಂಡಿ ಸೇರಿ): ಬೆಂಗಳೂರಿಂದ ಹೊರಟು ಜಾನಪದ ಲೋಕ, ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್, ಅರಮನೆ, ಜಗನ್ಮೋಹನ ಕಲಾ ಗ್ಯಾಲರಿ, ಸಿಲ್ಕ್ ಫ್ಯಾಕ್ಟರಿ, ರೈಲ್ವೆ ಮ್ಯೂಸಿಯಂ, ಕೆಆರ್‌ಎಸ್ ಬೃಂದಾವನದಲ್ಲಿ ಅಂದು ರಾತ್ರಿ ವಾಸ್ತವ್ಯ.

ಎರಡನೇ ದಿನ ಬೆಳಗ್ಗೆ ಚಾಮುಂಡಿ ಬೆಟ್ಟ, ಮೃಗಾಲಯ, ಶ್ರೀರಂಗಪಟ್ಟಣ, ಮೇಲುಕೋಟೆ, ಶ್ರವಣಬೆಳಗೊಳ, ಚನ್ನರಾಯಪಟ್ಟಣ, ಬೇಲೂರಿಗೆ ಭೇಟಿ ನೀಡಿ ಮಯೂರ ವೇಲಾಪುರ ಹೋಟೆಲ್‌ನಲ್ಲಿ ವಾಸ್ತವ್ಯ.

ಮೂರನೇ ದಿನ ಶ್ರೀ ಚೆನ್ನಕೇಶವ ದೇವಸ್ಥಾನ ವೀಕ್ಷಣೆ, ಹಳೇಬೀಡು ಹೊಯ್ಸಳೇಶ್ವರ ದೇವಸ್ಥಾನ, ಯಗಚಿ ಅಣೆಕಟ್ಟೆ, ಆದಿಚುಂಚನಗಿರಿ ಮಠ, ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಬಳಿಕ ಬೆಂಗಳೂರಿಗೆ ವಾಪಸ್ಸಾಗುವುದು.

ಸರ್ಕ್ಯೂಟ್ 6 (5ದಿನದ ಪ್ರವಾಸ, ಒಬ್ಬರಿಗೆ 19,200 ರೂ., ಊಟ, ತಿಂಡಿ ಸೇರಿ): ಬೆಂಗಳೂರಿನಿಂದ ಆರಂಭವಾಗುವ ಪ್ರವಾಸವು ಜಾನಪದ ಲೋಕ, ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್, ಅರಮನೆ, ಜಗನ್ಮೋಹನ ಕಲಾ ಗ್ಯಾಲರಿ, ಸಿಲ್ಕ್ ಫ್ಯಾಕ್ಟರಿ, ರೈಲ್ವೆ ಮ್ಯೂಸಿಯಂ, ಕೆಆರ್‌ಎಸ್ ಬೃಂದಾವನದಲ್ಲಿ ಅಂದು ರಾತ್ರಿ ವಾಸ್ತವ್ಯ.

ಎರಡನೇ ದಿನ ಚಾಮುಂಡಿ ಬೆಟ್ಟ, ಮೃಗಾಲಯ, ಕಾಕನ ಕೋಟೆ, ಭಾಗಮಂಡಲಗೆ ಭೇಟಿ ನೀಡಿದ ಬಳಿಕ ಅಲ್ಲಿನ ಮಯೂರ ತಲಕಾವೇರಿ ಹೋಟೆಲ್‌ನಲ್ಲಿ ವಾಸ್ತವ್ಯ.

ಮೂರನೇ ದಿನ ತಲಕಾವೇರಿ ದರ್ಶನ, ಅಬ್ಬೀಫಾಲ್ಸ್ / ಮಂಡಲ ಪಟ್ಟಿ, ದುಬಾರೆ ಆನೆ ಶಿಬಿರಕ್ಕೆ ಭೇಟಿ, ಯಗಚಿಯ ಹೋಟೆಲ್ ಮಯೂರದಲ್ಲಿ ವ್ಯಾಸ್ತವ್ಯ.

ನಾಲ್ಕನೇ ದಿನ ಬಾಬಾಬುಡನ್‌ಗಿರಿ, ಮುಳಯ್ಯನಗಿರಿ, ಭದ್ರಾ ವನ್ಯಜೀವಿಧಾಮ ರಾತ್ರಿ ಬೇಲೂರಿನ ಮಯೂರ ವೇಲಾಪುರಿಯಲ್ಲಿ ವಾಸ್ತವ್ಯ.

ಕಡೇ ದಿನ ಬೇಲೂರಿನ ಚೆನ್ನಕೇಶವ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನ, ಯಗಚಿ ಅಣೆಕಟ್ಟೆ, ಆದಿ ಚುಂಚನಗಿರಿ, ಯಡಿಯೂರು ಸಿದ್ದಲಿಂಗೇಶ್ವರ ದೇವಸ್ಥಾನ ನಂತರ ಬೆಂಗಳೂರಿಗೆ ವಾಪಸ್ಸಾಗುವುದು.



ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂದರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಸ್ತಿ ಪೊಲೀಸ್ (ತ)	4 ಪ್ರದರ್ಶನಗಳು
ಗಾಯಿತ್ರಿ	
---	---
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್ (ಹಿ)	3 ಪ್ರದರ್ಶನಗಳು
ಲಿಡೋ	
ಮಾಸ್ ಯಾತ್ರಾ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಧರ್ಮಂ (ಕ)	4 ಪ್ರದರ್ಶನಗಳು

ಮೈಸೂರು–ಟ್ಯುಟಿಕೋರಿನ್ ನಡುವೆ 2 ಟ್ರಿಪ್ ವಿಶೇಷ ರೈಲು

ಮೈಸೂರು, ಡಿ. 6 (ಆರ್‌ಕೆ)– ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿರ್ವಹಿಸಲು ರೈಲ್ವೆ ಮಂಡಳಿ ಮೈಸೂರು–ಟ್ಯುಟಿಕೋರಿನ್ ನಡುವೆ 2 ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಲು ನಿರ್ಧರಿಸಿದೆ.



ಮೈಸೂರು–ಟ್ಯುಟಿಕೋರಿನ್ ವಿಶೇಷ ಎಕ್ಸ್‌ಪ್ರೆಸ್ ರೈಲು 2025ರ ಡಿಸೆಂಬರ್ 23 ಮತ್ತು 27 ರಂದು (ಮಂಗಳವಾರ ಮತ್ತು ಶನಿವಾರ) ಸಂಜೆ 6.35 ಗಂಟೆಗೆ ಮೈಸೂರಿನಿಂದ ಹೊರಟು, ಮರುದಿನ ಬೆಳಗ್ಗೆ 11 ಗಂಟೆಗೆ ಟ್ಯುಟಿಕೋರಿನ್ ತಲುಪಲಿದೆ.

ಮರಳಿ ಸಂಚರಿಸುವ ರೈಲು ಸಂಖ್ಯೆ 06284: ಟ್ಯುಟಿಕೋರಿನ್ ಮೈಸೂರು ವಿಶೇಷ ಎಕ್ಸ್‌ಪ್ರೆಸ್ 2025ರ ಡಿಸೆಂಬರ್ 24 ಮತ್ತು 28 ರಂದು (ಬುಧವಾರ ಮತ್ತು ಭಾನುವಾರ) ಮಧ್ಯಾಹ್ನ 2 ಗಂಟೆಗೆ ಟ್ಯುಟಿಕೋರಿನ್‌ನಿಂದ ಹೊರಟು, ಮರುದಿನ ಬೆಳಿಗ್ಗೆ 7.45 ಗಂಟೆಗೆ ಮೈಸೂರು ತಲುಪಲಿದೆ.

ಈ ವಿಶೇಷ ರೈಲು ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಕೆಂಗೇರಿ, ಕೆ.ಎಸ್.ಆರ್. ಬೆಂಗಳೂರು, ಬೆಂಗಳೂರು ಕಂಟೋನ್‌ಮೆಂಟ್, ಹೊಸೂರು, ಧರ್ಮಪುರಿ, ಸೇಲಂ, ನಮಕ್ಕಲ್, ಕರೂರು, ದಿಂಡಿಗಲ್, ಮಧುರೈ, ವಿರುದುನಗರ, ಸತೂರ್, ಕೋವಿಲ್ಪಟ್ಟಿ ಮತ್ತು ಟುಟಿಮೇಲುರ್ ಸ್ಟೇಷನ್‌ಗಳಲ್ಲಿ ನಿಲುಗಡೆ ಇದೆ. ಈ ವಿಶೇಷ ರೈಲು 18 ಬೋಗಿಗಳನ್ನು ಒಳಗೊಂಡಿದ್ದು, ಇದರಲ್ಲಿ ಒಂದು ಎಸಿ 2–ಟಯರ್, 2 ಎಸಿ 3–ಟಯರ್, 9 ಸ್ಲೀಪರ್ ಕೋಚ್‌ಗಳು, 4 ಸಾಮಾನ್ಯ ದ್ವಿತೀಯ ವರ್ಗ ಬೋಗಿಗಳು ಮತ್ತು 2 ದ್ವಿತೀಯ ವರ್ಗ–ಸಾಮಾನು ಬ್ರೇಕ್ ವ್ಯಾನ್, ದಿವ್ಯಾಂಗನ ಬೋಗಿಗಳು ಸೇರಿವೆ.

ಭಾರತ ದರ್ಶಿತ್ವ ಟ್ರಸ್ಟ್‌ನಿಂದ ಚಿನ್ನಪುಟ್ಟಮ್ಮರಿಗೆ ನುಡಿ ನಮನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾರತ ದರ್ಶಿತ್ವ ಟ್ರಸ್ಟ್ ವತಿಯಿಂದ ಚಿನ್ನಪುಟ್ಟಮ್ಮರಿಗೆ ನುಡಿ ನಮನ ಸಲ್ಲಿಸಲಾಯಿತು.

ಮೈಸೂರು, ಡಿ.6(ಜಿಎ)–ಮೈಸೂರಿನ ಅಶೋಕಪುರಂ ಪ್ರದೇಶದಲ್ಲಿ ವಿವಿಧ ಸಮಾಜ ಸೇವಾ ಕಾರ್ಯಗಳಿಗೆ ಪ್ರೇರಕರಾಗಿದ್ದ ಚಿನ್ನಪುಟ್ಟಮ್ಮ ಅವರು ನಿಧನರಾದ ಹಿನ್ನೆಲೆಯಲ್ಲಿ ಭಾರತ ದರ್ಶಿತ್ವ ಟ್ರಸ್ಟ್ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸಲಾಯಿತು.

ಹಿರಿಯ ಮುಖಂಡ ವೆಂಕಟರಾಮ್ ಜೀ ಮಾತನಾಡಿ, ಅಶೋಕಪುರಂನ ಒಂದೊಂದೂ ಮನೆಯ ಬಗ್ಗೆಯೂ ಚರಿತ್ರೆಯನ್ನೇ ಬರೆಯಬಹುದಾಗಿದೆ. ಇವರು ಕಾಯಕಕ್ಕೆ ಹೆಸರಾದವರು. ಇದೇ ಹಾದಿಯಲ್ಲಿ ಚಿನ್ನಪುಟ್ಟಮ್ಮ ಸಹ ಜೀವನ ನಡೆಸಿದರು. ತಾವು ಐಷಾರಾಮಿ ಜೀವನ ನಡೆಸದೇ ಏನಾದೂ ಸಾಧನೆ ಮಾಡುತ್ತಿರುವ ಮಕ್ಕಳನ್ನು ಬೆಳೆಸಿದುದು ಸಹ ಇವರ ಸಾಧನೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಮಾತನಾಡಿ, ಇಂದು ಹಲವು ಬದುಕಿದ್ದೂ ಸತ್ತಂತಿದ್ದಾರೆ. ಕೆಲವು ಸತ್ತ ಮೇಲೂ ಬದುಕುತ್ತಾರೆ ಎಂಬುದಕ್ಕೆ ಚಿನ್ನಪುಟ್ಟಮ್ಮ ಸಾಕ್ಷಿ ಯಾಗಿದ್ದರು. ತಾವು ಅನಕ್ಷರಸ್ಥರಾಗಿದ್ದರೂ ಸಹಾ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡುವ ರೀತಿ ತಮ್ಮ ಪುತ್ರಿ ಡಾ.ಎಂ.ಕನ್ನಿಕಾ ಮೊದಲಾದವರನ್ನು ಬೆಳೆಸಿದ್ದಾರೆ ಎಂದರು.

ಚಿನ್ನಪುಟ್ಟಮ್ಮ ಅವರ ಹಿರಿಯ ಪುತ್ರಿ ಹಾಗೂ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ. ಕನ್ನಿಕಾ, ಯಶೋಧ ನಾರಾಯಣ್, ನಟರಾಜ್ ಮಹರ್ಷಿ, ಮೋಹನ್ ದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕೃತಿ ಬಿಡುಗಡೆ



ಇತ್ತೀಚೆಗೆ ಬನ್ನಿಮಂಟಪದ ಕ್ಯಾಥೋಲಿಕ್ ಕೇಂದ್ರದಲ್ಲಿ ನಡೆದ ತ್ರೈಮಾಸಿಕ ಸಭೆಯಲ್ಲಿ ಮೈಸೂರು ಧರ್ಮಕ್ಷೇತ್ರದ ಗುರು ಹಾಗೂ ಸಾಹಿತಿಗಳಾದ ಡಾ. ದಯಾನಂದ ಪ್ರಭು ಅವರು ಬರೆದು ಪ್ರಕಟಿಸಿರುವ 'ಪವಾಡ ಪುರುಷ : ಪಾದುವಾದಸಂತ ಅಂತೋಣಿ' ಕೃತಿಯನ್ನು ಧರ್ಮಾಧ್ಯಕ್ಷರಾದ ಫ್ರಾನ್ಸಿಸ್ ಸೆರಾವೊ ಬಿಡುಗಡೆ ಮಾಡಿದರು.

ಸಹಕಾರಿ ಕ್ಷೇತ್ರ ಕುರಿತ ಪ್ರಬಂಧ, ಚರ್ಚಾ ಸ್ಪರ್ಧೆ

ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಹಕಾರಿ ಕ್ಷೇತ್ರ ಕುರಿತ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು,ಡಿ.6(ಎಂಟಿವೈ)–ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಹಕಾರಿ ಕ್ಷೇತ್ರ ಕುರಿತ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ ಹಾಗೂ ಅಕ್ಕನ ಬಳಗ ಪ್ರೌಢಶಾಲೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜಿನ ಹಲವು ವಿದ್ಯಾರ್ಥಿಗಳು ಪಾಲ್ಗೊಂಡು ಸಹಕಾರಿ ಕ್ಷೇತ್ರದ ಮಹತ್ವದ ಬಗ್ಗೆ ತಮಗಿರುವ ಅರಿವನ್ನು ಪ್ರಸ್ತುತ ಪಡಿಸಿ ಗಮನ ಸೆಳೆದರು.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ರಾಷ್ಟ್ರದ ಅರ್ಥ ವ್ಯವಸ್ಥೆಯ ಬೆಳವಣಿಗೆಗಳಲ್ಲಿ ಸಹಕಾರಿ ವಲಯದ ಪಾತ್ರ' ವಿಷಯ ಕುರಿತು ಪ್ರಬಂಧ ಬರೆಯಲು ಅವಕಾಶ ನೀಡಲಾಗಿತ್ತು. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಯ ಹಲವು ವಿದ್ಯಾರ್ಥಿಗಳು ಪಾಲ್ಗೊಂಡು ಪ್ರಬಂಧ ಬರೆದು ಗಮನ ಸೆಳೆದರು.

ಪ್ರಬಂಧ ಸ್ಪರ್ಧೆಯಲ್ಲಿ ಹುಣಸೂರಿನ ಶಾಸ್ತ್ರಿ ಪಬ್ಲಿಕ್ ಶಾಲೆಯ ಸಾಕ್ಷಿ ಜೈನ್ ಪ್ರಥಮ, ಪಿರಿಯಾಪಟ್ಟಣದ ಎಸ್‌ಕೆಎಸ್‌ಟಿ ಬಾಲಕಿಯರ ಪ್ರೌಢಶಾಲೆಯ ಪಿ.ಆರ್.ಅನುಷ ದ್ವಿತೀಯ, ಡಿ. ಸಾಲುಂಡಿಯ ಸ್ಯಾಂಡಲ್ ರೋಸ್ ಕಾನ್ವೆಂಟ್‌ನ ಜಿ.ಯು.ಖುಷಿ ತೃತೀಯ ಬಹುಮಾನ ಪಡೆದು ಪ್ರಶಂಸೆಗೆ ಪಾತ್ರರಾದರು.

ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ 'ಬಡತನ ನಿರ್ಮೂಲನೆ, ಉದ್ಯೋಗ ಸೃಷ್ಟಿ, ಸಾಮಾಜಿಕ ನ್ಯಾಯ ವಿತರಣೆಗಳು ಸಹಕಾರಿ ವಲಯದಿಂದ ಮಾತ್ರವೇ ಜಾರಿಗೊಳಿಸಲು ಸಾಧ್ಯ' ವಿಷಯ ಕುರಿತು ಚರ್ಚಾ ಸ್ಪರ್ಧೆ ಆಯೋಜಿಸಲಾಗಿತ್ತು. ಚರ್ಚಾ ಸ್ಪರ್ಧೆಯಲ್ಲಿ ಪರ ಮತ್ತು ವಿರೋಧವಾಗಿ ಹಲವು ವಿದ್ಯಾರ್ಥಿಗಳು ಚರ್ಚೆ ಮಾಡಿ ಗಮನ ಸೆಳೆದರು.

ವಿಷಯದ ಪರವಾಗಿ ನಡೆದ ಸ್ಪರ್ಧೆಯಲ್ಲಿ ವಾಣಿವಿಲಾಸ ಪಿಯು ಕಾಲೇಜಿನ ಪಿ.ಅನ್ವಿತಾ ಗೌಡ ಪ್ರಥಮ, ಮಹಾರಾಣಿ ಪಿಯು ಕಾಲೇಜಿನ ವಿಜಯಲಕ್ಷ್ಮಿ ದ್ವಿತೀಯ ಬಹುಮಾನ ಪಡೆದರೆ, ವಿಷಯದ ವಿರೋಧವಾಗಿ ನಡೆದ ಸ್ಪರ್ಧೆಯಲ್ಲಿ ವಾಣಿವಿಲಾಸ ಪಿಯು ಕಾಲೇಜಿನ ಪಿ.ಇ.ಲತಾ ಪ್ರಥಮ, ತಿ.ನರಸೀಪುರದ ವಿದ್ಯೋದಯ ಬಾಲಕಿಯರ ಪಿಯು ಕಾಲೇಜಿನ ಚಂದ್ರಮ್ಮ ದ್ವಿತೀಯ ಬಹುಮಾನ ಪಡೆದರು.

ವಿಜೇತರಿಗೆ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್ ಬಹುಮಾನ ವಿತರಿಸಿ ಮಾತನಾಡಿ, ಸಹಕಾರ ಕ್ಷೇತ್ರ ಗ್ರಾಮೀಣ ಪ್ರದೇಶ ಜನರ ಹಾಗೂ ರೈತರಿಗೆ ವರದಾನವಾಗಿರುವ ಕ್ಷೇತ್ರವಾಗಿದೆ. ನಗರ ಪ್ರದೇಶದಲ್ಲೂ ಸಹಕಾರಿಗಳನ್ನು ಕಾಣಬಹುದಾಗಿದೆ. ವಿದ್ಯಾರ್ಥಿಗಳಾದಿಯಾಗಿ ಯುವ ಜನರು ಸಹಕಾರ ಕ್ಷೇತ್ರದ ಬಗ್ಗೆ ತಿಳಿದುಕೊಳ್ಳಬೇಕು. ಇತ್ತೀಚಿನ ವರ್ಷಗಳಲ್ಲಿ ಸಹಕಾರಿ ಕ್ಷೇತ್ರ ಏಳಿಗೆ ಸಾಧಿಸುತ್ತಿದೆ. ಹಾಲು ಉತ್ಪಾದನಾ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರ ಸಾಧನೆ ಮಾಡಿದೆ ಎಂದು ಅಭಿಪ್ರಾಯಪಟ್ಟರು.

ಡಿ.15, ಪೆನ್ಷನ್ ಅದಾಲತ್

ಮೈಸೂರು, ಡಿ.6– ಅಂಚೆ ಇಲಾಖೆ ವತಿಯಿಂದ ಡಿ.15 ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿಭಾಗದ ಅಂಚೆ ಇಲಾಖೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಪೆನ್ಷನ್ ಅದಾಲತ್ ಏರ್ಪಡಿಸಲಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ತಮ್ಮ ಅಹವಾಲುಗಳಿದ್ದಲ್ಲಿ, ಡಿ.13 ರೊಳಗೆ ಮೈಸೂರು ವಿಭಾಗದ ಅಂಚೆ ಇಲಾಖೆ ಹಿರಿಯ ಅಂಚೆ ಅಧೀಕ್ಷಕರ ಕಚೇರಿಗೆ ಸಲ್ಲಿಸಲು ಅವಕಾಶವಿರುತ್ತದೆ. ಇಚ್ಛೆಯುಳ್ಳ ಪಿಂಚಣಿದಾರರು ಅದಾಲತ್‌ನಲ್ಲಿ ಭಾಗವಹಿಸಬಹುದಾಗಿದೆ ಎಂದು ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.9, 10ರಂದು ನೀರು ವ್ಯತ್ಯಯ

ಮೈಸೂರು, ಡಿ.6(ಎಸ್‌ಪಿಎನ್)– ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2 ಮತ್ತು 3ನೇ ಹಂತ ಯಂತ್ರಾಗಾರಕ್ಕೆ ಡಿ.9 ರಂದು ಬೆಳಗ್ಗೆ 10ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವ ಹಿನ್ನೆಲೆಯಲ್ಲಿ ಡಿ.9 ಮತ್ತು 10ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಿದೆ.

ಹೀಗಾಗಿ ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1 ರಿಂದ 7, 20, 23, 38, 42, 45 ಹಾಗೂ 47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲು, ಮೇಟಗಳ್ಳಿ, ಲೋಕನಾಯಕ ನಗರ, ಬೃಂದಾವನ, ಒಂಟಿಕೊಪ್ಪಲು, ಪಡುವಾರಹಳ್ಳಿ, ಮಂಡಿ ಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ, ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ತಿಲಕ್ ನಗರ, ಬಡೇ ಮಕಾನ್, ಹಲೀಂ ನಗರ, ದೇವರಾಜ ಮೊಹಲ್ಲಾ ಭಾಗಶಃ ಎನ್.ಆರ್. ಮೊಹಲ್ಲಾ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿ ಪುರಂ, ಜನತಾನಗರ, ಕೆಎಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತರೆ ಪ್ರದೇಶಗಳಿಗೆ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಆಕರ್ಷಕ ನೃತ್ಯ ಪ್ರದರ್ಶನ



ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ ನಡೆದ ರೋಟರಿ ವೆಸ್ಟ್ ಶಾಲೆಯ 33ನೇ ವಾರ್ಷಿಕೋತ್ಸವ 'ನವ ಪಲ್ಲವ–2025' ಸಮಾರಂಭದಲ್ಲಿ ವಿದ್ಯಾರ್ಥಿಗಳು ಆಕರ್ಷಕ ನೃತ್ಯ ಪ್ರದರ್ಶಿಸಿದರು.

ದಲಿತರು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಕೇಳಬೇಕು

ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸಲಹೆ



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಶನಿವಾರ ಬಾಬಾ ಸಾಹೇಬ್ ಅಂಬೇಡ್ಕರ್‌ರವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಆಯೋಜಿಸಿದ್ದ ಬಹುತ್ವದ ಭಾರತವನ್ನು ಅಸ್ಥಿರಗೊಳಿಸುತ್ತಿರುವ ಧರ್ಮಾಂಧ ರಾಜಕಾರಣದ ವಿರುದ್ಧ ದಲಿತ ಸಂಘರ್ಷ ಸಮಿತಿ ಪ್ರತಿರೋಧ ಕುರಿತ ಸಮಾವೇಶವನ್ನು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೈಸೂರು,ಡಿ.6(ಬಿಎಲ್‌ಯು)– ಖಾಸಗಿ ಕ್ಷೇತ್ರದಲ್ಲೂ ದಲಿತರು ಮೀಸಲಾತಿ ಕೇಳಬೇಕು ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಇಂದು ಬಾಬಾ ಸಾಹೇಬ್ ಅಂಬೇಡ್ಕರ್‌ರವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಆಯೋಜಿಸಿದ್ದ 'ಬಹುತ್ವದ ಭಾರತವನ್ನು ಅಸ್ಥಿರಗೊಳಿಸುತ್ತಿರುವ ಧರ್ಮಾಂಧ ರಾಜಕಾರಣದ ವಿರುದ್ಧ ದಲಿತ ಸಂಘರ್ಷ ಸಮಿತಿ ಪ್ರತಿರೋಧ' ಕುರಿತ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಪಡೆಯಲಿಲ್ಲವೆಂದರೆ ದಲಿತ ಸಮುದಾಯದಲ್ಲಿ ನಿರುದ್ಯೋಗ ತಾಂಡವವಾಡುತ್ತದೆ ಎಂದು ಎಚ್ಚರಿಸಿದರು.

ಸರ್ಕಾರದಲ್ಲಿ ಶೇಕಡ 2 ರಷ್ಟು ಮಾತ್ರ ಉದ್ಯೋಗವಿದೆ. ಆದರೆ ಶೇಕಡ 98 ರಷ್ಟು ಉದ್ಯೋಗ ಖಾಸಗಿ ಕ್ಷೇತ್ರದಲ್ಲಿದೆ. ಈಗಂತೂ ವಿಧಾನಸೌಧ ಸೇರಿದಂತೆ ಇತರೆಡೆ ಹೊರ ಗುತ್ತಿಗೆಯಡಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಇಲ್ಲಿ ಯಾವುದೇ ಮೀಸಲಾತಿ ಸೌಲಭ್ಯವಿಲ್ಲ. ಈ ಹಿನ್ನೆಲೆಯಲ್ಲಿ ದಲಿತರು ಖಾಸಗಿ ಕ್ಷೇತ್ರದಲ್ಲಿ ಉದ್ಯೋಗದ ಮೀಸಲಾತಿ ಕೇಳಬೇಕು ಎಂದರು.

ಮೀಸಲಾತಿ ಪಡೆಯುವವರನ್ನು ಗೌರ್ನಮೆಂಟ್ ಬ್ರಾಹ್ಮಣರು ಎಂದು ಗೇಲಿ ಮಾಡುತ್ತಾರೆ. ದಲಿತರಿಗೆ ಏನಾದರೂ ಕೊಡುಗೆ ನೀಡಿದರೆ ಹಾವಿಗೆ ಹಾಲೆರೆದಂತೆ ಎಂದು ಟೀಕಿಸುತ್ತಾರೆ. ಆದರೆ ಇದಕ್ಕೆ ತಲೆ ಕಡೆಸಿಕೊಳ್ಳಬಾರದು. ಮೀಸಲಾತಿ ಪಡೆಯುವುದರಲ್ಲಿ ಕೀಳರಮೆ ಬೇಡ, ಮೀಸಲಾತಿ ನಮ್ಮ ಹಕ್ಕು ಎಂದು ಭಾವಿಸಿ ಈ ಸೌಲಭ್ಯ ಪಡೆಯಬೇಕು. ಆದರೆ ಮೀಸಲಾತಿಯಿಂದ ಆರ್ಥಿಕ ಸಮಾನತೆ ದೊರೆಯಬಹುದು. ಆದರೆ ಸಾಮಾಜಿಕ ಸಮಾನತೆ ದೊರೆಯುವುದಿಲ್ಲ ಎಂದು ದಿನೇಶ್ ಅಮೀನ್ ಮಟ್ಟು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯದ ಒಟ್ಟು ಬಜೆಟ್ 4.5 ಲಕ್ಷ ಕೋಟಿ. ಆದರೆ ಅಂಬಾನಿ ಒಬ್ಬರ ಆಸ್ತಿ 9.5 ಕೋಟಿ, ವಾರ್ಷಿಕವಾಗಿ 8.5 ಲಕ್ಷ ಕೋಟಿ ಇವರ ವಹಿವಾಟು ನಡೆಯುತ್ತದೆ. ಕರ್ನಾಟಕ ಬಜೆಟ್ ಮೀರಿಸುವಷ್ಟು ಇಂತಹ ಶ್ರೀಮಂತರಲ್ಲಿ ಹಣವಿದೆ. ಈ ಮೂಲಕ ಈ ದೇಶದ ಶೇಕಡ 98 ರಷ್ಟು ಸಂಪತ್ತು ಶೇಕಡ 10 ರಷ್ಟಿರುವ ಶ್ರೀಮಂತರಲ್ಲಿದೆ. ಉಳಿದ ಶೇಕಡ 2 ರಷ್ಟು ಆದಾಯಕ್ಕಾಗಿ ಇಡೀ ದೇಶದ ಶೇಕಡ 98 ರಷ್ಟು ಜನರು ಹೊಡೆದಾಡಬೇಕಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರು ಮನುಸ್ಮೃತಿ ಪುಸ್ತಕ ಸುಟ್ಟು ಹಾಕಿದರು. ಅಂದೇ ಬಹುತ್ವದ ಭಾರತವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು ಆರಂಭವಾಯಿತು. ಈ ಮೂಲಕ ಅಂಬೇಡ್ಕರ್ ಅವರ ಹೋರಾಟವನ್ನು ವಿಫಲ ಮಾಡುವುದು ಮನುವಾದಿಗಳ ಮೂಲಕ ಉದ್ದೇಶವಾಗಿತ್ತು. 1925 ರಲ್ಲಿ ಆರ್ ಎಸ್‌ಎಸ್ ಸ್ಥಾಪನೆಯಾದ ದಿನವೇ ಬಹುತ್ವವನ್ನು ಇವರು ಅಸ್ಥಿರಗೊಳಿಸುತ್ತಾರೆ ಎಂದು ಅಂಬೇಡ್ಕರ್ ಅರಿತಿದ್ದರು ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಅಂಬೇಡ್ಕರ್ ಅವರು ಸುಟ್ಟ ಮನುಸ್ಮೃತಿ ಬೂದಿಯಿಂದ ಮೇಲೆದ್ದು ಬಂದವರು ಇಂದು ಬಹುತ್ವವನ್ನು ಅಸ್ಥಿರಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಇಂದು ಹಿಂದುತ್ವ ರಾಜಕಾರಣ ಬಹುತ್ವ ರಾಜಕಾರಣವನ್ನು ನುಂಗಿ ಹಾಕುವ ಷಡ್ಯಂತ್ರ ನಡೆಯುತ್ತಿದೆ. ನೂರು ವರ್ಷದ ಸಂಭ್ರಮ ಆಚರಣೆ ಮಾಡುತ್ತಿರುವ ಆರ್ ಎಸ್‌ಎಸ್ ಷಡ್ಯಂತ್ರ ನೋಡುತ್ತಾ ಕೇಕೆ ಹಾಕುತ್ತಾ ನಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಮೂಲಕ ಹಿಡೆನ್ ಅಜೆಂಡಾ ಹೊಂದಿರುವ ಆರ್ ಎಸ್‌ಎಸ್ ನವರು ಸೂತ್ರ ಹಿಡಿದು ಆಟವಾಡಿಸುತ್ತಿದ್ದಾರೆ. ನಾವು ಅವರೇಳಿದಂತೆ ಪಾತ್ರ ಮಾಡುತ್ತಿದ್ದೇವೆ. ಇನ್ನು ಮುಂದಾದರೂ ಇದರಿಂದ ಎಚ್ಚೆತ್ತುಕೊಳ್ಳಬೇಕು. ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕು. ನಮ್ಮ ಹಕ್ಕುಗಳಿಗಾಗಿ ನಿರಂತರ ಹೋರಾಟ ಮಾಡಬೇಕು. ಮೀಸಲಾತಿ ಪಡೆಯುವ ಹೋರಾಟದಿಂದ ಹಿಂದೆ ಸರಿಯಬಾರದು ಎಂದು ದಿನೇಶ್ ಅಮೀನ್ ಮಟ್ಟು ಹೇಳಿದರು.

ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಎಸ್.ತುಕಾರಾಂ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಡುವಾರಹಳ್ಳಿಯಲ್ಲಿ 58ನೇ ವರ್ಷದ ಹನುಮ ಜಯಂತಿ

ಸವಿತಕ್ಕ ಮತ್ತು ತಂಡದಿಂದ ಭಕ್ತಿ, ಭಾವಗೀತೆಗಳ ರಸದೌತಣ



ಪಡುವಾರಹಳ್ಳಿಯಲ್ಲಿ ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಯುವಕರ ಸಂಘವು ಏರ್ಪಡಿಸಿರುವ ಹನುಮ ಜಯಂತಿಯಲ್ಲಿ ಅಂಶಿ ಪ್ರಸನ್ನಕುಮಾರ್, ನಾಗರಾಜ ವಿ. ಬೈರಿ ಹಾಗೂ ಎಸ್. ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ. 6– ವಿನಾಯಕ ನಗರದ ನಾಲ್ಕನೇ ಮುಖ್ಯ ರಸ್ತೆಯಲ್ಲಿ ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಯುವಕರ ಸಂಘದ ವತಿಯಿಂದ 58ನೇ ವರ್ಷದ ಶ್ರೀ ಹನುಮ ಜಯಂತಿಯನ್ನು ಕಳೆದ ನಾಲ್ಕು ದಿನಗಳ ಕಾಲ ಸಂಭ್ರಮದಿಂದ ಆಚರಿಸಲಾಗುತ್ತಿದೆ.

ಶ್ರೀ ಆಂಜನೇಯಮೂರ್ತಿಯನ್ನು ಪ್ರತಿಷ್ಠಾಪಿಸಿ, ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಮೊದಲ ದಿನ ಹರಿಕಥಾ ವಿದ್ವಾನ್ ಶಿವಾರ ಉಮೇಶ್ ಅವರಿಂದ ಶ್ರೀ ವೀರಾಂಜನೇಯ ಹರಿಕಥೆ, ಎರಡನೇ ದಿನ ಶಿವ ಕುಮಾರ್ ಶಾಸ್ತ್ರಿ ಮತ್ತು ಕಲಾತಂಡದಿಂದ ಶ್ರೀ ಮಹದೇಶ್ವರ ಸ್ವಾಮಿ ಹರಿಕಥೆ, ಮೂರನೇ ದಿನ ಜಾನಪದ ಎ ಗ್ರೇಡ್ ಕಲಾವಿದ ಗುರುರಾಜ್ ಕಲಾತಂಡದಿಂದ ಧರೆಗೆ ದೊಡ್ಡವರಾದ ಸಿದ್ದಪ್ಪಾಜಿ ಹರಿಕಥೆ ಏರ್ಪಡಿಸಲಾಗಿತ್ತು.

ನಾಲ್ಕನೇ ದಿನವಾದ ಶುಕ್ರವಾರ ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕಿ ಬೆಂಗಳೂರಿನ ಸವಿತಕ್ಕ ಮತ್ತು ತಂಡದವರು ಭಕ್ತಿ ಹಾಗೂ ಜಾನಪದ ಗೀತೆಗಳನ್ನು ಹಾಡಿ ಸಭಿಕರನ್ನು ರಂಜಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ. ಬೈರಿ, ಅಲೆಯನ್ಸ್ ಜಿಲ್ಲಾ ರಾಜ್ಯಪಾಲ ಎಸ್. ವೆಂಕಟೇಶ್ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕೃಷ್ಣಪ್ಪ, ಮಂಜುನಾಥ್, ಎನ್. ಬೆಟ್ಟೇಗೌಡ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ರೇರಾ ಕಾಯ್ದೆಗೆ ಅಗತ್ಯವಿರುವ ತಿದ್ದುಪಡಿಗೆ ರೂಪುರೇಷೆ ಸಿದ್ಧಪಡಿಸಿದ್ದೇವೆ

ರೇರಾ ಕಾಯ್ದೆ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಕೆ-ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಮಾಹಿತಿ



ಮೈಸೂರಿನ ವಿಶ್ವೇಶ್ವರನಗರದ ಎಂಬಿಸಿಟಿ ಹಾಲ್‌ನಲ್ಲಿ ರೇರಾ ಕಾಯ್ದೆ ಕುರಿತು ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಕೆ-ರೇರಾ ಅಧ್ಯಕ್ಷ ರಾಕೇಶ್ ಸಿಂಗ್ ಉದ್ಘಾಟಿಸಿದರು.

ಮೈಸೂರು,ಡಿ.6(ಪಿಎಂ)– ರೇರಾ ಕಾಯ್ದೆಗೆ ತಿದ್ದುಪಡಿ ಅಗತ್ಯವೆಂಬುದು ಬಹುತೇಕರ ಅರಿವಿಗೆ ಬಂದಿದೆ. ಅಂತೆಯೇ ಅಗತ್ಯವಿರುವ ತಿದ್ದುಪಡಿಗಳ ಬಗ್ಗೆ ನಾವು ಮೂಲ ರೂಪುರೇಷೆ ಸಿದ್ಧಪಡಿಸಿದ್ದೇವೆ ಎಂದು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ಕೆ–ರೇರಾ) ಅಧ್ಯಕ್ಷ ರಾಕೇಶ್ ಸಿಂಗ್ ತಿಳಿಸಿದರು.

ಮೈಸೂರಿನ ವಿಶ್ವೇಶ್ವರನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಎಂಬಿಸಿಟಿ ಹಾಲ್‌ನಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ಹಾಗೂ ಕ್ರೆಡಾಯ್ ಮೈಸೂರು ಘಟಕದ (ಕಾನ್‌ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಆಫ್ ಇಂಡಿಯಾ) ಜಂಟಿ ಆಶ್ರಯದಲ್ಲಿ ಬಡಾವಣೆ ನಿರ್ಮಾಣಗಾರರು, ಡೆವಲಪರ್‌ಗಳು ಸೇರಿದಂತೆ ರಿಯಲ್ ಎಸ್ಟೇಟ್ ಕ್ಷೇತ್ರದವರಿಗಾಗಿ ರೇರಾ ಕಾಯ್ದೆ ಕುರಿತು ಶನಿವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯ್ದೆ ತಿದ್ದುಪಡಿ ಬಗ್ಗೆ ನಿಮ್ಮಲ್ಲೇನಾದರೂ ಚಿಂತೆಗಳಿದ್ದರೆ, ತಿಳಿಸಬಹುದು. ಸಮರ್ಪಕವಾಗಿದ್ದರೆ ಅಳವಡಿಸಲು ಸಾಧ್ಯವಾಗಲಿದೆ. ನಿಮ್ಮ ಸಹಕಾರದೊಂದಿಗೆ ಶೀಘ್ರದಲ್ಲೇ ಎಲ್ಲವನ್ನೂ ಸುಧಾರಣೆಗೆ ತರಲಿದ್ದೇವೆ. ಕಳೆದ ಏಳೆಂಟು ವರ್ಷಗಳ ಹಿಂದೆ ರೂಪಿಸಲಾದ ಸದರಿ ಕಾಯ್ದೆಗೆ ಕೆಲವು ತಿದ್ದುಪಡಿಸಗಳು ಬೇಕೆಂದು ನಮ್ಮಲ್ಲಿ ಬಹುತೇಕರು ಅರಿತುಕೊಂಡಿದ್ದಾರೆ. ಯಾವುದೇ ಕಾಯ್ದೆಯಾದರೂ ಬಲದಾಗುವ ಕಾಲಕ್ಕೆ ಅನುಗುಣವಾಗಿ ತಿದ್ದುಪಡಿಗಳು ಅಗತ್ಯವಾಗುತ್ತವೆ ಎಂದರು.

ಭಾರತದ ಜಿಡಿಪಿಯಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದ ಕೊಡುಗೆ ವರ್ಷದಿಂದ ವರ್ಷಕ್ಕೆ ಶೇ.2ರಿಂದ 3ರಷ್ಟು ಹೆಚ್ಚುತ್ತಿದ್ದು, ಪ್ರಸ್ತುತ ಅಂದಾಜು ಶೇ.12ರಿಂದ 13ರಷ್ಟು ಇದೆ. ದೇಶದಲ್ಲಿ ಕೃಷಿಯ ನಂತರ ಎರಡನೇ ಅತಿ ದೊಡ್ಡ ಉದ್ಯೋಗದಾತ ವ್ಯವಸ್ಥೆಯನ್ನು ರಿಯಲ್ ಎಸ್ಟೇಟ್ ಕ್ಷೇತ್ರ ಹೊಂದಿದೆ. ನೇರ ಹಾಗೂ ಪರೋಕ್ಷವಾಗಿ ಕೋಟ್ಯಾಂತರ ಜನರಿಗೆ ಉದ್ಯೋಗ ಕಲ್ಪಿಸುತ್ತಿದೆ. ನಗರೀಕರಣದ ಬೆನ್ನೆಲುಬಾಗಿರುವ ಈ ವಲಯವು ಸಾಮಾನ್ಯ ಭಾರತೀಯರ ಅತ್ಯಂತ ದೊಡ್ಡ ಕನಸಾದ ಸ್ವಂತ ಮನೆ ಎಂಬ ಆಕಾಂಕ್ಷೆ ಪೂರೈಸುತ್ತಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಬಡಾವಣೆಗಳ ಹಸ್ತಾಂತರ, ಇ–ಖಾತೆ ಮಾಡಿಸುವುದು, ಮೈಸೂರು ನಗರಪಾಲಿಕೆಯನ್ನು ಗ್ರೇಡ್–1 ಪಾಲಿಕೆಯಾಗಿ ಪರಿವರ್ತಿಸುವುದು ಸರ್ಕಾರದಿಂದ ಕೈಗೊಳ್ಳಲಾದ ಪ್ರಮುಖ ನಿರ್ಧಾರಗಳಾಗಿದ್ದು, ಇದರಿಂದ ಕಳೆದ ಒಂದೂವರೆ ವರ್ಷದಲ್ಲಿ ಜಿಲ್ಲೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹಿನ್ನಡೆಯಾಗಿದೆ. ಇಷ್ಟು ಹಿನ್ನಡೆಯ ನಡುವೆಯೂ ಪ್ರತಿ ವರ್ಷ 10ರಿಂದ 15 ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸುತ್ತಿರುವುದು ಅಚ್ಚರಿಯ ಸಂಗತಿ ಎಂದರು.

25 ವರ್ಷಗಳ ಹಿಂದೆ ಅಭಿವೃದ್ಧಿಪಡಿಸಿದ ಬಡಾವಣೆಗಳು ಹಸ್ತಾಂತರಗೊಳ್ಳದ ಕಾರಣಕ್ಕೆ ನಾಗರಿಕರಿಗೆ ಮೂಲ ಸೌಕರ್ಯಗಳನ್ನು ನೀಡಲು ಸಾಧ್ಯವಾಗಿರಲಿಲ್ಲ. ಹೀಗಾಗಿ ನಾನಾ ಕಾರಣಗಳಿಂದ ವರ್ಗಾವಣೆಯಾಗದೇ ಮುಡಾ ಸುಪರ್ದಿನಲ್ಲಿದ್ದ 1 ಸಾವಿರಕ್ಕೂ ಹೆಚ್ಚು ಬಡಾವಣೆ ಹಾಗೂ 1 ಲಕ್ಷ ಖಾತೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಲಾಯಿತು. ಇದರಿಂದ ಇತ್ತೀಚೆಗೆ ನಾನಾ ಅನುಕೂಲಗಳಾಗಿವೆ ಎಂದು ತಿಳಿಸಿದರು.

ಕೆ–ರೇರಾ ಕಾರ್ಯದರ್ಶಿ ಡಾ.ಹೆಚ್.ಆರ್. ಶಿವಕುಮಾರ್ ಪಿಪಿಟಿ ಪ್ರಸ್ತುತಿ ಮೂಲಕ ರೇರಾ ಕಾಯ್ದೆ ಹಾಗೂ ರಿಯಲ್ ಎಸ್ಟೇಟ್ ವಲಯದ ಕುರಿತು ಮಾಹಿತಿ ನೀಡಿದರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕ್ರೆಡಾಯ್ ಮೈಸೂರು ಘಟಕದ ಅಧ್ಯಕ್ಷ ಹರೀಶ್ ಶೆಣೈ, ಕಾರ್ಯದರ್ಶಿ ನಾಗರಾಜ್ ವಿ.ಭೈರಿ ಮತ್ತಿತರರು ಹಾಜರಿದ್ದರು.

ವಿಶೇಷಚೇತನರ ರ್‍ಯಾಲಿ



ಮುಖ್ಯಮಂತ್ರಿ ಪಟ್ಟದ ಆಟದ ನಡುವೆ ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ವಿಶೇಷ ಚೇತನರು ಶನಿವಾರ ತಮ್ಮ ವಿಶೇಷ ವಾಹನಗಳಲ್ಲೇ ರ್‍ಯಾಲಿ ನಡೆಸಿ, ಆಗ್ರಹಿಸಿದರು.

ಉಚಿತ ಓರಿಯಂಟೇಶನ್ ಕಾರ್ಯಕ್ರಮ

ಮೈಸೂರು, ಡಿ.6–ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ GPSTR/HSTRನಲ್ಲಿ ಶಾಲಾ ಶಿಕ್ಷಕರ 18,500ಕ್ಕಿಂತಲೂ ಹೆಚ್ಚು ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಸದ್ಯದಲ್ಲಿ ಪ್ರಕಟಗೊಳ್ಳಲಿದ್ದು, KVS ಹಾಗೂ ನವೋದಯ ಶಾಲಾ ಶಿಕ್ಷಕರ 14,967ಕ್ಕಿಂತ ಅಧಿಕ ಹುದ್ದೆಗಳಿಗೆ ಕೇಂದ್ರ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಭರ್ತಿ ಮಾಡುವುದರಿಂದ, ಈ ಸಂಬಂಧ ಒಂದು ದಿನದ ಉಚಿತ ಓರಿಯಂಟೇಶನ್ ಕಾರ್ಯಕ್ರಮವನ್ನು ಡಿ.10ರಂದು ಸಂಜೆ 5 ಗಂಟೆಗೆ ಕೃಷಿಕ ಸರ್ವೋದಯ ಫೌಂಡೇಷನ್ (ರಿ.), ಕೃಷಿಕ್ ಭವನ ಸಿ.ಎ.–25, ಡಾ|| ಕೆ.ಎಸ್.ತಿಮ್ಮಯ್ಯ ರಸ್ತೆ ವಿಜಯನಗರ 2ನೇ ಹಂತ, ಮೈಸೂರು ಇಲ್ಲಿ ಅನುಭವವುಳ್ಳ ನುರಿತ ವಿಷಯ ತಜ್ಞರಿಂದ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಹೆಸರನ್ನು ಶೈಕ್ಷಣಿಕ ಸಂಯೋಜಕರಾದ ಶ್ರೀಮತಿ ಎಂ.ವಿ.ಜ್ಯೋತಿ ಅವರಲ್ಲಿ ದೂರವಾಣಿ ಸಂಖ್ಯೆ: 0821–2301564/8296031570 ನೋಂದಾಯಿಸಿಕೊಳ್ಳುವುದು. ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯ ಸೌಲಭ್ಯವಿದೆ.

ಕಾರವಾರ ಜೈಲಲ್ಲಿ ಸಿಬ್ಬಂದಿ ಮೇಲೆ ಕೈದಿಗಳಿಂದ ಹಲ್ಲೆ; ಆಸ್ಪತ್ರೆಗೆ ದಾಖಲು



ಕಾರವಾರ: ಮಾದಕ ವಸ್ತುಗಳನ್ನು ಜೈಲಿನಲ್ಲಿ ಬಿಡದೆ, ಕಠಿಣ ನಿಯಮಗಳನ್ನು ಕಡ್ಡಾಯ ಪಾಲನೆ ಮಾಡಿದ್ದಕ್ಕೆ ಜೈಲರ್ ಸೇರಿದಂತೆ ಮೂವರು ಸಿಬ್ಬಂದಿ ಮೇಲೆ ಕೈದಿಗಳು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಕಾರವಾರ ಜಿಲ್ಲಾ ಕಾರಾಗೃಹದಲ್ಲಿ ಶನಿವಾರ ನಡೆದಿದೆ.

ಮಂಗಳೂರು ಮೂಲದ ರೌಡಿ ಶೀಟರ್‌ಗಳಾದ ಮೊಹ್ಮದ್ ಅಬ್ದುಲ್ ಫಯಾನ್ ಹಾಗೂ ಕೌಶಿಕ ನಿಹಾಲ್ ಹಲ್ಲೆ ನಡೆಸಿದ ಆರೋಪಿಗಳಾಗಿದ್ದಾರೆ. ಹಲ್ಲೆ ಹಿನ್ನೆಲೆಯಲ್ಲಿ ಜೈಲರ್ ಹಾಗೂ ಸಿಬ್ಬಂದಿ ಕಾರವಾರ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ತಿಳಿದುಬಂದಿದೆ. ಮಂಗಳೂರು ಜೈಲಿನಲ್ಲಿ ಹೆಚ್ಚುವರಿಯಾಗಿದ್ದ ಆರೋಪಿಗಳನ್ನು ಕಾರವಾರಕ್ಕೆ ಸ್ಥಳಾಂತರ ಮಾಡಲಾಗಿತ್ತು. ಈ ನಡುವೆ ಕಳೆದ ಕೆಲ ದಿನಗಳಿಂದ ಮಾದಕ ಪದಾರ್ಥಗಳನ್ನು ಜೈಲಿನಲ್ಲಿ ಸಂಪೂರ್ಣವಾಗಿ ನಿರ್ಬಂಧಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕೈದಿಗಳು ಕಾರಾಗೃಹ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ಘಟನೆ ಬೆನ್ನಲ್ಲೇ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005.

ಸಂಖ್ಯೆ:ಮೈಅಪ್ರಾ:ನಯೋ:ಶಾ:ಭೂಉಬ:ನಯೋ–1: 2025–26 ದಿನಾಂಕ: 06–12–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಭುಗತಹಳ್ಳಿ ಗ್ರಾಮದ ಸ.ನಂ 102/1 ರ 01 ಎಕರೆ–27ಗುಂಟೆ ವಿಸ್ತೀರ್ಣದ ಜಮೀನನ್ನು, ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ತಿಲಕ್ ತೊಳಸಿ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



LAND IN QUESTION

ಸಹಿ/– ನಗರ ಯೋಜಕ ಸದಸ್ಯರು,
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.